ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 14 । ಸಂಚಿಕೆ 31 । ಜುಲೈ 27–ಆಗಸ್ಟ್ 2 2020 । ಪುಟ 16 । ರೂ. 10

Web : www.janashakthi.co.in e-mail : js_weekly@ya





ಕ್ಯಾಪ್ಟನ್ ಲಕ್ಷ್ಮೀ ಸೆಹಗಲ್ ನೆನಪಿನ ದಿನ ಜುಲೈ 23



ಇಐಎ – 2020 ಪರಿಸರ ರಕ್ಷಣೆಗಾಗಿ ಅಲ್ಲ!



ಈಗ ಸಹಕಾರಿ ಬ್ಯಾಂಕುಗಳ ಖಾಸಗೀಕರಣಕ್ಕೆ ಸುಗ್ರೀವಾಜ್ಞೆ



ರಾಜಸ್ತಾನ ಕಾದಾಟ ಮತ್ತು ಬಿಜೆಪಿಯ ಮತ್ತೊಂದು ಆಟ



ಕೊರೋನಾ ಭ್ರಷ್ಟಾಚಾರ ನ್ಯಾಯಾಂಗ ತನಿಖೆಯಾಗಲಿ

ರೈತ-ವಿರೋಧಿ, ಕಾರ್ಮಿಕ-ವಿರೋಧಿ ಧೋರಣೆಗಳಿಗೆ ರೈತ-ಕಾರ್ಮಿಕ-ಕೃಷಿಕೂಲಿಕಾರರ ದೇಶವ್ಯಾಪಿ ಜಂಟಿ ಪ್ರತಿಭಟನೆ

ಆಗಸ್ಟ್ 9ರಂದು 'ಭಾರತ ಉಳಿಸಿ ದಿನಾಚರಣೆ'

–ಕಾರ್ಮಿಕ ಸಂಘಟನೆಗಳ ಜಂಟಿ ವೇದಿಕೆಯ ಕರೆ

ದುಡಿಮೆಗಾರರ ಹಕ್ಕುಗಳ ಬಗ್ಗೆ ಗೌರವ,ಸಮಸ್ಯೆಗಳ ಬಗ್ಗೆ ಕಾಳಜಿ ಇಲ್ಲದ ಸರಕಾರದೊಂದಿಗೆ ಅಸಹಕಾರ

ಆಗಸ್ಟ್ 9 ನ್ನು "ಭಾರತ ಉಳಿಸಿ ದಿನ'ವಾಗಿ ಆಚರಿಸಬೇಕು ಎಂದು ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಮತ್ತು ವಿವಿಧ ವಲಯಗಳ ನೌಕರರು ಮತ್ತು ಕಾರ್ಮಿಕರ ಅಖಿಲ ಭಾರತ ಒಕ್ಕೂಟಗಳ ಜಂಟಿ ವೇದಿಕೆ ಕರೆ ನೀಡಿದೆ.

ಆಗಸ್ಟ್ 18 ಕಲ್ಲಿದ್ದಲು ಕಾರ್ಮಿಕರ ಇನ್ನೊಂದು ಮುಷ್ಕರ ನಡೆಯಲಿದ್ದು ಅದಕ್ಕೆ ಸೌಹಾರ್ದ ವ್ಯಕ್ತಪಡಿಸಿ ಕಾರ್ಯಾಚರಣೆ ನಡೆಸಬೇಕು. ಆಗಸ್ಟ್ 9ರ ದೇಶವ್ಯಾಪಿ ಪ್ರತಿಭಟನೆಯ ಮುನ್ನಾದಿನ, ಆಗಸ್ಟ್ 7–8ರಂದು ಸ್ಕೀಮ್ ಕಾರ್ಮಿಕರ ಎರಡು ದಿನಗಳ ಮುಷ್ಕರ ನಡೆಯಲಿದ್ದು ಅದಕ್ಕೂ ಜಂಟಿ ವೇದಿಕೆ ಸೌಹಾರ್ದವನ್ನು ವ್ಯಕ್ತಪಡಿಸಿದೆ.

ರಕ್ಷಣಾ ವಲಯ ಮತ್ತು ರೈಲ್ವೆ ವಲಯದಲ್ಲೂ ಮುಷ್ಕರ/ ಕಾರ್ಯಾಚರಣೆಗಳಿಗೆ ಸಿದ್ಧತೆಗಳು ಆರಂಭವಾಗಿವೆ ಎಂದೂ ಜಂಟಿ ವೇದಿಕೆ ತಿಳಿಸಿದೆ.

ಜುಲೈ 3ರ ಯಶಸ್ವಿ ಅಖಿಲ ಭಾರತ ಪ್ರತಿಭಟನಾ ದಿನಾಚರಣೆಯ ನಂತರ ಜುಲೈ 8ರಂದು ಎ.ಐ.ಟಿ.ಯು.ಸಿ., ಸಿ.ಐ.ಟಿ.ಯು., ಐ.ಎನ್.ಟಿ.ಯು.ಸಿ., ಹೆಚ್.ಎಂ.ಎಸ್., ಎ.ಐ.ಯು.ಟಿ.ಯು.ಸಿ., ಟಿ.ಯು.ಸಿ.ಸಿ., ಎಸ್.ಇ.ಡಬ್ಲ್ಯು.ಎ., ಎ.ಐ.ಸಿ.ಸಿ.ಟಿ.ಯು., ಯು.ಟಿ.ಯು.ಸಿ. ಮತ್ತು ಎಲ್.ಪಿ.ಎಫ್.ನ ಮುಖಂಡರು ಸಭೆ ಸೇರಿದರು. ನಂತರ ಜುಲೈ 18ರಂದು ಈ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಮತ್ತು ವಿವಿಧ ವಲಯಗಳ ರಾಷ್ಟ್ರೀಯ ಸಂಘಗಳು ಮತ್ತು ಒಕ್ಕೂಟಗಳ ಮುಖಂಡರು ಸಭೆ ಸೇರಿ ಜುಲೈ 3ರಂದು ದೇಶಾದ್ಯಂತ ಸುಮಾರು ಒಂದು ಲಕ್ಷ ಕೆಲಸದ ಸ್ಥಳಗಳಲ್ಲಿ, ಯೂನಿಯನ್ ಕಚೇರಿಗಳಲ್ಲಿ, ಬೀದಿಗಳಲ್ಲಿ, ರಸೆಗಳಲ್ಲಿ ನಡೆದ ಸರಕಾರದ ಕಾರ್ಮಿಕ-ವಿರೋಧಿ, ರೈತ-ವಿರೋಧಿ, ಜನ-ವಿರೋಧಿ ಮತ್ತು ರಾಷ್ಟ್ರ-ವಿರೋಧಿ ಧೋರಣೆಗಳಿಗೆ ಅಸಹಕಾರ ಮತ್ತು ಧಿಕ್ಕಾರದ ಕಾರ್ಯಾಚರಣೆಯನ್ನು ಮುಂದುವರೆಸಲು ಕಾರ್ಮಿಕ ವರ್ಗಕ್ಕೆ ಕರೆ ನೀಡಿದ್ದಾರೆ.

ಕಾರ್ಮಿಕ ಸಂಘಟನೆಗಳ ಈ ಜಂಟಿ ವೇದಿಕೆ ಜುಲೈ 2ರಿಂದ 4ರ ವರೆಗೆ ಯಶಸ್ವಿ ಮುಷ್ಕರ ನಡೆಸಿದ ಕಲ್ಲಿದ್ದಲು ಕಾರ್ಮಿಕರನ್ನು ಅಭಿನಂದಿಸುತ್ತ ಅಂದು ಕಲ್ಲಿದ್ದಲು ಉದ್ದಿಮೆ ಸಂಪೂರ್ಣವಾಗಿ ಸ್ಥಗಿತಗೊಂಡಿತು ಎಂದಿದೆ. ಖಾಸಗಿ ವಾಣಿಜ್ಯ ಗಣಿಗಾರಿಕೆಗೆ ಕಲ್ಲಿದ್ದಲು ಗಣಿಗಳ ಹರಾಜಿಗೆ ಅರ್ಜಿ ಸಲ್ಲಿಸುವ ಕೊನೆಯ ದಿನವಾದ ಆಗಸ್ಟ 18ರಂದು ಇನ್ನೊಂದು ಮುಷ್ಕರ ನಡೆಸಲು ಕಲ್ಲಿದ್ದಲು ಕಾರ್ಮಿಕರ ಸಂಘಟನೆಗಳು ನಿರ್ಧರಿಸಿವೆ ಎಂಬುದನ್ನು ಸಭೆ ಗಮನಿಸಿತು.

ಕಾರ್ಮಿಕರ ಆಕ್ರೋಶ ಹೆಚ್ಚುತ್ತಿದೆ

ಲಾಕ್‌ಡೌನಿನ ನಂತರ ಕೆಲವು ಕೈಗಾರಿಕಾ ಘಟಕಗಳು ತೆರೆದಿವೆ, ಆದರೆ ಅವು ಎಲ್ಲ ಕಾರ್ಮಿಕರನ್ನು ಮತ್ತೆ ಕೆಲಸಕ್ಕೆ ತಗೊಂಡಿಲ್ಲ. ಕೇವಲ ಕೆಲವೇ ಕಾರ್ಮಿಕರಿಗೆ ಮತ್ತೆ ತಮ್ಮ ಕೆಲಸ ಸಿಕ್ಕಿದೆ, ಅದೂ ಇಳಿಸಿದ ಕೂಲಿ-ಸಂಬಳದೊಂದಿಗೆ. ಲಾಕ್ ಡೌನ್ ಅವಧಿಯ ಸಂಬಳವನ್ನು ಕೊಡಲು ಹಲವಾರು ಘಟಕಗಳು ನಿರಾಕರಿಸುತ್ತಿವೆ. ಏರ್ ಇಂಡಿಯ ತನ್ನ 20,000 ನೌಕರರಿಗೆ ಸಂಬಳವಿಲ್ಲದೆ ರಜಾದಲ್ಲಿ ಹೋಗಲು ನೋಟೀಸುಗಳನ್ನು ಜಾರಿ ಮಾಡಿದೆ. ಈ ಬಲವಂತದ ರಜಾ ಅವಧಿ 5 ವರ್ಷಗಳ ವರೆಗೂ ವಿಸ್ತರಿಸಬಹುದು ಎನ್ನಲಾಗಿದೆ. ಇವನ್ನು ಐಕ್ಯತೆಯಿಂದ ವಿರೋಧಿಸಬೇಕಾಗಿದೆ.

ಉದ್ಯೋಗವಿಲ್ಲದವರ ಸಂಖ್ಯೆ 14 ಕೋಟಿ ದಾಟಿದೆ. ದಿನಗೂಲಿ/ ಕಾಂಟ್ರಾಕ್ಟ್/ ಕ್ಯಾಶುವಲ್ ಕಾರ್ಮಿಕರನ್ನು ಸೇರಿಸಿದರೆ ಇದು 24 ಕೋಟಿ ದುಡಿಮೆಗಾರರು ಈಗ ಜೀವನೋಪಾಯ ವಿಲ್ಲದವರಾಗಿದ್ದಾರೆ. ಮಧ್ಯಮ, ಸಣ್ಣ ಮತ್ತು ಅತಿ ಸಣ್ಣ ಗಾತ್ರದ ಉದ್ದಿಮೆಗಳಲ್ಲಿ 30ರಿಂದ 35 ಶೇಕಡಾ ಮತ್ತೆ ತೆರೆಯುವ ಸಾಧ್ಯತೆಗಳಿಲ್ಲ. ನಿರುದ್ಯೋಗ ದರ ಅತೀ ಹೆಚ್ಚಿನ ಮಟ್ಟದಲ್ಲಿದೆ. ಸುಮಾರು 40 ಕೋಟಿ ಮಂದಿ ದಾರಿದ್ರ್ಯದತ್ತ ನೂಕಲ್ಪಡಬಹುದು ಎಂದು ಐ.ಎಲ್.ಒ. ಅಂದಾಜು ಮಾಡಿದೆ. ಕುಪೋಷಣೆ ಹೆಚ್ಚಲಿದೆ, ಹಸಿವಿನಿಂದ ಸಾವುಗಳು ಸಾಮಾನ್ಯವಾಗಲಿವೆ ಮತ್ತು ಮಾನಸಿಕ ಖಿನ್ನತೆಗಳು ಹೆಚ್ಚಿ ಕಾರ್ಮಿಕರು ಆತ್ಮಹತ್ಯೆಗೀಳಿಯುವ ಸಂಭವ ಹೆಚ್ಚುತ್ತಿದೆ ಎಂದು ವಿಜ್ಞಾನಿಗಳು, ವೈದ್ಯಕೀಯ ಪರಿಣಿತರು ಎಚ್ಚರಿಸುತ್ತಿದ್ದಾರೆ. ಇವೆಲ್ಲವೂ ಕಾರ್ಮಿಕರಲ್ಲಿ ಆಕ್ರೋಶ ಉಂಟು ಮಾಡುತ್ತಿವೆ ಎಂದು ಜಂಟಿ ವೇದಿಕೆ ಅಭಿಪ್ರಾಯ ಪಟ್ಟಿದೆ.

ಕಾರ್ಪೊರೇಟ್‌ಗಳ ಬಗ್ಗೆ ಮಾತ್ರ ಕಾಳಜಿ

ಸರಕಾರ ಮಹಾಮಾರಿಯನ್ನು ಎದುರಿಸಲು ಸೂಕ್ತ ಸಮಯದಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳುವಲ್ಲಿ ವಿಫಲವಾಗಿದೆ ಎಂದು ವೇದಿಕೆ ಪುನರುಚ್ಚರಿಸಿದೆ. ನಾಲ್ಕು ಅಮೂಲ್ಯ ತಿಂಗಳನ್ನು ವ್ಯರ್ಥಗೊಳಿಸಿ, ಅಯೋಜಿತ ರೀತಿಯಲ್ಲಿ ಲಾಕ್‌ಡೌನ್ ಹೇರಿ ಅಪಾರ ಸಂಕಟಗಳನ್ನು ಜನಗಳ ಮೇಲೆ, ವಿಶೇಷವಾಗಿ ವಲಸೆ ಕಾರ್ಮಿಕರ ಮೇಲೆ ಹೇರಿತು. ಕೊವಿಡ್-19ನ್ನು ಒಂದು ವೈದ್ಯಕೀಯ ತುರ್ತಿನ ಪ್ರಶ್ನೆಯಾಗಿ ಪರಿಗಣಿಸದೆ, ಕೇವಲ ಕಾನೂನು-ವ್ಯವಸ್ಥೆಯ ಸಮಸ್ಯೆಯೆಂದು ಪರಿಗಣಿಸಿತು. ಆರೋಗ್ಯ ವ್ಯವಸ್ಥೆಯನ್ನು ಮೇಲ್ದರ್ಜೆಗೇರಿಸಲು, ಮುಂಚೂಣಿಯ ಕಾರ್ಯಕರ್ತರಿಗೆ ಸುರಕ್ಷಾ ಸಾಧನಗಳನ್ನು ಒದಗಿಸಲು ಕ್ರಮಗಳನ್ನು ಕೈಗೊಳ್ಳಲಿಲ್ಲ. ರೈಲ್ವೆ, ರಕ್ಷಣೆ, ಬ್ಯಾಂಕುಗಳು, ವಿಮಾ ವಲಯ, ದೂರಸಂಪರ್ಕ, ಅಂಚೆ, ಮತ್ತಿತರ ವಲಯಗಳ ನೌಕರರು ಲಾಕ್‌ಡೌನಿನ ಅವಧಿಯಲ್ಲಿ ತುರ್ತು ಸೇವೆಗಳನ್ನು ಒದಗಿಸಲು ಸಲ್ಲಿಸಿದ ಅಪಾರ ಸೇವೆಗಳನ್ನು ಗುರುತಿಸುವಲ್ಲಿಯೂ ಈ ಸರಕಾರ ವಿಫಲವಾಗಿದೆ, ಅವರ ಸಮಸ್ಯೆಗಳನ್ನು ಪರಿಹರಿಸಲು ಮುಂದಾಗಿಲ್ಲ. ಕೋಟ್ಯಂತರ ದುಡಿಮೆಗಾರರ ಸಂಕಟಗಳನ್ನು ಉಪೇಕ್ಷಿಸಿ ಅದು ಕೇವಲ ಕಾರ್ಪೊರೇಟ್‌ಗಳು ಮತ್ತು ದೊಡ್ಡ ವ್ಯಾಪಾರ-ವ್ಯವಹಾರಸ್ಥರ ಪರವಾಗಿಯೇ ನಿಂತಿದೆ.

ಸಹಕಾರಕ್ಕೆ ಅನರ್ಹ ಸರಕಾರ

ಒಂದೆಡೆಯಲ್ಲಿ 'ಆತ್ಮನಿರ್ಭರ್' ಎಂಬ ಮಂತ್ರ ಪಠಿಸುತ್ತಲೇ ದೇಶಿ-ವಿದೇಶಿ ಬ್ರಾಂಡುಗಳ ಕಾರ್ಪೊರೇಟ್‌ಗಳಿಗೆ ದೇಶದ ಸಂಪನ್ಮೂಲಗಳು ಮತ್ತು ವ್ಯವಹಾರಗಳನ್ನು ಸ್ವಾಧೀನ ಪಡಿಸಿಕೊಳ್ಳಲು ಅವಕಾಶ ಕಲ್ಪಿಸಿಕೊಡುತ್ತಿರುವ ಸರಕಾರ, ಇನ್ನೊಂದೆಡೆಯಲ್ಲಿ 48 ಲಕ್ಷ ಕೇಂದ್ರ ಸರಕಾರೀ ನೌಕರರ ಮತ್ತು 68 ಲಕ್ಷ ಪಿಂಚಣಿದಾರರ ತುಟ್ಟಿ ಭತ್ಯೆ/ತುಟ್ಟಿ ಪರಿಹಾರವನ್ನು ಸ್ಥಗಿತಗೊಳಿಸುವ ನಿರ್ಧಾರವನ್ನು ಹಿಂತೆಗೆದುಕೊಳ್ಳಲು ನಿರಾಕರಿಸುತ್ತಿದೆ. ಜೀವನೋಪಾಯಗಳನ್ನು ಕಳಕೊಂಡಿರುವ ಕೋಟ್ಯಂತರ ಕುಟುಂಬಗಳು ಬದುಕುಳಿಯಲು ತಿಂಗಳಿಗೆ 7500 ರೂ.ನಗದು ವರ್ಗಾವಣೆಯ ಬೇಡಿಕೆಯನ್ನೂ ಸ್ವೀಕರಿಸಿಲ್ಲ. ರಿಟ್ರೆಂಚ್‌ಮೆಂಟ್ ಮಾಡಬಾರದು, ಸಂಬಳ ಕಡಿತ ಮಾಡಬಾರದು ಎಂಬ ತನ್ನದೇ ಆದೇಶಗಳನ್ನು ಯಾವುದೇ ನಾಚಿಕೆಯಿಲ್ಲದೆ ಹಿಂತೆಗೆದುಕೊಂಡಿದೆ.

ಇದು ಕಾರ್ಮಿಕರು ಮತ್ತು ಜನಸಾಮಾನ್ಯರ ಹಕ್ಕುಗಳ ಬಗ್ಗೆ ಗೌರವವಾಗಲೀ, ಮತ್ತು ಬದುಕುಳಿಯಲು ಅವರಿಗೆ ಸಲ್ಲಬೇಕಾದ ಮೂಲಭೂತ ಅಗತ್ಯಗಳ ಬಗ್ಗೆ ಕಾಳಜಿಯಾಗಲೀ ಇರದ ಒಂದು ಸರಕಾರ. ಆದ್ದರಿಂದ ಕಾರ್ಮಿಕರಿಂದ, ಜನಸಾಮಾನ್ಯರಿಂದ ಯಾವುದೇ ಸಹಕಾರಕ್ಕೆ ಇದು ಅರ್ಹವಾಗಿಲ್ಲ ಎಂದು ಕಾರ್ಮಿಕ ಸಂಘಟನೆಗಳ ಈ ರಾಷ್ಟ್ರೀಯ ಜಂಟಿ ವೇದಿಕೆ ಪುನರುಚ್ಚರಿಸಿದೆ.

ಕ್ರೂರ ಸಂವೇದನಾಶೂನ್ಯ ಸರಕಾರ

"ನಾವು ಕಾರ್ಮಿಕರು, ನೌಕರರು ಮತ್ತು ಕಾರ್ಮಿಕ ಸಂಘಟನೆಗಳು ಪರಸ್ಪರ ಸೌಹಾರ್ದದೊಂದಿಗೆ ಸಾಧ್ಯವಾದುದೆಲ್ಲವನ್ನೂ ಮಾಡಬೇಕು, ಕಾಯಿಲೆಯನ್ನು ಎಲ್ಲ ಮುನ್ನೆಚ್ಚರಿಕೆಗಳನ್ನು ವಹಿಸುತ್ತ ಐಕ್ಯತೆಯಿಂದ ಎದುರಿಸಬೇಕು, ಸಂಘಗಳನ್ನು ಕಟ್ಟಿಕೊಳ್ಳುವ, ಸಾಮೂಹಿಕ ಚೌಕಾಶಿಯ, ಒಂದು ಶಿಷ್ಟ ಕೆಲಸದ ಪರಿಸ್ಥಿತಿ, ಸಂಬಳ ಮತ್ತು ಭದ್ರತೆ ಹೊಂದುವ ನಮ್ಮ ಹಕ್ಕುಗಳ ರಕ್ಷಣೆಯಲ್ಲಿ ಪರಸ್ಪರ ಬೆಂಬಲಕ್ಕೆ ನಿಲ್ಲಬೇಕು. ಈ ಸರಕಾರ ಕಾರ್ಮಿಕರು ಮತ್ತು ಜನತೆಯ ಮೂಲಭೂತ ಮಾನವ ಅಗತ್ಯಗಳ ಬಗ್ಗೆ ಕ್ರೂರ ಸಂವೇದನಾಶೂನ್ಯತೆಯನ್ನು ಪ್ರದರ್ಶಿಸದೆ. ಇದನ್ನು ಅನುಮೋದಿಸಲು ಮತ್ತು ಇದರೊಂದಿಗೆ ಸಹಕರಿಸಲು ಸಾಧ್ಯವಿಲ್ಲ" ಎಂದಿರುವ ಕಾರ್ಮಿಕ ಸಂಘಟನೆಗಳ ಈ ರಾಷ್ಟ್ರೀಯ ಮಟ್ಟದ ಜಂಟಿ ವೇದಿಕೆ, ಇಂತಹ ಸನ್ನಿವೇಶದಲ್ಲಿ ಈ ಸರಕಾರದ ಜನ-ವಿರೋಧಿ, ಕಾರ್ಮಿಕ-ವಿರೋಧಿ, ಧೋರಣೆಗಳ ವಿರುದ್ಧ ಹೋರಾಟಗಳನ್ನು ರಾಷ್ಟ್ರಮಟ್ಟದಲ್ಲೂ, ಪ್ರತಿಯೊಂದು ವಲಯದಲ್ಲೂ ತೀವ್ರಗೊಳಿಸಬೇಕು ಎಂದು ಕರೆ ನೀಡುತ್ತ ಈ ಕೆಳಗಿನ ನಿರ್ಧಾರಗಳನ್ನು ಮಾಡಿದೆ:

1. ಆಗಸ್ಟ 9ರ 'ಕ್ವಿಟ್ ಇಂಡಿಯಾ ದಿನ'ವನ್ನು "ಭಾರತ ಉಳಿಸಿ ದಿನ'ವಾಗಿ, ದೇಶಾದ್ಯಂತ ಸತ್ಯಾಗ್ರಹ/ಜೈಲ್ ಭರೋ ಅಥವ ಬೇರೆ ಯಾವುದೇ ಸಮರಶೀಲ ಸ್ವರೂಪದಲ್ಲಿ ಎಲ್ಲ ಉದ್ಯೋಗ ಸ್ಥಳಗಳಲ್ಲಿ, ಕೈಗಾರಿಕಾ ಕೇಂದ್ರಗಳಲ್ಲಿ, ಜಿಲ್ಲಾ ಕೇಂದ್ರಗಳಲ್ಲಿ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಆಚರಿಸಬೇಕು.

2. ಆಗಸ್ಟ 18, 2020ರಂದು ಕಲ್ಲಿದ್ದಲು ಕಾರ್ಮಿಕರ ಮುಷ್ಕರದ ದಿನದಂದು ಎಲ್ಲ ಉದ್ಯೋಗ ಸ್ಥಳಗಳಲ್ಲಿ, ವಿಶೇಷವಾಗಿ ಸಾರ್ವಜನಿಕ ವಲಯದ ಉದ್ದಿಮೆಗಳಲ್ಲಿ ಸಮರಶೀಲ ಸೌಹಾರ್ದ ಕಾರ್ಯಾಚರಣೆಗಳನ್ನು, ಸಾಧ್ಯವಿದ್ದಲ್ಲಿ ಮುಷ್ಕರಗಳನ್ನು ಕೂಡ ನಡೆಸಬೇಕು

3. ರಕ್ಷಣಾ ವಲಯದಲ್ಲಿ ನಡೆಸಿದ ಮುಷ್ಕರ ಮತಸಂಗ್ರಹದಲ್ಲಿ 99ಶೇ. ಕಾರ್ಮಿಕರು ಮುಷ್ಕರ ನಡೆಸಲು ಮಂಜೂರಾತಿ ನೀಡಿರುವ ಹಿನ್ನೆಲೆಯಲ್ಲಿ ಅಲ್ಲಿನ ಸಂಘಗಳು/ ಒಕ್ಕೂಟಗಳು ಜಂಟಿಯಾಗಿ ಮುಷ್ಕರದ ನೋಟೀಸು ಕೊಡುವ ಬಗ್ಗೆ ಯೋಜಿಸುತ್ತಿದ್ದಾರೆ. ಸೆಪ್ಟಂಬರ್ ಮಧ್ಯಭಾಗದಲ್ಲಿ ಅವರು ಮುಷ್ಕರ ಕಾರ್ಯಾಚರಣೆಗೆ ಇಳಿಯಬಹುದು. ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಮತ್ತು ಒಕ್ಕೂಟಗಳ ಐಕ್ಯ ವೇದಿಕೆ ರಕ್ಷಣಾ ವಲಯದ ಮುಷ್ಕರದೊಂದಿಗೆ ದೇಶವ್ಯಾಪಿ ಸಾರ್ವತ್ರಿಕ ಮುಷ್ಕರವನ್ನೂ ನಡೆಸುವ ವಿಚಾರ ಹೊಂದಿದೆ. ಸಂಬಂಧಪಟ್ಟ ಎಲ್ಲರೂ ಈ ದಿಕಿನಲ್ಲಿ ಸಿದ್ಧತೆಗಳನ್ನು ನಡೆಸಬೇಕು.

4. ಅಂಗನವಾಡಿ, ಆಶಾ, ಮಧ್ಯಾಹ್ನದ ಊಟ ಮುಂತಾದ ಸ್ಕೀಮ್ ಕಾರ್ಮಿಕರ ಸಂಘಗಳು/ ಒಕ್ಕೂಟಗಳು ಆಗಸ್ಟ 7 ಮತ್ತು 8ರಂದು ಎರಡು ದಿನಗಳ ಮುಷ್ಕರ ನಡೆಸಲು ಜಂಟಿಯಾಗಿ ನಿರ್ಧರಿಸಿವೆ. ಇದು ಆಗಸ್ಟ 9ರ ದೇಶವ್ಯಾಪಿ ಸತ್ಯಾಗ್ರಹ/ ಜೈಲ್‌ಭರೋ ಜತೆಗೂಡುತ್ತದೆ. ಸಂಬಂಧಪಟ್ಟ ಎಲ್ಲರೂ ಸ್ಕೀಮ್ ಕಾರ್ಮಿಕರ ಮುಷ್ಕರ ಕಾರ್ಯಾಚರಣೆಗೆ ಸೌಹಾರ್ದ ವ್ಯಕ್ತಪಡಿಸಬೇಕು.

5. ರೈಲ್ವೆ ಖಾಸಗೀಕರಣದ ಸರಕಾರದ ನಡೆಯ ವಿರುದ್ಧ ರೈಲ್ವೆ ವಲಯದ ಸಂಘಗಳು/ ಒಕ್ಕೂಟಗಳೊಂದಿಗೆ ಮತ್ತು ಸ್ವತಂತ್ರವಾಗಿಯೂ ದೇಶವ್ಯಾಪಿ ಪ್ರಚಾರವನ್ನು ಮುಂದುವರೆಸಬೇಕು. ಈ ರೈಲ್ವೆ ಸಂಘಗಳು/ಒಕ್ಕೂಟಗಳು ಸೂಕ್ತ ಸಮಯದಲ್ಲಿ ಸ್ಪಂದನೆ/ ಕಾರ್ಯಾಚರಣೆಗಳನ್ನು ನಡೆಸುವ ಬಗ್ಗೆ ಯೋಜನೆ, ಸಿದ್ಧತೆಗಳನ್ನು ಮಾಡುತ್ತಿರುವುದಾಗಿ ತಿಳಿಸಿವೆ.

6. ಪ್ರಚಾರಾಂದೋಲನದ ಭಾಗವಾಗಿ ರಾಷ್ಟ್ರಪತಿಗಳಿಗೆ ಸಲ್ಲಿಸುವ ಮನವಿಪತ್ರವನ್ನು ಸಲಹೆ-ಸೂಚನೆಗಳನ್ನು ಪಡೆದು ಅಂತಿಮಗೊಳಿಸಲಾಗುವುದು, ನಂತರ change.org ಪ್ರಚಾರಾಂದೋಲನವಾಗಿ ಆರಂಭಿಸಲಾಗುವುದು. ಇನ್ನೊಂದು ಇಂತಹ ಮನವಿಪತ್ರವನ್ನು, ನಿರ್ದಿಷ್ಟವಾಗಿ ಅಸಂಘಟಿತ ವಲಯದ ಕಾರ್ಮಿಕರ ಸಮಸ್ಯೆಗಳ ಮೇಲೆ ಗಮನ ಕೇಂದ್ರೀಕರಿಸಿ ಸಿದ್ಧಪಡಿಸಬೇಕೆಂಬ ಸಲಹೆಯನ್ನು ಸ್ವೀಕರಿಸಲಾಗಿದೆ.

ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಈ ಜಂಟಿ ವೇದಿಕೆ ಜುಲೈ 27ರಂದು ಮತ್ತೆ ಸಭೆ ಸೇರಿ ಆಗಸ್ಟ 9ರ ಕಾರ್ಯಕ್ರಮದ ಸಿದ್ಧತೆ ಮತ್ತು ಅದನ್ನು ಪರಿಣಾಮಕಾರಿ ಮತ್ತು ಗಮನ ಸೆಳೆಯುವಂತೆ ಮಾಡುವ ಬಗ್ಗೆ ವಿವರವಾದ ಚರ್ಚೆ ನಡೆಸುತ್ತವೆ ಎಂದೂ ಈ ಜಂಟಿ ವೇದಿಕೆ ತಿಳಿಸಿದೆ. ಎಲ್ಲ ರಾಜ್ಯ ಮಟ್ಟದಲ್ಲೂ, ಮತ್ತು ಜಿಲ್ಲಾಮಟ್ಟದಲ್ಲೂ ಈ ಚಳುವಳಿಯನ್ನು ಮುಂದೊಯ್ಯುವ ಬಗ್ಗೆ ವಿಚಾರ-ವಿಮರ್ಶೆಗಳನ್ನು ನಡೆಸಬೇಕು ಎಂದೂ ಜಂಟಿ ವೇದಿಕೆ ಕರೆ ನೀಡಿದೆ.


ಅಸ್ಸಾಂನಲ್ಲಿ ವಿಧ್ವಂಸಕಾರೀ ಪ್ರವಾಹ– ಕೇಂದ್ರ ಮತ್ತು ರಾಜ್ಯ ಬಿಜೆಪಿ ಸರಕಾರಗಳು ಪರಿಹಾರ ಒದಗಿಸುವಲ್ಲಿ ವಿಫಲ

ಅಸ್ಸಾಂನಲ್ಲಿ ಪ್ರವಾಹದ ಇನ್ನಷ್ಟು ವಿಧ್ವಂಸಕಾರಿಯಾದ ಮೂರನೇ ಅಲೆ, 35 ಲಕ್ಷಕ್ಕಿಂತಲೂ ಹೆಚ್ಚು ಜನಗಳ ಜೀವ ಮತ್ತು ಜೀವನಾಧಾರಗಳನ್ನು ಗಂಭೀರವಾಗಿ ತಟ್ಟಿದೆ. ಈಗಾಗಲೇ 84 ಮಂದಿ ಪ್ರಾಣ ಕಳಕೊಂಡಿದ್ದಾರೆ. 24 ಜಿಲ್ಲೆಗಳ 3000ಕ್ಕೂ ಹೆಚ್ಚು ಹಳ್ಳಿಗಳು ಬಲಿಷ್ಟ ಬ್ರಪುತ್ರ , ಬರಕ್ ಮತ್ತು ಅವುಗಳ ಉಪನದಿಗಳಿಂದ ಕೊರೆತಕ್ಕೊಳಗಾಗಿ ತೊಂದರೆಗೀಡಾಗಿವೆ. 1.27ಲಕ್ಷ ಹೆಕ್ಟೇರ್ ಬೆಳೆ ಪ್ರದೇಶ ನಷ್ಟ ಅನುಭವಿಸಿದೆ, ಅಸಂಖ್ಯಾತ ಜಾನುವಾರುಗಳ ನಷ್ಟವಾಗಿದೆ. ಸಾವಿರಾರು ಸೇತುವೆಗಳು, ಒಡ್ಡುಗಳು, ವಾಸದ ಮನೆಗಳು ಮತ್ತು ಸಾರ್ವಜನಿಕ ಆಸ್ತಿಗಳು ನೀರಿನಲ್ಲಿ ಕೊಚ್ಚಿ ಹೋಗಿವೆ.

ಬಿಜೆಪಿ ನೇತೃತ್ವದ ಅಸ್ಸಾಂ ರಾಜ್ಯ ಸರಕಾರ ಈ ಎಲ್ಲ ವರ್ಷಗಳಲ್ಲಿ ಬಹಳ ಹಳೆಯದಾಗಿದ್ದ ಒಡ್ಡುಗಳನ್ನು ರಿಪೇರಿ ಮಾಡುವಲ್ಲಿ ಶೋಚನೀಯವಾಗಿ ಸೋತಿದೆ. ಈಗ ಹೆಚ್ಚಿನ ಸ್ಥಳಗಳಿಗೆ ಪರಿಹಾರ ತಲುಪಿಲ್ಲ.

ಇದುವರೆಗೂ ಕೇಂದ್ರ ಸರಕಾರ ಯಾವುದೇ ಪರಿಹಾರ ಪ್ಯಾಕೇಜನ್ನೂ ಪ್ರಕಟಿಸಿಲ್ಲ, ಎಷ್ಟು ಹಾನಿಯಾಗಿದೆ ಎಂದು ಅಂದಾಜು ಮಾಡಲು ಕೇಂದ್ರೀಯ ತಂಡವನ್ನೂ ಕಳಿಸಿಲ್ಲ.

ಪ್ರತಿಯೊಂದು ಕುಟುಂಬಕ್ಕೂ ಸಾಕಷ್ಟು ಪರಿಹಾರ ಮತ್ತು ಮರುವಸತಿ ಖಾತ್ರಿ ಪಡಿಸಬೇಕು, ಮತ್ತೆ-ಮತ್ತೆ ಕಾಡುವ ಅಸ್ಸಾಂನ ಪ್ರವಾಹ ಸಮಸ್ಯೆಯನ್ನು ಒಂದು ರಾಷ್ಟ್ರೀಯ ಸಮಸ್ಯೆ ಎಂದು ಗುರುತಿಸಿ ಈ ವಿಷಯದಲ್ಲಿ ಸಾಕಷ್ಟು ನಿಧಿಯನ್ನು ಬಿಡುಗಡೆ ಮಾಡಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ.



ಸಂಪಾದಕೀಯ

ನ್ಯಾಯಾಂಗ ತನಿಖೆಯಾಗಲಿ

ರಾಜ್ಯದಲ್ಲಿ ಕೊರೊನಾ ಸೋಂಕಿನ ಆರ್ಭಟ ನಿಧಾನವಾಗಿ ಇಳಿಮುಖವಾಗುತ್ತಿರುವಂತೆ ಕೊರೊನಾ ನಿರ್ವಹಣೆಗೆ ಮಾಡಲಾದ ಖರ್ಚು ವೆಚ್ಚದ ವಿಚಾರವಾಗಿ ಆಡಳಿತ ಮತ್ತು ಪ್ರತಿಪಕ್ಷದ ನಡುವಿನ ಜಂಗಿಕುಸ್ತಿ ತೀವ್ರವಾಗತೊಡಗಿದೆ. ಸುದ್ದಿಗೋಷ್ಠಿ ನಡೆಸಿದ ಕಾಂಗ್ರೆಸ್ ನಾಯಕರು ಯಡಿಯೂರಪ್ಪ ಸರ್ಕಾರದ ವಿರುದ್ಧ ಆರೋಪಗಳ ಸುರಿಮಳೆ ಸುರಿಸಿದ್ದಾರೆ. ಸರ್ಕಾರದ ಪರವಾಗಿ ಕಣಕ್ಕಿಳಿಸಲಾದ ಪಂಚ ಪಾಂಡವರು ಸ್ಪಷ್ಟನೆ ನೀಡಿ ಕಾಂಗ್ರೆಸ್ ವಿರುದ್ಧ ಹರಿಹಾಯ್ದಿದ್ದಾರೆ. ನಾಗರಿಕರಿಗೆ ಇದರಿಂದ ಒಂದು ಕಡೆ ಉಚಿತ ಮನೋರಂಜನೆ ದೊರೆಯುತ್ತಿದ್ದರೆ. ಇನ್ನೊಂದು ಕಡೆ ಇಷ್ಟೊಂದು ಸಾರ್ವಜನಿಕ ಹಣ ಪೋಲಾಗಿರುವ ಬಗ್ಗೆ ಆಕ್ರೋಶ ಭುಗಿಲೇಳುತ್ತಿದೆ.

ಮಾಜಿ ಮುಖ್ಯಮಂತ್ರಿ ಹಾಲಿ ಪ್ರತಿಪಕ್ಷ ನಾಯಕ ಸಿದ್ಧರಾಮಯ್ಯ ಬಿಡುಗಡೆ ಮಾಡಿದ ಅಂಕಿ ಅಂಶಗಳ ಪ್ರಕಾರ ಸರ್ಕಾರ 4 ತಿಂಗಳಲ್ಲಿ 4167 ಕೋಟಿ ರೂ. ಖರ್ಚು ಮಾಡಿದೆ. ಅದರಲ್ಲಿ 2 ಸಾವಿರ ಕೋಟಿ ರೂಪಾಯಿ ಸಚಿವರು ಮತ್ತು ಅಧಿಕಾರಿಗಳ ಜೇಬಿಗೆ ಹೋಗಿದೆ. ಆದ್ದರಿಂದ ಕೂಡಲೇ ಸರ್ಕಾರ ಹೈಕೋರ್ಟ್ ಹಾಲಿ ನ್ಯಾಯಾಧೀಶರಿಂದ ತನಿಖೆ ನಡೆಸಬೇಕೆಂದು, ಹಾಗೂ ವಿಧಾನಸಭೆ ಅಧಿವೇಶನ ಕರೆದು ಚರ್ಚೆಗೆ ಅವಕಾಶ ಕೊಡಬೇಕೆಂದು ಸಿದ್ದರಾಮಯ್ಯ ಆಗ್ರಹಿಸಿದ್ದಾರೆ. ಕೊರೊನಾ ನಿರ್ವಹಣೆಯ ಹೆಸರಿನಲ್ಲಿ ಬಿಜೆಪಿ ರಾಜ್ಯ ಸರ್ಕಾರ ಭ್ರಷ್ಟಾಚಾರ ನಡೆಸಿದ್ದು ಪ್ರತಿ ಪೈಸೆಗೂ ಸರ್ಕಾರ ಲೆಕ್ಕ ಕೊಡಬೇಕು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಒತ್ತಾಯಿಸಿದ್ದಾರೆ.

ಕೇಂದ್ರ ಸರ್ಕಾರ 50,000 ವೆಂಟಿಲೇಟರ್‌ಗಳನ್ನು ತಲಾ 4 ಲಕ್ಷ ರೂ. ದರದಲ್ಲಿ ಖರೀದಿಸಿದೆ. ತಮಿಳುನಾಡು 100 ವೆಂಟಿಲೇಟರ್‌ಗಳನ್ನು ತಲಾ 4.78 ಲಕ್ಷ ದರದಲ್ಲಿ ಖರೀದಿಸಿದೆ. ಆದರೆ ಕರ್ನಾಟಕ ಸರ್ಕಾರ ಏಕೆ ತಲಾ 5.60 ಲಕ್ಷ ಮತ್ತು 18.200 ಲಕ್ಷ ರೂ. ದರದಲ್ಲಿ ಖರೀದಿ ಮಾಡಿತು? ಎಂದು ಸಿದ್ದರಾಮಯ್ಯ ಪ್ರಶ್ನಿಸುತ್ತಾರೆ. ರೂ. 330 ಮಾರುಕಟ್ಟೆ ಬೆಲೆ ಇರುವ ಪಿಪಿಇ ಕಿಟ್‌ಗಳನ್ನು ತಲಾ ರೂ. 2,177 ಕ್ಕೆ ಖರೀದಿ ಮಾಡಿದ್ದು ಏಕೆ? ಇಂತಹ ಇನ್ನೂ ಪ್ರಶ್ನೆಗಳನ್ನು ಒಂದು ನ್ಯಾಯಾಂಗ ತನಿಖೆಯಿಂದ ಮಾತ್ರ ಬಯಲಿಗೆಳೆಯಲು ಸಾಧ್ಯ. ಆರೋಗ್ಯ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿಯ ಅರೆಬರೆ ಉತ್ತರ ಬಿಟ್ಟರೆ ಈ ವರೆಗೆ ಬೇರೆ ಇಲಾಖೆಗಳಿಗೆ ಬರೆದ ಪತ್ರಗಳಿಗೆ ಉತ್ತರ ಬಂದಿಲ್ಲ. ಏಕೆ? ಸರ್ಕಾರ ಪ್ರಾಮಾಣಿಕವಾಗಿದ್ದರೆ ಮುಚ್ಚಿಡುವ ಪ್ರಯತ್ನ ಏಕೆ? ನ್ಯಾಯಾಂಗ ತನಿಖೆಗೆ ಹಿಂಜರಿತ ಏಕೆ?

ಕೊರೊನಾ ಪೀಡಿತ ರೋಗಿಗಳಿಗೆ ರಾಜ್ಯದಲ್ಲಿ ಸರಿಯಾದ ಆರೈಕೆ ದೊರೆಯಲಿಲ್ಲ ಎಂದು ರೋಗಿಗಳು ತಮ್ಮ ಅಸಹಾಯಕತೆಯನ್ನು ತೋಡಿಕೊಂಡಿದ್ದಾರೆ. ಅದೆಷ್ಟೋ ರೋಗಿಗಳು ಆಸ್ಪತ್ರೆಗಳಲ್ಲಿ ದಾಖಲಾಗಲು ಸಾಧ್ಯವಾಗದೆ ಸಾವನ್ನಪ್ಪಿದ್ದಾರೆ. ಆಸ್ಪತ್ರೆಗಳಲ್ಲಿ ಹಾಸಿಗೆಗಳಿಲ್ಲ. ಕನಿಷ್ಟ ಆರೈಕೆ ಇಲ್ಲ. ಸ್ವಚ್ಛತಾ ಪರಿಸರವಿಲ್ಲ. ಕನಿಷ್ಠ ಊಟ ಉಪಹಾರ ಸಿಗದೆ ಉಪವಾಸಕ್ಕೆ ಬಲಿಯಾಗಿ ಪ್ರಾಣತೆತ್ತಿದ್ದಾರೆ. ಕುಡಿಯಲು ಹಾಗೂ ಸ್ನಾನಕ್ಕೆ ಬಿಸಿನೀರನ್ನು ಒದಗಿಸಲಾಗಿಲ್ಲ. ಈ ನರಕಯಾತನೆಯಿಂದ ತಪಿಸಿಕೊಳ್ಳಲು ರೋಗಿಗಳು ಚಿಕಿತ್ಸೆಗೆ ಒಳಪಡಲು ಹಿಂಜರಿದಿದ್ದಾರೆ. ಇದರ ಪರಿಣಾಮವಾಗಿ ಸಾವಿರಾರು ಸೋಂಕಿತರು ಗುರುತಿಸಲ್ಪಡದೆ ರೋಗವನ್ನು ಹರಡುತ್ತಿರುತ್ತಾರೆ. ಅವರೆಲ್ಲರಿಗೆ ಮಾನವೀಯ ಆರೈಖೆ, ಸಕಾಲದಲ್ಲಿ ಪರೀಕ್ಷಾ ವರದಿಗಳನ್ನು ಒದಗಿಸಿ ಚಿಕಿತ್ಸೆ ನೀಡಲು ಸಾಧ್ಯವಾಗಿದ್ದರೆ ನಮ್ಮ ದೇಶದಲ್ಲಿ ಹಾಗೂ ರಾಜ್ಯದಲ್ಲಿ ಇಷ್ಟೊಂದು ಪ್ರಮಾಣದಲ್ಲಿ ಸೋಂಕು ಹರಡುತ್ತಿರಲಿಲ್ಲ. ಕಾಯಿಲೆ ನಿಯಂತ್ರಣಕ್ಕಾಗಿ ಪಡೆದುಕೊಂಡ ಅನುದಾನದ ಬಹುಭಾಗ ದುರುಪಯೋಗವಾಗಿದೆ. ಈ ಕುರಿತು ಪ್ರತಿಪಕ್ಷಗಳು ಹಾಗೂ ಜನತೆ ಮಾಡುವ ಆರೋಪಗಳಲ್ಲಿ ಹುರುಳಿಲ್ಲದಿಲ್ಲ. ಆದ್ದರಿಂದ ತನಿಖೆಯಾಗಬೇಕು. ಇಷ್ಟೊಂದು ಅಮಾಯಕರ ಸಾವಿಗೆ ಕಾರಣರಾದವರನ್ನು ಪತ್ತೆ ಹಚ್ಚಬೇಕು. ಅವರಿಗೆ ಸರಿಯಾದ ಶಿಕ್ಷೆಯಾಗಬೇಕು.

ಈ ಅಕ್ಷಮ್ಯ ಅಪರಾಧಕ್ಕೆ ಮುಖ್ಯ ಮಂತ್ರಿ ಯಡಿಯೂರಪ್ಪ ಪ್ರಮುಖ ಕಾರಣ ಆದ್ದರಿಂದ ಈ ಹಗರಣದ ಮುಕ್ತ ಪಾರದರ್ಶಕ ತನಿಖೆ ನಡೆಯಲೇ ಬೇಕು.

ಕೋವಿಡ್ ಅವಧಿಯಲ್ಲಿ ಹೆಚ್ಚುತ್ತಿರುವ ಮಹಿಳೆಯರ ಮೇಲಿನ ದೌರ್ಜನ್ಯಗಳ ತಡೆಗೆ ಪರ್ಯಾಯ–ಪರಿಹಾರಗಳನ್ನು ರೂಪಿಸಲು ಒತ್ತಾಯ

ಮಾನ್ಯ ಮುಖ್ಯ ಮಂತ್ರಿಗಳು,
ಕರ್ನಾಟಕ ಸರ್ಕಾರ,

ಕೊರೊನಾ ಹೆಸರಿನ ಗುರುತಿಲ್ಲದ ವೈರಾಣುವೊಂದು ವಿಶ್ವದ ಹಲವು ರಾಷ್ಟ್ರಗಳನ್ನು ತಲ್ಲಣಗೊಳಿಸಿದೆ. ಇದರ ಅಪಾಯಕ್ಕೆ ತುತ್ತಾದ ದೇಶಗಳಲ್ಲಿ ಆರ್ಥಿಕ, ಸಾಮಾಜಿಕ, ಕೌಟುಂಬಿಕ ಸಮಸ್ಯೆಗಳು ವಿಪರೀತವಾಗಿವೆ. ಜೀವನ ನಿರ್ವಹಣೆಗೆ ಅಗತ್ಯವಾದ ಆದಾಯಕ್ಕೆ ಕತ್ತರಿ, ಕೆಲಸ ಕಳೆದುಕೊಳ್ಳುವ ಭೀತಿ, ಆರ್ಥಿಕ ಸಂಕಷ್ಟಗಳ ಜೊತೆ ಮಹಿಳೆಯರ ಮೇಲಿನ ದೌರ್ಜನ್ಯಗಳು ಹಲವು ಪಟ್ಟು ಹೆಚ್ಚಿವೆ ಎಂದು ವಿಶ್ವಸಂಸ್ಥೆಯ ವರದಿಗಳೇ ಹೇಳುತ್ತಿವೆ. ಇವು ಮಹಿಳೆಯರ ಬದುಕನ್ನು ತಲ್ಲಣಗೊಳಿಸಿವೆ.

ಭಾರತದಲ್ಲಿ ಸ್ಥಿತಿ ಇನ್ನಷ್ಟು ಹದಗೆಟ್ಟಿದೆ. ದೇಶದ ಮಹಿಳಾ ಮತ್ತು ಮಕ್ಕಳ ಸಚಿವರೇ ಒಪ್ಪಿಕೊಂಡಂತೆ ಲಾಕ್ ಡೌನ್ ಅವಧಿಯಲ್ಲಿ 89000 ಮಹಿಳೆಯರನ್ನು ವಿವಿಧ ರೀತಿಯಲ್ಲಿ ರಕ್ಷಿಸಲಾಗಿದೆಯಂತೆ. ಇದು ಲೆಖ್ಖಕ್ಕೆ ಸಿಕ್ಕ ಸಂಖ್ಯೆಯಾದರೆ, ಪೀಡಕ ಮನೆಯಲ್ಲೇ ಇದ್ದ ಕಾರಣದಿಂದ ಸಹಾಯದ ಮೊರೆ ಹೋಗುವ ಯಾವ ದಾರಿಯೂ ಇಲ್ಲದೇ ಅವಡುಗಚ್ಚಿ ಸಹಿಸಿಕೊಂಡ ಮಹಿಳೆಯರ ಸಂಖ್ಯೆ ಇದರ ಎಷ್ಟೋ ಪಟ್ಟು ಹೆಚ್ಚಿರುತ್ತದೆ ಎಂಬುದು ಸ್ವಯಂವೇದ್ಯ. ರಾಜ್ಯದಲ್ಲಿ ಕೂಡಾ ಇದೇ ಪರಿಸ್ಥಿತಿ ಇದೆ. ಈ ಅವಧಿಯಲ್ಲಿ 50–60% ದೌರ್ಜನ್ಯಗಳು ಹೆಚ್ಚಿವೆ. ಸಹಾಯವಾಣಿಗಳಿಗೆ ಈ ಅವಧಿಯಲ್ಲಿ ಸಹಾಯ ಕೋರಿ ಬಂದ ಕರೆಗಳು ಹಿಂದಿನ ದಿನಗಳಿಗಿಂತ ಹೆಚ್ಚು ಎಂದು ವರದಿಗಳು ಹೇಳುತ್ತಿವೆ.

ಕೊವಿಡ್–19 ರ ಕಾರಣದಿಂದಾಗಿ ಲಾಕ್‌ಡೌನ್ ಘೊಷಿಸಲಾಯಿತು. ದುಡಿಯುವ ಜನರ ಬದುಕಿಗೆ ಯಾವುದೇ ರೀತಿಯ ವ್ಯವಸ್ಥೆಗೆ ಅವಕಾಶವೇ ನೀಡದೇ ಏಕಾಏಕಿ ಮಾಡಿದ ಲಾಕ್‌ಡೌನ್ ಘೋಷಣೆಯಿಂದಾಗಿ ಜನ ಕಂಗಾಲಾದರು. ಒಮ್ಮಲೇ ಕುಸಿದ ಕುಟುಂಬದ ಆರ್ಥಿಕ ಸ್ಥಿತಿ, ಕೆಲಸ ಕಳೆದುಕೊಳ್ಳುವ ಆತಂಕ, ಆದಾಯದ ಯಾವ ದಾರಿಯೂ ಇಲ್ಲದ ಸ್ಥಿತಿಗೆ ನೂಕಲ್ಪಟ್ಟ ಕುಟುಂಬಗಳು ಸಾವಿರಾರು. ಒಂದೆಡೆ ಕುಟುಂಬ ನಿರ್ವಹಣೆಯ ಒತ್ತಡ ಇನ್ನೊಂದೆಡೆ ಅತಂತ್ರ ಭವಿಷ್ಯದ ಕಳವಳಗಳಿಂದ ಉಂಟಾದ ಮಾನಸಿಕ ಕ್ಷೋಭೆಯೂ ಕೂಡ ಹಿಂಸಾಚಾರಕ್ಕೆ ಹೆಚ್ಚಲು ಕಾರಣವಾಗಿದೆ. ಇಂಥಹ ಸ್ಥಿತಿಗೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಆಳುವ ಸರ್ಕಾರದ ನಿರ್ಲಕ್ಷ ಧೋರಣೆಯೇ ಕಾರಣವೆಂದು ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)ಯು ಅಭಿಪ್ರಾಯ ಪಡುತ್ತದೆ. ರಾಜ್ಯದಲ್ಲಿ ಇರುವ ಮಹಿಳಾ ಆಯೋಗ ಅಥವಾ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಗೃಹ ಇಲಾಖೆಗಳು ಹೆಚ್ಚಿರುವ ದೌರ್ಜನ್ಯಗಳ ಬಗ್ಗೆ ತುಟಿ ಬಿಚ್ಚದಿರುವುದು ನಮ್ಮ ಅಭಿಪ್ರಾಯಕ್ಕೆ ಪುಷ್ಟಿ ನೀಡುತ್ತದೆ.

ಬೆಂಗಳೂರು ಮಹಾನಗರದಲ್ಲಿಯೇ ಕೌಟುಂಬಿಕ ದೌರ್ಜನ್ಯಕ್ಕೆ ಒಳಗಾದ ಮಹಿಳೆಯರ ದೂರು ದಾಖಲಿಸಿಕೊಳ್ಳಲು ಪೋಲೀಸ್ ಠಾಣೆಗಳಲ್ಲಿ ಹಿಂದೆಮುಂದೆ ನೋಡುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಕೋವಿಡ್ ಕಾರಣದಿಂದ ಯಾರನ್ನೂ ಬಂಧಿಸುವ ಹಾಗಿಲ್ಲವೆಂದು ಪೋಲೀಸ್ ಠಾಣೆಗಳಲ್ಲಿ ಹೇಳುತ್ತಿರುವುದು ಹಾಸ್ಯಾಸ್ಪದವಾಗಿದೆ. ಮಾನವ ಹಕ್ಕುಗಳ ಹೋರಾಟಗಾರರು, ಪ್ರಗತಿಪರ ಚಿಂತಕರನ್ನು ದುರುದ್ದೇಶಪೂರಿತವಾಗಿ ಕೋವಿಡ್ ಲಾಕ್ ಡೌನ್ ಸಂದರ್ಭದಲ್ಲಿ ಬಂಧಿಸಿ ಜೈಲಿಗಟ್ಟಲು ತಡೆಯಿಲ್ಲದ ಈ ದೇಶದಲ್ಲಿ ಮಹಿಳೆಯರ ಮೇಲೆ ದೌರ್ಜನ್ಯ ಎಸಗಿದವರನ್ನು ಬಂಧಿಸಲು ಕುಂಟು ನೆಪ ಹೇಳಲಾಗುತ್ತಿದೆ.

ಈ ಅವಧಿಯಲ್ಲಿ ಹಲವಾರು ಜಿಲ್ಲೆಗಳಲ್ಲಿ ಬಾಲ್ಯ ವಿವಾಹಗಳು ನಡೆದಿವೆ. ಮರ್ಯಾದೆಯ ಹೆಸರಿನ ಹತ್ಯೆಗಳು ರಾಯಚೂರು ಜಿಲ್ಲೆಯ ಸಿಂಧನೂರು ಮತ್ತು ಹಾಸನ ಜಿಲ್ಲೆಯ ಆಲ್ದೂರಿನಲ್ಲಿ ನಡೆದಿವೆ.

ಕೋವಿಡ್ ಅವಧಿಯಲ್ಲಿ ಕೆಲಸವಿಲ್ಲದೆ ಆದಾಯವಿಲ್ಲದಂತಾಗಿ ಅಸಂಘಟಿತ ವಿಭಾಗಗಳಲ್ಲಿನ ಲಕ್ಷಾಂತರ ಮಹಿಳೆಯರು ಕಂಗಾಲಾಗಿದ್ದಾರೆ. ಅದರಲ್ಲೂ ಮನೆಗೆಲಸಗಾರರು, ಬೀದಿಬದಿ ವ್ಯಾಪಾರಿಗಳು, ಗೃಹಾಧಾರಿತ ಆದಾಯದಾಯಕ ಚಟುವಟಿಕೆಗಳಲ್ಲಿ ತೊಡಗಿದ್ದವರು ಕನಿಷ್ಟ ಆದಾಯವಿಲ್ಲದೆ ಮನೆ ಬಾಡಿಗೆ ಕಟ್ಟಲಾಗದೆ, ಆರೋಗ್ಯಕ್ಕೆ ಹಣಕಾಸಿಲ್ಲದೆ, ಕರೆಂಟ್ ಬಿಲ್, ನೀರಿನ ಬಿಲ್ ಕಟ್ಟಲಾಗದೆ, ಮಕ್ಕಳ ಶಾಲಾ ಶುಲ್ಕಗಳನ್ನು ಪಾವತಿಸಲಾಗದೆ ಹಲವು ರೀತಿಯ ಸಮಸ್ಯೆಗಳಿಗೆ ಸಿಲುಕಿದ್ದಾರೆ. ಕುಟುಂಬದ ಪೂರ್ತಿ ಹೊರೆಹೊತ್ತ ಒಂಟಿ ಮಹಿಳೆಯರು, ಗಂಡ ಸತ್ತವರು, ದೇವದಾಸಿ ಮಹಿಳೆಯರು ಅಕ್ಷರ ಸಹಃ ಎಲ್ಲ ತರಹದ ಅಸುರಕ್ಷತೆಯನ್ನು ಈ ಅವಧಿಯಲ್ಲಿ ಎದುರಿಸುತ್ತಿದ್ದಾರೆ.

ಸ್ವಸಹಾಯ ಸ್ತ್ರೀ ಶಕ್ತಿ ಸಂಘಗಳ ಸದಸ್ಯರಾಗಿ ಸಣ್ಣ ಪುಟ್ಟ ಚಟುವಟಿಕೆಗಳ ಮೂಲಕ ಅಲ್ಪ ಸ್ವಲ್ಪ ಆದಾಯ ಗಳಿಸಿ ಜೀವನ ನಿರ್ವಹಿಸುತ್ತಿದ್ದ ಮಹಿಳೆಯರ ಆದಾಯ ನಿಂತಿದೆ. ಇದರಿಂದಾಗಿ ಜೀವನವೇ ದುಸ್ತರವಾಗಿರುವ ಸಂದರ್ಭದಲ್ಲಿ ಬ್ಯಾಂಕ್, ಸಹಕಾರ ಸಂಘಗಳು, ಎಂ.ಎಫ್.ಐ ಗಳಿಂದ ಪಡೆದ ಸಾಲ, ಬಡ್ಡಿ ತೀರಿಸುವ ಯಾವ ದಾರಿಯೂ ಇಲ್ಲದಾಗಿದೆ. ಭಾರತೀಯ ರಿಜರ್ವ್ ಬ್ಯಾಂಕಿನ ಆದೇಶವನ್ನೂ ಮೀರಿ ಎಂ.ಎಫ್.ಐಗಳು, ಧರ್ಮಸ್ಥಳ ಸಂಘಗಳು ಸಾಲ ಮತ್ತು ಬಡ್ಡಿ ವಸೂಲಿಗೆ ಮುಂದಾಗಿವೆ. ಸಾಲ ತೀರಿಸಲು ಅಶಕ್ತರಾದ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯದ ಬೆದರಿಕೆ ಒಡ್ಡಲಾಗುತ್ತಿರುವಂತಹ ಸನ್ನಿವೇಶ ರಾಜ್ಯ ಸರ್ಕಾರದ ಗಮನದಲ್ಲಿಲ್ಲ ಎನ್ನುವುದು ಖಂಡನೀಯ.

ಬೆಳೆದ ಬೆಳಗೆ ಮಾರುಕಟ್ಟೆ ವ್ಯವಸ್ಥೆ ಇಲ್ಲದೆ ರೈತಾಪಿ ಕುಟುಂಬಗಳು ಕಂಗಾಲಾಗಿವೆ. ರೈತಾಪಿ ಕೆಲಸವನ್ನೇ ನಂಬಿಕೊಂಡಿರುವ ಕೃಷಿ ಕೂಲಿಕಾರ ಮಹಿಳೆಯರು ತೀವ್ರ ಸಂಕಷ್ಟಕ್ಕೆ ಗುರಿಯಾಗಿದ್ದಾರೆ. ಜನರ ಕೊಳ್ಳುವ ಸಾಮರ್ಥ್ಯ ಈ ಅವಧಿಯಲ್ಲಿ ತೀವ್ರವಾಗಿ ಕುಸಿದು ಅದು ಮಹಿಳೆ ಮತ್ತು ಮಕ್ಕಳ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರಿದೆ. ಆರ್ಥಿಕ ಸಮಸ್ಯೆಗಳು ಒಂದೆಡೆಯಾದರೆ ಮಹಿಳೆ ಎಂಬ ಕಾರಣಕ್ಕೆ, ಅವಳು ಕುಟುಂಬಗಳಲ್ಲಿ, ದುಡಿಮೆಯ ಸ್ಥಳಗಳಲ್ಲಿ ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಕನಿಷ್ಟ ಗಮನವನ್ನು ಸರ್ಕಾರ ತೋರಿಸದಿರುವುದನ್ನು ಸಿ.ಪಿ.ಐ(ಎಂ) ಪ್ರಶ್ನಿಸುತ್ತದೆ.

ಕೋವಿಡ್ ಸಂದರ್ಭದ ಪರಿಹಾರ ಪ್ಯಾಕೇಜ್‌ಗಳಲ್ಲಿ ಲಿಂಗ ಸಂವೇದನೆಯ ಕೊರತೆ ಎದ್ದು ಕಾಣುತ್ತಿದೆ. ಇದನ್ನು ಸರಿಪಡಿಸಲು ಮಹಿಳೆಯರ ಸಮಸ್ಯೆಗಳ ಪರಿಹಾರಕ್ಕೆ ವಿಶೇಷ ಪ್ಯಾಕೇಜ್ ಗಳನ್ನು ಘೋಷಿಸಬೇಕು. ಪರ್ಯಾಯ ವ್ಯವಸ್ಥೆಗಳನ್ನು ರೂಪಿಸಲು ಮುಂದಾಗಬೇಕೆಂದು ಸಿ.ಪಿ.ಐ(ಎಂ) ಒತ್ತಾಯಿಸುತ್ತದೆ.

ಮಹಿಳೆಯರ ಮೇಲಿನ ಹಿಂಸೆಯ ತಡೆಗಾಗಿ ಸಿ.ಪಿ.ಐ(ಎಂ) ಹಕ್ಕೊತ್ತಾಯಗಳು

- ಪೋಲೀಸ್ ಸ್ಟೇಷನ್‌ಗಳು, ಪೋಲೀಸ್ ಇಲಾಖೆಗಳೇ ಲಾಕ್ ಡೌನ್ ಮತ್ತು ಸೀಲ್ ಡೌನ್ ಗೆ ಒಳಗಾಗಿರುವ ಸಂದರ್ಭಗಳಲ್ಲಿ ಮಹಿಳೆಯರ ನೆರವಿಗೆ ಪರ್ಯಾಯ ವ್ಯವಸ್ಥೆಗಳ ಮೂಲಕ ಎಲ್ಲ ಜಿಲ್ಲೆಗಳಲ್ಲೂ ಹೆಲ್ಪಲೈನ್ ಗಳನ್ನು ಕ್ರಿಯಾಶೀಲಗೊಳಿಸಬೇಕು. ತಕ್ಷಣಕ್ಕೆ ಸ್ಪಂದಿಸಬೇಕು.
- ಕೇರಳ ಸರ್ಕಾರದ ಮಾದರಿಯ ವಾಟ್ಸ್‌ಪ್ ಗುಂಪುಗಳನ್ನು ರಚಿಸಿ ವ್ಯಾಪಕವಾಗಿ ಪ್ರಚಾರ ನೀಡಬೇಕು.
- ಮಾಧ್ಯಮಗಳ ಮೂಲಕ ಮಹಿಳೆಯರ ಮೇಲಿನ ದೌಜ್ಯನ್ಯಗಳ ವಿರುದ್ಧ ಪ್ರಚಾರ ಮಾಡುವಂತೆ, ಅವುಗಳಿಗೆ ಸಂಬಂಧಿಸಿದ ಕಾನೂನುಗಳು ಮತ್ತು ಶಿಕ್ಷೆಯ ಕುರಿತು ಪ್ರಚಾರ ಮಾಡಬೇಕು.
- ಮಹಿಳಾ ಆಯೋಗ ಮತ್ತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗಳ ಶಾಖೆಗಳು ತಾಲೂಕು ಮಟ್ಟಗಳಲ್ಲಿ ಕಾರ್ಯ ನಿರ್ವಹಿಸಬೇಕು. ಪಂಚಾಯತ್ ಮಟ್ಟಗಳಲ್ಲಿ ದೂರು ದಾಖಲಿಸಲು ವ್ಯವಸ್ಥೆ ಮಾಡಬೇಕು.
- ಕೌಟುಂಬಿಕ ದೌರ್ಜನ್ಯದಿಂದ ರಕ್ಷಣೆ ನೀಡಲು ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆಯನ್ವಯ ರಕ್ಷಣಾ ವ್ಯವಸ್ಥೆಗಳನ್ನು ಬಿಗಿ ಮಾಡಬೇಕು. ರಕ್ಷಣಾ ಅಧಿಕಾರಿಗಳ ಸಹಾಯ ಸಿಗುವಂತೆ ಕ್ರಮವಹಿಸಬೇಕು.
- ದೌರ್ಜನ್ಯಕ್ಕೊಳಗಾದ ಮಹಿಳೆಯರಿಗೆ ಆರ್ಥಿಕ ನೆರವು ಮತ್ತು ಸುರಕ್ಷಿತ ವಸತಿ ವ್ಯವಸ್ಥೆ ಮಾಡಬೇಕು.
- ಲಾಕ್‌ಡೌನ್ ಅವಧಿಯಲ್ಲಿ ಅನಗತ್ಯ ಗರ್ಭಧಾರಣೆಗೆ ಹೆಣ್ಣು ಮಕ್ಕಳು ಒಳಗಾಗುತ್ತಿರುವುದು ವರದಿಯಾಗಿದ್ದು ಅದನ್ನು ತಪ್ಪಿಸಲು ಉಚಿತ ಗರ್ಭನಿರೋಧಕಗಳನ್ನು ವಿತರಿಸಬೇಕು.
- ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯಗಳ ದೂರು ದಾಖಲಿಸಿಕೊಳ್ಳಲು ಪೋಲೀಸ್ ಇಲಾಖೆ ಸಬೂಬು ಹೇಳದಂತೆ ಕ್ರಮವಹಿಸಬೇಕು.
- ವಿವಿಧ ಕಾರಣಗಳಿಂದ ನಡೆಯುತ್ತಿರುವ ಬಾಲ್ಯವಿವಾಹಗಳನ್ನು ತಡೆಗಟ್ಟಲು ಕ್ರಮ ಕೈಗೊಳ್ಳಬೇಕು.
- ರಾಯಚೂರು ಮತ್ತು ಹಾಸನ ಜಿಲ್ಲೆಗಳ ದಲಿತರ ಮೇಲಿನ ದೌರ್ಜನ್ಯ ಹಾಗೂ ಅವಮರ್ಯಾದಾ ಹತ್ಯೆಗಳ ಆರೋಪಿಗಳನ್ನು ಬಂಧಿಸಿ ಉಗ್ರಶಿಕ್ಷೆಯಾಗುವಂತೆ ಕ್ರಮ ಕೈಗೊಳ್ಳಬೇಕು.
- ಗರ್ಭಿಣಿ ಮತ್ತು ಬಾಣಂತಿಯರಿಗೆ, ಮಕ್ಕಳಿಗೆ,

ಪುಟ 4 ಕ್ಕೆ

ಕೋವಿಡ್ ನಿಗ್ರಹಕ್ಕೆ ಲಾಕ್‌ಡೌನ್ ಪರಿಹಾರವಲ್ಲ ದ.ಕ. ಜಿಲ್ಲಾ ಸಮಿತಿಯಿಂದ ಅಲ್ಲಲ್ಲಿ ಪ್ರತಿಭಟನೆ

ವರದಿ: ವಾ.ಉ.

ಕರ್ನಾಟಕ ರಾಜ್ಯ ಸರಕಾರವು ಬೆಂಗಳೂರು ಜಿಲ್ಲೆಯನ್ನೂ ಒಳಗೊಂಡಂತೆ ರಾಜ್ಯದ 5 ಜಿಲ್ಲೆಗಳಲ್ಲಿ ಜುಲೈ 16 ರಿಂದ ಜುಲೈ 22ರ ವರೆಗೆ ಲಾಕ್‌ಡೌನ್‌ನ್ನು ಘೋಷಿಸಿತ್ತು. ಕೋವಿಡ್–19 ಪಿಡುಗನ್ನು ನಿಯಂತ್ರಿಸುವ ಸಲುವಾಗಿ ಇದೀಗ ದ್ವಿತೀಯ ಹಂತದ ಲಾಕ್‌ಡೌನ್ ಹಮ್ಮಿಕೊಳ್ಳಲಾಗಿದೆ ಎಂದು ಸರಕಾರ ಹೇಳಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆರೋಗ್ಯ ಇಲಾಖೆ ಮತ್ತು ಕೋವಿಡ್ ಯೋಧರು ಜಿಲ್ಲಾಡಳಿತದ ನಿರ್ದೇಶನದಂತೆ ಕೋವಿಡ್ ಸಂತ್ರಸ್ತರ ಆರೈಕೆ ಮಾಡುತ್ತಿದ್ದರೂ, 2 ತಿಂಗಳಿಗೂ ಮೇಲ್ಪಟ್ಟು ಉದ್ಯೋಗವಿಲ್ಲದೆ ಬಡಜನತೆ ಸಾಕಷ್ಟು ಬಳಲಿದ್ದರು. ಈ ಸಂದರ್ಭದಲ್ಲಿ ಜೂನ್ 1ರಿಂದ ಅನ್‌ಲಾಕ್ ಆದ ಬಳಿಕ ಒಂದಿಷ್ಟು ಚೇತರಿಕೆ ಉಂಟಾಗಿತ್ತು. ಈ ಹಿನ್ನೆಲೆಯಲ್ಲಿ ದ.ಕ.ಜಿಲ್ಲೆಯಲ್ಲಿ ಲಾಕ್‌ಡೌನ್ ಮಾಡುವುದಂತೂ ತೀರಾ ಅನಗತ್ಯವಾಗಿತ್ತು.

ಈ ಸಂದರ್ಭ ಜುಲೈ 14 ರಂದು ಸೇರಿದ ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿ, ಜಿಲ್ಲಾಡಳಿತದ ಅಪ್ರಬುದ್ಧ ನಿಲುವನ್ನು ಪ್ರತಿಭಟಿಸಿ ದ್ವಿತೀಯ ಲಾಕ್‌ಡೌನ್ ವಾರ ಜುಲೈ 16 ರಂದು ಆರಂಭವಾಗುವ ಮುನ್ನಾ ದಿನ ಜುಲೈ 15 ರಂದು ಜಿಲ್ಲೆಯ ಪ್ರಮುಖ ಕೇಂದ್ರಗಳಲ್ಲಿ ಪಕ್ಷ ಸಮಿತಿಗಳು 'ಕೋವಿಡ್ ನಿಗ್ರಹಕ್ಕೆ ಲಾಕ್‌ಡೌನ್ ಪರಿಹಾರವಲ್ಲ' ಎಂಬ ಘೋಷಣೆಯಡಿ ಪ್ರತಿಭಟನೆಯನ್ನು ಹಮ್ಮಿಕೊಳ್ಳುವ ಕಾರ್ಯಕ್ರಮಕ್ಕೆ ಕರೆ ನೀಡಿತು.

ಲಾಕ್‌ಡೌನ್ ಸಂದರ್ಭದಲ್ಲಿ ಜನತೆಗೆ ಆಹಾರ ಸಾಮಾಗ್ರಿಗಳನ್ನು, ಕೊರೋನಾ ಸೋಂಕಿತರಿಗೆ ಉಚಿತ ಚಿಕಿತ್ಸೆಯನ್ನು ಒದಗಿಸಬೇಕು ಹಾಗೂ ಸೀಲ್‌ಡೌನ್ ಪ್ರದೇಶಗಳ ಜನರ ಸಂಕಷ್ಟಗಳಿಗೆ ಸ್ಪಂದಿಸಬೇಕು ಎಂದು ಜುಲೈ 15ರ ಪ್ರತಿಭಟನೆಯಲ್ಲಿ ಆಗ್ರಹಿಸಲಾಯಿತು. ತಾರತಮ್ಯವಿಲ್ಲದೆ ಕೊರೋನಾ ಸೋಂಕಿತರಿಗೆ ಉಚಿತ ಚಿಕಿತ್ಸೆ ನೀಡಬೇಕು, ಆರೋಗ್ಯ ಸಿಬ್ಬಂದಿಗಳಿಗೆ ಸುರಕ್ಷತಾ ಆರೋಗ್ಯ ಕಿಟ್‌ಗಳನ್ನು ಒದಗಿಸಬೇಕು, ಜಿಲ್ಲಾ ವೆನ್‌ಲಾಕ್ ಆಸ್ಪತ್ರೆಯಲ್ಲಿ ತಜ್ಞ ವೈದ್ಯರನ್ನು ನೇಮಕ ಮಾಡಬೇಕು, ಖಾಸಗೀ ಆಸ್ಪತ್ರೆಗಳ ಲೂಟಿಕೋರತನಕ್ಕೆ ಕಡಿವಾಣ ಹಾಕಬೇಕು ಎಂದೂ ಆಗ್ರಹಿಸಲಾಯಿತು.

ಲಾಕ್‌ಡೌನ್ ಎಂಬುದು ಕೇಂದ್ರ ಮತ್ತು ರಾಜ್ಯ ಸರಕಾರಗಳ ವೈಫಲ್ಯವನ್ನು ಮುಚ್ಚಿ ಹಾಕಲು ಮಾಡುವ ಹುನ್ನಾರವಾಗಿದೆ ಎಂದು ಪ್ರತಿಭಟನಾಕಾರರು ಟೀಕಿಸಿದರು. ಜನಸಾಮಾನ್ಯರಿಗೆ ಆಹಾರ ಭದ್ರತೆ, ಆರೋಗ್ಯ ಭದ್ರತೆಯನ್ನು ಒದಗಿಸದೆ ಮಾಡಿದ ಲಾಕ್‌ಡೌನ್ ಜನರ ಕಣ್ಣಿಗೆ ಮಣ್ಣೆರಚುವ ಪ್ರದರ್ಶನವಾಗಿದೆ ಎಂದು ಖಂಡಿಸಲಾಯಿತು.

ಮಂಗಳೂರು ಮಿನಿವಿಧಾನಸೌಧದ ಮುಂದೆ ನಡೆದ ಪ್ರತಿಭಟನೆಯನ್ನುದ್ದೇಶಿಸಿ ಮಂಗಳೂರು ನಗರ ದಕ್ಷಿಣ ಸಮಿತಿ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್, ಡಿವೈಎಫ್‌ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ, ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯ ಜೆ.ಬಾಲಕೃಷ್ಣ ಶೆಟ್ಟಿ ಮಾತನಾಡಿದರು. ಮಾಸ್ಕ್ ಬಳಸಿ ಹಾಗೂ ಅಂತರ ಕಾಪಾಡಿಕೊಂಡು ಪ್ರತಿಭಟನೆ ನಡೆಸಿದ ಪ್ರತಿಭಟನಾಕಾರರು ಭಿತ್ತಿಪತ್ರಗಳ ಪ್ರದರ್ಶನ ಮೂಲಕ ಪ್ರತಿಭಟನೆ ದಾಖಲಿಸಿದರು.

ಗುರುಪುರ ಕೈಕಂಭದಲ್ಲಿ ಗುರುಪುರ ವಲಯ ಸಮಿತಿ ನಡೆಸಿದ ಪ್ರತಿಭಟನೆಯನ್ನುದ್ದೇಶಿಸಿ ಸಿಪಿಐ(ಎಂ) ಜಿಲ್ಲಾ ಸಮಿತಿ ಕಾರ್ಯದರ್ಶಿ ವಸಂತ ಆಚಾರಿ, ವಲಯ ಕಾರ್ಯದರ್ಶಿ ಸದಾಶಿವ ದಾಸ್, ಹಿರಿಯ ಜಿಲ್ಲಾ ಸಮಿತಿ ಸದಸ್ಯ ಯು.ಬಿ.ಲೋಕಯ್ಯ ಮಾತನಾಡಿದರು.

ಮೂಡಬಿದರೆ ತಾಲೂಕು ಕಚೇರಿ ಮುಂದೆ ನಡೆದ ಪ್ರತಿಭಟನೆಯನ್ನುದ್ದೇಶಿಸಿ ಜಿಲ್ಲಾ ಸಮಿತಿ ಕಾರ್ಯದರ್ಶಿ ವಸಂತ ಆಚಾರಿ, ರಾಜ್ಯ ಸಮಿತಿ ಸದಸ್ಯ ಯಾದವ ಶೆಟ್ಟಿ, ಮೂಡಬಿದ್ರಿ ವಲಯ ಕಾರ್ಯದರ್ಶಿ ರಮಣಿ ಮೂಡಬಿದ್ರಿ ಮಾತನಾಡಿದರು.

ತೊಕ್ಕೊಟ್ಟು ಬಸ್ ನಿಲ್ದಾಣದಲ್ಲಿ ನಡೆದ ಪ್ರತಿಭಟನಾ ಪ್ರದರ್ಶನವನ್ನುದ್ದೇಶಿಸಿ ಸಿಪಿಐ(ಎಂ) ಉಳ್ಳಾಲ ವಲಯ ಕಾರ್ಯದರ್ಶಿ ಕೃಷ್ಣಪ್ಪ ಸಾಲ್ಯಾನ್, ದ.ಕ.ಜಿಲ್ಲಾ ಸಮಿತಿ ಸದಸ್ಯ ವಾಸುದೇವ ಉಚ್ಚಿಲ್ ಮಾತನಾಡಿದರು.

ಬೆಳ್ತಂಗಡಿ ಮಿನಿವಿಧಾನಸೌಧದ ಎದುರು ನಡೆದ ಪ್ರತಿಭಟನೆಯನ್ನುದ್ದೇಶಿಸಿ ಸಿಪಿಐ(ಎಂ) ಬೆಳ್ತಂಗಡಿ ತಾಲೂಕು ಕಾರ್ಯದರ್ಶಿ ಶಿವಕುಮಾರ್, ತಾಲೂಕು ಸಮಿತಿ ಸದಸ್ಯ ವಸಂತ ನಡ ಮಾತನಾಡಿದರು. ಭಿತ್ತಿಪತ್ರ ಪ್ರದರ್ಶನ ಮೂಲಕವೂ ಪ್ರತಿಭಟನೆಯನ್ನು ದಾಖಲಿಸಲಾಯಿತು.

ರೈಲ್ವೆ ಖಾಸಗೀಕರಣದ ವಿರುದ್ಧ ತೊಕ್ಕೋಟಿನಲ್ಲಿ ಪ್ರತಿಭಟನೆ:

ಜುಲೈ 17ರಂದು ರೈಲ್ವೆ ಖಾಸಗೀಕರಣದ ವಿರುದ್ಧ ಅಖಿಲ ಭಾರತ ಮಟ್ಟದಲ್ಲಿ ಪ್ರತಿಭಟನೆಗೆ ಸಿಪಿಐ(ಎಂ) ಪಕ್ಷ ಕರೆಕೊಟ್ಟಿತ್ತು. ದ.ಕ.ಜಿಲ್ಲೆಯಲ್ಲಿ ಲಾಕ್‌ಡೌನ್ ಜಾರಿಯಲ್ಲಿದ್ದುದರಿಂದ ಪ್ರತಿಭಟನೆ ಸಾಧ್ಯವಾಗಲಿಲ್ಲ. ಆದಾಗ್ಯೂ ಉಳ್ಳಾಲ ವಲಯದ ಕುತ್ತಾರಿನಲ್ಲಿ ಪಕ್ಷದ ಜಿಲ್ಲಾ ಸಮಿತಿ ಸದಸ್ಯ ಯು.ಜಯಂತ ನಾಯಕ್ ಅವರ ನೇತೃತ್ವದಲ್ಲಿ 10 ಮಂದಿ ಸೇರಿ ಪ್ರತಿಭಟನೆ ನಡೆಸಿದರು.

ರೈಲ್ವೆ ಮಾರಾಟ ಮಾಡಬೇಡಿ, ಖಾಸಗೀಕರಣ ನಿಲ್ಲಿಸಿ–ಎಂಬ ಪ್ರತಿಭಟನಾ ಭಿತ್ತಿಪತ್ರಗಳನ್ನು ಕೈಯಲ್ಲಿ ಹಿಡಿದುಕೊಂಡು ಘೋಷಣೆ ಕೂಗಿದ್ದಲ್ಲದೆ, ಪ್ರತಿಭಟನಾಕಾರರನ್ನುದ್ದೇಶಿಸಿ ಯು. ಜಯಂತ ನಾಯಕ್ ಮಾತನಾಡಿದರು.

ಉಡುಪಿ ಮತ್ತು ಕುಂದಾಪುರ ರೈಲ್ವೇ ನಿಲ್ದಾಣಗಳಲ್ಲಿ ಪ್ರತಿಭಟನೆ:

ಉಡುಪಿ ಜಿಲ್ಲೆಯಲ್ಲಿ ಲಾಕ್‌ಡೌನ್ ಇಲ್ಲದ ಕಾರಣ, ಸಿಪಿಐ(ಎಂ) ಉಡುಪಿ ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಉಡುಪಿಯ ರೈಲ್ವೇ ನಿಲ್ದಾಣದಲ್ಲಿಯೂ, ಸಿಪಿಐ(ಎಂ) ಕುಂದಾಪುರ ವಲಯ ಸಮಿತಿ ನೇತೃತ್ವದಲ್ಲಿ ಕುಂದಾಪುರ ರೈಲ್ವೇ ನಿಲ್ದಾಣದಲ್ಲಿಯೂ, ಬೈಂದೂರು ವಲಯ ಸಮಿತಿ ನೇತೃತ್ವದಲ್ಲಿ ಬೈಂದೂರು ರೈಲ್ವೇ ನಿಲ್ದಾಣದಲ್ಲಿಯೂ ಭಿತ್ತಿಪತ್ರಗಳೊಂದಿಗೆ ಪ್ರತಿಭಟನಾ ಪ್ರದರ್ಶನಗಳನ್ನು ನಡೆಸಲಾಯಿತು.

ಉಡುಪಿ ರೈಲ್ವೇ ನಿಲ್ದಾಣದಲ್ಲಿ ನಡೆದ ಪ್ರತಿಭಟನೆಯನ್ನುದ್ದೇಶಿಸಿ ಸಿಪಿಐ(ಎಂ) ಉಡುಪಿ ಜಿಲ್ಲಾ ಸಮಿತಿ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ ಮಾತನಾಡಿದರು. ಕುಂದಾಪುರ ಪ್ರತಿಭಟನೆಯಲ್ಲಿ ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯ ಕೆ.ಶಂಕರ್, ಕುಂದಾಪುರ ವಲಯ ಸಮಿತಿ ಕಾರ್ಯದರ್ಶಿ ಎಚ್.ನರಸಿಂಹ, ವಲಯ ಸಮಿತಿ ಸದಸ್ಯ ಮಹಾಬಲ ವಡೇರಹೋಬಳಿ, ಬೈಂದೂರು ವಲಯ ಕಾರ್ಯದರ್ಶಿ ಸುರೇಶ್ ಕಲ್ಲಾಗರ ಭಾಗವಹಿಸಿದ್ದರು. ಬೈಂದೂರು ನಿಲ್ದಾಣದಲ್ಲಿ ನಡೆದ ಪ್ರತಿಭಟನಾ ಪ್ರದರ್ಶನದಲ್ಲಿ ಜಿಲ್ಲಾ ಸಮಿತಿ ಸದಸ್ಯ ವೆಂಕಟೇಶ ಕೋಣಿ ಭಾಗವಹಿಸಿದ್ದರು.

ಕೋವಿಡ್ ಅವಧಿಯಲ್ಲಿ ಹೆಚ್ಚುತ್ತಿರುವ ...... ಪುಟ 3 ರಿಂದ

ಹಿರಿಯ ನಾಗರೀಕರಿಗೆ ವೈದ್ಯಕೀಯ ಸಂಚಾರಿ ವಾಹನಗಳ ಮೂಲಕ ಅವರಿದ್ದಲ್ಲೇ ಚಿಕಿತ್ಸೆ ಮತ್ತು ಔಷದಿಗಳನ್ನು ಉಚಿತವಾಗಿ ನೀಡಬೇಕು.

- ಲಾಕ್ ಡೌನ್ ಮತ್ತು ಸೀಲ್ ಡೌನ್ ಪ್ರದೇಶಗಳಲ್ಲಿ ಸಾರಿಗೆ ವ್ಯವಸ್ಥೆಗಳಿಲ್ಲದಿರುವುದರಿಂದ ಆ ಪ್ರದೇಶದ ಗರ್ಭಿಣಿಯರು ಆಸ್ಪತ್ರೆಗಳನ್ನು ತಪುಪಲು ಮತ್ತು ವಿಶೇಷ ಚಿಕಿತ್ಸೆಗಳಿಗಾಗಿ ಪ್ರತ್ಯೇಕ ಆಂಬ್ಯುಲೆನ್ಸ್‌ಗಳು ಘೋಷಿಸಬೇಕು.
- ಕೋವಿಡೇತರ ಸಾಮಾನ್ಯ ಚಿಕಿತ್ಸೆಗಳಿಗೆ ಸರಿಯಾದ ವ್ಯವಸ್ಥೆ ಕಲ್ಪಿಸಬೇಕು.
- ಸ್ವ ಸಹಾಯ ಸ್ತ್ರೀ ಶಕ್ತಿ ಸಂಘಗಳ ಮಹಿಳೆಯರ ಹಳೆಯ ಸಾಲ ಮತ್ತು ಬಡ್ಡಿ ಮನ್ನಾ ಮಾಡಬೇಕು. ಬಡ್ಡಿ ರಹಿತ ಹೊಸ ಸಾಲ ನೀಡಬೇಕು. ಸಾಲ ವಸೂಲಿಗಾಗಿ ಕಿರುಕುಳ ಕೊಡುವ ಸಂಸ್ಥೆಗಳ ಮೇಲೆ ಕಾನೂನು ಕ್ರಮಕೈಗೊಳ್ಳಬೇಕು.
- ಲಾಕ್‌ಡೌನ್ ಅವಧಿಯಲ್ಲಿ ಗ್ರಾಮಾಂತರದಲ್ಲಿ 80% ನಗರ ಪ್ರದೇಶಗಳಲ್ಲಿ 60% ಕೆಲಸವನ್ನು ಕಳೆದುಕೊಂಡಿದ್ದು ಅವರಲ್ಲಿ ಹೆಚ್ಚಿನವರು ಮಹಿಳೆಯರು. ಹಾಗಾಗಿ ಮಹಿಳೆಯರ ಕೆಲಸ ಮತ್ತು ಸಂಬಳನ್ನು ಉಳಿಸಬೇಕು.
- ವಲಸೆ ಕಾರ್ಮಿಕರ ಕುಟುಂಬಗಳಿಗೆ ಆಶ್ರಯವನ್ನು ನೀಡಿ. ಸುಲಭವಾಗಿ ಪರಿಹಾರ ಕ್ರಮಗಳು ತಲುಪುವಂತೆ ಏಕಗವಾಕ್ಷಿಯಂಥಹ ಕ್ರಮಗಳಿಗೆ ಸರ್ಕಾರ ಮುಂದಾಗಬೇಕು
- ಫ್ರಂಟ್ ಲೈನ್ ಕೊವಿಡ್ ವಾರಿಯರ್ಸ್ ಆಗಿ ಸೇವೆ ಸಲ್ಲಿಸುತ್ತಿರುವ ಸ್ಕೀಂ ವರ್ಕರ್ಸ್ ಗಳಿಗೆ ಸುರಕ್ಷತಾ ಕ್ರಮಗಳ ಜೊತೆ ಸರಿಯಾದ ವೇತನ, ಭತ್ಯೆ ಮತ್ತು ವಿಮಾಸೌಲಭ್ಯ ಕಲ್ಪಿಸಬೇಕು.
- ಬಿ.ಪಿ.ಎಲ್ ಮತ್ತು ಎ.ಪಿ.ಎಲ್ ತಾರತಮ್ಯವಿಲ್ಲದೆ ಎಲ್ಲ ಕುಟುಂಬಗಳಿಗೆ ಒಂದೇ ತೆರನಾದ ಜೀವನಾಗತ್ಯ ಆಹಾರ ದಿನಸಿಯನ್ನು ತಲಾ 10 ಕೆ.ಜಿ.ಯಂತೆ ಮನೆ ಮನೆಗೆ ವಿತರಿಸಬೇಕು. ಉಚಿತ ಸಿಲಿಂಡರ್ ನೀಡಬೇಕು.
- ದೌರ್ಜನ್ಯದ ಮೂಲ ಆರ್ಥಿಕ ಕಾರಣಗಳಾಗಿರುವುದರಿಂದ ಆದಾಯ ತೆರಿಗೆ ವ್ಯಾಪ್ತಿಯ ಹೊರಗಿರುವ ಎಲ್ಲ ಕುಟುಂಬಗಳಿಗೆ ಮುಂದಿನ ಆರು ತಿಂಗಳುಗಳ ಕಾಲ ತಲಾ7500/ ನೇರ ನಗದು ವರ್ಗಾವಣೆ ಮಾಡುವಂತೆ ಕೇಂದ್ರ ಸರಕಾರದ ಮೇಲೆ ಒತ್ತಡ ತರಬೇಕು.
- ಕೋವಿಡ್ ಭಯದಿಂದ ಮತ್ತು ಆರ್ಥಿಕ ಅಭದ್ರತೆಗೆ ಒಳಗಾಗಿರುವ ಮಹಿಳೆಯರ ಮಾನಸಿಕ ಸಮಸ್ಯೆಗಳ ನಿವಾರಣೆಗೆ ವಾರ್ಡ್ ಮತ್ತು ಪಂಚಾಯತಿ ಮಟ್ಟದಲ್ಲಿ ಕೌನ್ಸಿಲಿಂಗ್ ಸೆಂಟರ್‌ಗಳನ್ನು ಆರಂಭಿಸಬೇಕು.
- ಮನರೇಗಾವನ್ನು ಸಮರ್ಪಕವಾಗಿ ಜಾರಿಗೊಳಿಸಬೇಕು. 200 ದಿನ ಕೆಲಸ ನೀಡಬೇಕು. ದಿನಕ್ಕೆ 600 ರೂ ಕೂಲಿ ನೀಡಬೇಕು. ನಗರದಲ್ಲಿ ನಗರ ಉದ್ಯೋಗ ಖಾತ್ರಿ ಯೋಜನೆಯನ್ನು ಜಾರಿಗೊಳಿಸಲು ಕೇಂದ್ರ ರಾಜ್ಯ ಸರ್ಕಾರಗಳು ಆದ್ಯ ಗಮನ ನೀಡಬೇಕು.
- ಕೋವಿಡ್ ಪರಿಹಾರ ಕಾರ್ಯಗಳಲ್ಲಿ ಧರ್ಮ, ಜಾತಿ ತಾರತಮ್ಯ/ಲಿಂಗತಾರತಮ್ಯ ಮಾಡಬಾರದು.
- ಮಾತೃಶ್ರೀ ಯೋಜನೆಯನ್ನು ಮುಂದುವರೆಸಬೇಕು.
- ಸಾಂತ್ವನ ಕೇಂದ್ರಗಳಿಗೆ ನೀಡುತ್ತಿರುವ ಅನುದಾನವನ್ನು ಮುಂದುವರೆಸಬೇಕು.

ಯು. ಬಸವರಾಜ

ಕಾರ್ಯದರ್ಶಿ (19–07–2020)

●

ಸರ್ಕಾರಿ ಭೂಮಿ ಸಾಗು ಮಾಡುತ್ತಿರುವ ಬಡ ದಲಿತ ಕುಟುಂಬಗಳ ಭೂಮಿಯನ್ನು ಬಿಡುವ ರೀತಿಯಲ್ಲಿ ತಾವು ಸರ್ವೇ ಮಾಡಿಸುವ ಕಾರ್ಯವನ್ನು ಕೂಡಲೆ ನಿಲ್ಲಿಸಬೇಕು,

ಹಲವು ವರ್ಷಗಳಿಂದ ಸಾಗುವಳಿ ಮಾಡುತ್ತಿರುವ ಬಡ ದಲಿತ ರೈತರಿಗೆ ಸಾಗುವಳಿ ಹಕ್ಕ ಪತ್ರ ನೀಡಬೇಕು

ಮಾನ್ಯ ತಹಶಿಲ್ದಾರರು
ತಾಲೂಕ ಕಛೇರಿ,

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ದಲಿತ ಹಕ್ಕುಗಳ ಸಮಿತಿ ಹಗರಿಬೊಮ್ಮನಹಳ್ಳಿ ಈ ಮೂಲಕ ತಮ್ಮಲ್ಲಿ ಕಳಕಳಿಯಿಂದ ಮನಗಾನಿಸುವುದೇನೆಂದರೆ,

ದಲಿತ ಹಕ್ಕುಗಳ ಸಮಿತಿ ಹಬೊಹಳ್ಳಿ ತಿಳಿಸುವುದೇನೆಂದರೆ ಹಲವು ಬಡ ದಲಿತ ಸಣ್ಣ ರೈತ ಕುಟುಂಗಳು ತಾಲೂಕಿನಲ್ಲಿ ಸರ್ಕಾರಿ ಭೂಮಿಯನ್ನು ಹಲವು ವರ್ಷಗಳಿಂದ ಸಾಗು ಮಾಡುತಿರುವುದು ತಮಗೆ ಗೊತ್ತಿದೆ. ಇದಲ್ಲದೆ ನಮ್ಮ ಪೂರ್ವಜರ ಕಾಲದಿಂದಲು ಸಾಮಾಜಿಕ ಶೋಷಣೆ ಅನುಭವಿಸಿದ್ದಲ್ಲದೆ ನಮ್ಮ ಬದುಕಿಗಾಗಿ ಇನ್ನೊಬ್ಬ ಭೂಮಾಲಿಕರ ಮನೆಯಲ್ಲಿ ನಮ್ಮ ತಂದೆ ತಾಯಿಯರು ಜೀತ ದುಡಿದಿದ್ದಾರೆ, ಇಂತಹ ಸಂದರ್ಭಗಳಲ್ಲಿ ಯಾವ ಭೂಮಿ ಇಲ್ಲದ ಬಡ ದಲಿತ ಕುಟುಂಬಗಳು ವಲಸೆ ಹೋಗುವುದು ಹೆಚ್ಚಾಗಿ ಬದುಕಿಗೆ ಭದ್ರತೆ ಇಲ್ಲದಂತಾಗಿದೆ. ಇದುವರೆಗೂ ಕೆಲವು ಸಮುದಾಯದ ಮಕ್ಕಳು ಶಿಕ್ಷಣ ಉದ್ಯೋಗವೇ ಕಾಣದ ಪರಿಸ್ಥಿತಿಯಲ್ಲಿ ➚



ಉದ್ಯೋಗ ಖಾತ್ರಿ ಹಕ್ಕೊತ್ತಾಯಗಳನ್ನು ಪರಿಹರಿಸಲು ಒತ್ತಾಯ

ಮಾನ್ಯ ಶ್ರೀ ಈಶ್ವರಪ್ಪರವರು,
ಪಂಚಾಯತ್ ರಾಜ್ ಹಾಗೂ ಗ್ರಾಮೀಣಾಭಿವೃದ್ಧಿ ಸಚಿವರು

ತಮಗೆ ತಿಳಿದಂತೆ ರಾಜ್ಯದ ಜನತೆ ಕೋವಿಡ್– 19 ವೈರಾಣು ದಾಳಿಯಲ್ಲಿ ತೀವ್ರ ಸಂಕಷ್ಟದಲ್ಲಿ ಸಿಲುಕಿದೆ. ಕೇಂದ್ರ ಹಾಗೂ ರಾಜ್ಯ ಸರಕಾರಗಳು ಏಕಾಏಕಿ ಲಾಕ್ ಡೌನ್, ಸೀಲ್ ಡೌನ್ ಗಳನ್ನು ಘೋಷಿಸಿವೆ. ಹಲವೆಡೆ ಮುಂದುವರೆಸಿವೆ. ಈ ಕಾರಣಗಳಿಂದ ನಗರ ಪ್ರದೇಶಗಳಲ್ಲಿ ಉದ್ಯೋಗವಿಲ್ಲದೇ ಹಲವರು ಗ್ರಾಮೀಣ ಪ್ರದೇಶಗಳಿಗೆ ವಾಪಾಸು ಬಂದಿದ್ದಾರೆ. ಇನ್ನೂ ಕೆಲವರು ನಗರಗಳಲ್ಲಿಯೇ ಉಳಿದುಕೊಂಡಿದ್ದಾರೆ. ಎರಡೂ ಕಡೆಯೂ ಉದ್ಯೋಗವಿಲ್ಲದೇ ಜನತೆ ತೀವ್ರ ಸಂಕಷ್ಟ, ನಷ್ಟ, ಆರೋಗ್ಯ ಹಾನಿ, ಆಸ್ತಿ ನಷ್ಟ ಮಾಡಿಕೊಂಡಿದ್ದಾರೆ.

ಉದ್ಯೋಗ ಖಾತ್ರಿ ಕೆಲಸವನ್ನು ವಿಸ್ತರಿಸಿ, ಕೂಲಿಯನ್ನ ಹೆಚ್ಚಿಸಿರಿ:

ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗ ಖಾತ್ರಿ ಆರಂಭಿಸಲಾಯಿತಾದರೂ ಕುಟುಂಬದ ನೂರು ದಿನಗಳು ಹಲವೆಡೆ ಮುಕ್ತಾಯಗೊಂಡಿವೆ. ಈ ನೂರು ದಿನಗಳೆಂಬುದು ನಾಲ್ವರು ದುಡಿಯುವವರಿರುವ ಕುಟುಂಬಕ್ಕೆ ಕೇವಲ 25 ದಿನಗಳದ್ದು ಮಾತ್ರವೇ, ಅಥವಾ ಇಬ್ಬರು ದುಡಿಯುವವರಿರುವ ಕುಟುಂಬಕ್ಕೆ ಕೇವಲ 50 ದಿನಗಳು ಮಾತ್ರವೇ ಆಗಿರುತ್ತದೆ. ಅಂದರೇ ಉದ್ಯೋಗವೆಂಬುದು ಒಂದು ಕುಟುಂಬದ ಸದಸ್ಯರಿಗೆ ಸರಾಸರಿ 35 ದಿನಗಳದ್ದು ಮಾತ್ರವೇ ಆಗುತ್ತದೆ. ಹೀಗಾಗಿ ಈ ಕುಟುಂಬಗಳು ಇದೀಗ ಪುನಃ ಉದ್ಯೋಗ ಹೀನವಾಗಿವೆ.

ಆದ್ದರಿಂದ ಉದ್ಯೋಗ ಖಾತ್ರಿಯ ಉದ್ಯೋಗವನ್ನು ಕನಿಷ್ಠ ತಲಾ ಕುಟುಂಬದ ಸದಸ್ಯರಿಗೆ 100 ದಿನಗಳಂತೆ ವಿಸ್ತರಿಸಬೇಕಾಗಿದೆ. ಅದೇ ರೀತಿ, ನಗರಗಳಲ್ಲೂ ಈ ಸಂದರ್ಭದಲ್ಲೂ ಉದ್ಯೋಗಾವಕಾಶಗಳು ಇಲ್ಲದೇ ಇರುವುದರಿಂದ ಪಟ್ಟಣ– ಅರೆನಗರ ಮತ್ತು ನಗರಗಳ ಪ್ರದೇಶಗಳ ಜನತೆಗೂ ಉದ್ಯೋಗ ದೊರೆಯುವಂತೆ ಕ್ರಮ ವಹಿಸ ಬೇಕು. ಮಾತ್ರವಲ್ಲಾ, ಆಯಾ ಪ್ರದೇಶದ ಹೆಚ್ಚಿನ ಕೃಷಿ ಹಾಗೂ ಬೆಳೆ ಸಂಬಂಧಿ ಕೆಲಸವನ್ನು ಉದ್ಯೋಗ ಖಾತ್ರಿ ಕೆಲಸವೆಂದು ಪರಿಗಣಿಸಬೇಕು.

ಅದೇ ರೀತಿ, ಬಹುತೇಕ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಕೂಲಿ ಕೆಲಸದ ಅವಕಾಶಗಳು ಹೊಸ ತಂತ್ರಜ್ಞಾನದ ಬೆಳವಣಿಗೆಗಳಿಂದ ತೀವ್ರವಾಗಿ ಕಡಿತಗೊಳ್ಳುತ್ತಿವೆ. ಹೀಗಾಗಿ ಬಹುತೇಕ ಉದ್ಯೋಗ ಖಾತ್ರಿ ಕೆಲಸವೇ ಆಧಾರವಾಗುತ್ತಿದೆ. ಆದರೇ ಅಲ್ಲಿ ದೊರೆಯುವ ಕೆಲಸ ಮತ್ತು ಕೂಲಿ ಮೊತ್ತ ಬಹಳ ಕಡಿಮೆಯದಾಗಿದೆ. ಇದು ತಲಾ ಆದಾಯವನ್ನ ಸರಾಸರಿ 25 ರೂಗಳಿಗಿಂತಲೂ ಹೆಚ್ಚಿಸದಾಗಿದೆ. ಆದ್ದರಿಂದ ಉದ್ಯೋಗವನ್ನು ತಲಾ ವ್ಯಕ್ತಿಗೆ 100 ದಿನಗಳಿಗೆ ಹೆಚ್ಚಿಸುವುದರೊಂದಿಗೆ, ದಿನದ ಕೂಲಿಯನ್ನು 600 ರೂಗಳಿಗೆ ಹೆಚ್ಚಿಸುವುದು ಮಾತ್ರವೇ ಸ್ವಲ್ಪ ಮಟ್ಟಿಗೆ ಬಡತನದ ರೇಖೆಯಿಂದ ಹೊರಬರಲು ನೆರವಾಗುತ್ತದೆ. ಇದು ಕೈಗಾರಿಕಾಭಿವೃದ್ಧಿಗೆ ಮಾರುಕಟ್ಟೆಯನ್ನು ವೃದ್ಧಿಸಿ ಒದಗಿಸಲಿದೆ.

ಕೋವಿಡ್– 19 ಹಾಗೂ ಅನಾರೋಗ್ಯದ ಸಾವುಗಳಿಗೆ ವಿಮೆ ಒದಗಿಸಿರಿ:

ಕೋವಿಡ್ – 19 ಸಾಂಕ್ರಾಮಿಕ ರೋಗದಿಂದ ರಕ್ಷಣೆ ಪಡೆಯಲು ಅದಾಗಲೇ ಸರಕಾರವೇ ದೈಹಿಕ ಅಂತರ ಹಾಗೂ ಮುಖ ಗವಸು ಉಪಯೋಗಿಸಲು ಸೂಚಿಸಿದೆ ಅದರಂತೆ ಜನತೆ ನಡೆಯುತ್ತಿದ್ದಾರೆ. ಆದರೇ ಕೋವಿಡ್ – 19 ರಿಂದಾಗಲೀ ಅಥವಾ ಇತರೇ ಅನಾರೋಗ್ಯದಿಂದಾಗಲೀ ಮತ್ತು ಅಪಘಾತ, ಹಾವು ಕಡಿತ ಮುಂತಾದ ದುಡಿಮೆ ಪ್ರದೇಶದ ಅಪಾಯಗಳಿಂದ ಸಾವಿಗೀಡಾಗುವ ಕೃಷಿಕೂಲಿಕಾರರು, ಬಡ ರೈತರು, ಕಸುಬುದಾರರು ಇವರಿಗೆ ಯಾವುದೇ ಉಚಿತ ವಿಮಾ ಸೌಲಭ್ಯಗಳಿರುವುದಿಲ್ಲ. ಆದ್ದರಿಂದ ಉದ್ಯೋಗ ಖಾತ್ರಿ ಕೆಲಸಗಾರರಿಗೆ ಕನಿಷ್ಠ 10 ಲಕ್ಷ ರೂಗಳ ಉಚಿತ ವಿಮಾ ಸೌಲಭ್ಯವನ್ನು ಸರಕಾರ ಜಾರಿಗೊಳಿಸುವುದು ಅಗತ್ಯವಿದೆ. ಈ ಕುರಿತು ಅಗತ್ಯ ಕ್ರಮ ವಹಿಸಬೇಕು.

ಮೇಟಿಗಳಿಗೆ ಹೆಚ್ಚುವರಿ ವೇತನ ನಿಗದಿಸಿರಿ:

ಉದ್ಯೋಗ ಖಾತರಿ ಗುಂಪುಗಳ ಕೆಲಸಗಾರರ ವೇತನದಿಂದಲೆ ಹಣವನ್ನು ಕಡಿತಗೊಳಿಸಿ, ಮೇಟಿಗಳಿಗೆ ಹೆಚ್ಚುವರಿ ಭತ್ಯೆ ನೀಡುವ ಯೋಚನೆಯನ್ನು ಕೈಬಿಟ್ಟು, ತಲಾ ಕೆಲಸಗಾರನಿಗೆ ಹತ್ತು ರೂ ಗಳಂತೆ ಸರಕಾರವೇ ಹೆಚ್ಚುವರಿ ವೇತನ ನೀಡಲು ಕ್ರಮವಹಿಸಬೇಕು.

ಕಟ್ಟಡ ಕಾರ್ಮಿಕರೆಂದು ಪರಿಗಣಿಸಿರಿ:

ಈ ಹಿಂದೆ ಉದ್ಯೋಗ ಖಾತ್ರಿ ಕೆಲಸಗಾರರನ್ನು ಕಟ್ಟಡ ಕಾರ್ಮಿಕರೆಂದು ಪರಿಗಣಿಸಿ ಮಂಡಳಿಯಿಂದ ದೊರೆಯುವ ಸೌಲಭ್ಯಗಳನ್ನು ನೀಡಲು ಕ್ರಮವಹಿಸಲಾಗಿತ್ತು. ನಂತರ ಅದನ್ನು ಕೈ ಬಿಡಲಾಗಿದೆ. ಇದರಿಂದ ಕೂಲಿಕಾರರಿಗೆ ದೊಡ್ಡ ಅನ್ಯಾಯವಾಗಿದೆ. ಆದ್ದರಿಂದ ಎಲ್ಲಾ ಉದ್ಯೋಗ ಖಾತ್ರಿ ಕೆಲಸಗಾರರಿಗೆ ಸದರಿ ಸೌಲಭ್ಯ ದೊರೆಯುವಂತೆ ಅಗತ್ಯ ಕ್ರಮವಹಿಸಬೇಕು. ಇದಕ್ಕಾಗಿ ಮಂಡಳಿಗೆ ನೀಡಬೇಕಾದ ಮೊತ್ತವನ್ನು ಉದ್ಯೋಗ ಖಾತ್ರಿ ಯೋಜನೆಯಿಂದಲೇ ಭರಿಸಬೇಕು.

ಜಿ.ಸಿ. ಬಯ್ಯಾರೆಡ್ಡಿ, ಅಧ್ಯಕ್ಷರು. ಯು. ಬಸವರಾಜ
ಪ್ರಧಾನ ಕಾರ್ಯದರ್ಶಿ, ಎಐಕೆಎಸ್
ನಿತ್ಯಾನಂದ ಸ್ವಾಮಿ, ಅಧ್ಯಕ್ಷರು. ಚಂದ್ರಪ್ಪ
ಹೊಸಕೇರಾ, ಪ್ರಧಾನ ಕಾರ್ಯದರ್ಶಿ
ಎಐಎಡಬ್ಲ್ಯೂಯು (22.07.2020)

➘ ಇರುವುದು ತಮಗೆ ಗೊತ್ತಿರುವ ವಿಷಯವೆ.

ಇಂತಹ ಸಂದರ್ಭಗಳಲ್ಲಿ ಕಲವೇ ಕೆಲವು ಕುಟುಂಬಗಳು ಹಳ್ಳಿಗಳಲ್ಲಿ ನೆಲೆನಿಂತು ಸರ್ಕಾರಿ ಭೂಮಿಯನ್ನು ಸಾಗು ಮಾಡುತಿದ್ದಾರೆ. ಇನ್ನೂ ಬಹುತೇಕ ಕುಟುಂಬಗಳಿಗೆ ಯಾವ ಸ್ವಂತ ಆಸ್ತಿ ಯಾಗಲಿ, ಬದುಕಲು ಒಂದು ಸಣ್ಣ ಮನೆ ನಿವೇಶನವಾಗಲಿ ಇಲ್ಲಾ ಎಂಬುದನ್ನು ತಾವು ಮನಗಾನಬೇಕಿದೆ.

ತಾವುಗಳು ಸರ್ಕಾರಿ ಭೂಮಿಯನ್ನು ಸಾಗು ಮಾಡಿದ ಬಡ ಕುಟುಂಬಗಳನ್ನು ಭೂಮಿಯಿಂದ ಬಿಡಿಸಲು ಕೆಲವರ ಒತ್ತಾಯಕ್ಕೆ ಮಣಿದು ಸರ್ವೇ ಆದೇಶ ಮಾಡಿರುವುದು ನಮಗೆ ತುಂಬಾ ನೋವು ತಂದಿದೆ. ಈಗಾಗಲೇ ತಾವು ಗ್ರಾಮ ಲೆಕ್ಕಾಧಿಕಾರಿಗಳ ಸಹಾಯದಿಂದ ಬಡ ದಲಿತ ಕುಟುಂಬಗಳ ಭೂಮಿಯನ್ನು ಸರ್ವೇ ಮಾಡಲು ತಾವು ಹಳ್ಳಿಗಳಿಗೆ ಕಳಿಸಿರುವುದನ್ನು ತಕ್ಷಣ ನಿಲ್ಲಿಸಬೇಕು ಇದರಿಂದ ದಲಿತ ಬಡ ಕುಟುಂಬಗಳು ಆತಂಕಕ್ಕೆ ಒಳಗಾಗಿದ್ದಾರೆ. ಹಲವು ಕುಟುಂಬಗಳು ಹತ್ತು, ಇಪ್ಪತ್ತು ವರ್ಷಗಳಿಂದ ಭೂಮಿಗಾಗಿ ಅರ್ಜಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ. ಆದರೆ ಸರ್ಕಾರ 2019–20ನೇ ಸಾಲಿನಲ್ಲಿ ಅಕ್ರಮ–ಸಕ್ರಮ ಆದೇಶ ಜಾರಿಮಾಡಿದೆ. ಈದರ ಭಾಗವಾಗಿ ಯಾವುದೇ ಕಾರ್ಯಗಳು ಜಾರಿಯಾಗಿಲ್ಲ. ಈ ಕೂಡಲೆ ಸರ್ಕಾರದಿಂದ ಬಡ ದಲಿತ ಕುಟುಂಬಗಳು ಸಾಗು ಮಾಡಿದ ಭೂಮಿ ಸರ್ವೇ ಮಾಡಿಸಿ ನಮಗೆ ಸಕ್ರಮದ ಪಹಣಿಯನ್ನು ಸ್ವತಹ ಖಖಿಲಉ ನಂಬರಿನ ಹಕ್ಕುಪತ್ರವನ್ನು ನೀಡಬೇಕೆಂದು ಒತ್ತಾಯಿಸುತಿದ್ದೇವೆ.

ದೇಶದಲ್ಲಿ ಅಘೋಷಿತ ತುರ್ತು ಪರಿಸ್ಥಿತಿ ಜಾರಿಯಲ್ಲಿದೆ. ದೇಶದ, ರಾಜ್ಯದ ಬಡ ದಲಿತ ಕುಟುಂಬಗಳು ಹಸಿವಿನಿಂದ ಬಳಲುತಿದ್ದಾರೆ. ಇಂತವರಿಗೆ ಆಶ್ರಯ ನೀಡಬೇಕಾದ ತಾವೆ ನಮ್ಮನ್ನು ವಕ್ಕಲೆಬ್ಬಿಸುವುದು ಯಾವ ನ್ಯಾಯ? ದೇಶದಲ್ಲಿ ಹಸಿವು ಹೆಚ್ಚಾಗುತ್ತಿದೆ ಎಲ್ಲಾ ಸಂದರ್ಭದಲ್ಲಿ ಸರ್ಕಾರ ಸಹಾಯ ನೀಡದು. ಆದ್ದರಿಂದ ನಾವು ಬದುಕಲು ಸ್ವಲ್ಪ ಭೂಮಿಯನ್ನು ಸಾಗು ಮಾಡುತಿದ್ದೇವೆ ಇದರಿಂದ ನಾವು ಯಾರಿಗೂ ಮೋಸಮಾಡುವುದಿಲ್ಲ. ದೇಶಕ್ಕೆ, ರಾಜ್ಯಕ್ಕೆ ಮೋಸ ಮಾಡಿ ದೇಶ ಬಿಟ್ಟು ಹೋದವರು ನಿಮ್ಮ ಕಣ್ಣಮುಂದೆ ನಿದರ್ಶನವಿದೆ.

ನಾವು ಹಲವು ವರ್ಷಗಳಿಂದ ಭೂಮಿ ಸಾಗು ಮಾಡುತಿದ್ದೇವೆ ಆದರು ವಲಸೆ ಹೋಗುವುದು ಯಾರಿಂದನು ತಪ್ಪಿಸಲಾಗುತ್ತಿಲ್ಲ. ಇದರಿಂದು ನಮ್ಮ ಕುಟುಂಬಗಳು ದಿಕ್ಕುತಪ್ಪಿ ಮಕ್ಕಳು ಶಿಕ್ಷಣ, ಉದ್ಯೋಗದಿಂದ ವಂಚಿತರಾಗಿದ್ದಾರೆ ಎಂದು ತಮ್ಮ ಮುಂದೆ ನಾವು ತುಂಬ ನೋವಿನಿಂದ ಹೇಳಿಕೊಳ್ಳುತ್ತಿದ್ದೇವೆ. ತಾವು ನಮ್ಮ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಈ ಕೂಡಲೆ ಕೈಗೊಂಡಿರುವ ಸರ್ವೇ ಕಾರ್ಯವನ್ನು ಕೈ ಬಿಡುವಿರೆಂದು ನಂಬಿದ್ದೇವೆ.

ಬೇಡಿಕೆಗಳು:

1) ಸರ್ಕಾರ ನೀಡಿರುವ ಆದೇಶದಂತೆ ಅಕ್ರಮ–ಸಕ್ರಮ ಜಾರಿಗೊಳಿಸಿ ಹಕ್ಕು ಪತ್ರ ನೀಡಬೇಕು, ಪ್ರಸ್ತುತ ಸಾಗು ಮಾಡುವ ಭೂಮಿಗೆ ಸಾಗುವಳಿ ಪತ್ರ ನೀಡಬೇಕು.
2) ಹಳ್ಳಿಗಳಲ್ಲಿ ಕೈಗೊಂಡಿರುವ ಸರ್ವೇ ಕಾರ್ಯವನ್ನು ಕೂಡಲೇ ನಿಲ್ಲಿಸಬೇಕು.
3) ನಾವು ಸಾಗು ಮಾಡಿ ಬಿತ್ತನೆ ಮಾಡಲು ಉಚಿತ ಬೀಜ, ಗೊಬ್ಬರ ನೀಡಿ ಕೃಷಿ ಮಾಡಲು ಪ್ರೋತ್ಸಾಹ ನೀಡಬೇಕು.
4) ದಲಿತ ಕುಟುಂಬಗಳಿಗೆ ಭದ್ರತೆ ನೀಡಿ ವಲಸೆ ಹೋಗದಂತೆ ತಡೆಯಲು ಕೌಶಲ್ಯ ತರಬೇತಿ ನೀಡಬೇಕು.

ಮಾಳಮ್ಮ ಬಿ. ಸಂಚಾಲಕರು,
ತಾಲೂಕು ಸಂಚಾಲನ ಸಮಿತಿ ಸದಸ್ಯರು,
ಹ.ಬೊ.ಹಳ್ಳಿ (24 ಜುಲೈ 2020)

ಕೆಳಕಂಡ ಹಕ್ಕೊತ್ತಾಯಗಳನ್ನು ಪರಿಗಣಿಸಿ ಈಡೇರಿಸಲು ಸಿಐಟಿಯು, ಎಐಕೆಎಸ್, ಎಐಎಡಬ್ಲ್ಯೂಯು ಜಂಟಿ ಕ್ರಿಯಾ ಸಮಿತಿಯಿಂದ ಆಗ್ರಹ

ಮಾನ್ಯ ಪ್ರಧಾನ ಮಂತ್ರಿಗಳು,
ಭಾರತ ಸರಕಾರ

ದೇಶದಾದ್ಯಂತ ಜನತೆ ಒಂದು ಕಡೆ ಆಳಗೊಳ್ಳುತ್ತಿರುವ ಆರ್ಥಿಕ ಬಿಕ್ಕಟ್ಟು ಮತ್ತು ಇನ್ನೊಂದೆಡೆ ಕೋವಿಡ್ – 19 ರ ಸಂಕಷ್ಟವನ್ನು ಅತ್ಯಂತ ಗಂಭೀರವಾಗಿ ಎದುರಿಸುತ್ತಿರುವಾಗ, ತಮ್ಮ ಸರಕಾರ ಜನಗಳ ಜೊತೆ ನಿಂತು ಜನತೆಯ ಹಾಗೂ ದೇಶದ ಆರ್ಥಿಕ ಸಂಕಷ್ಟ ಹಾಗೂ ಆರೋಗ್ಯ ರಕ್ಷಣೆಗೆ ತೊಡಗ ಬೇಕಾದ ಸಂದರ್ಭದಲ್ಲಿ ಅವುಗಳನ್ನು ಪರಿಣಾಮಕಾರಿಯಾಗಿ ಎದುರಿಸಿ ಜನತೆಗೆ ನೆರವಾಗುವ ಬದಲು, ಜನತೆಯನ್ನು ಆರೋಗ್ಯ ಹಾಗೂ ಆರ್ಥಿಕ ಸಂಕಷ್ಟದಲ್ಲಿಯೇ ಬಿಟ್ಟು, ಕಾರ್ಪೋರೇಟ್ ಕಂಪನಿಗಳ ಲೂಟಿಗೆ ದೇಶವನ್ನು ತೆರೆಯುವ ದೇಶ ಹಾಗೂ ಜನ ವಿರೋಧಿ ನೀತಿಗಳನ್ನು ನಾವು ಬಲವಾಗಿ ಖಂಡಿಸುತ್ತೇವೆ ಮತ್ತು ಅಂತಹ ನೀತಿಗಳನ್ನು ತಕ್ಷಣವೇ ಕೈಬಿಡುವಂತೆ ಈ ಮೂಲಕ ಮತ್ತೊಮ್ಮೆ ಒತ್ತಾಯಿಸುತ್ತಿದ್ದೇವೆ.

ಜನತೆ ಹಾಗೂ ದೇಶವನ್ನು ಕೋವಿಡ್ – 19 ಹಾಗೂ ಆರ್ಥಿಕ ಬಿಕ್ಕಟ್ಟಿನಿಂದ ಪಾರು ಮಾಡಲು, ಕೆಳ ಕಂಡ ಹಕ್ಕೊತ್ತಾಯಗಳನ್ನು ಈಡೇರಿಸುವಂತೆ ಬಲವಾಗಿ ಒತ್ತಾಯಿಸುತ್ತೇವೆ. ಅದಕ್ಕಾಗಿ ವಿಶೇಷ ಪ್ಯಾಕೇಜ್ ಘೋಷಿಸಬೇಕು ಮತ್ತು ಜನದ್ರೋಹಿ ತಿದ್ದುಪಡಿ ಕಾಯ್ದೆಗಳನ್ನು ಹಾಗೂ ಸಾರ್ವಜನಿಕ ರಂಗದ ಕೈಗಾರಿಕೆಗಳು ಹಾಗೂ ಹಣಕಾಸು ಸಂಸ್ಥೆಗಳ ಖಾಸಗೀಕರಣವನ್ನು ತಡೆಯಬೇಕೆಂದು ಆಗ್ರಹಿಸುವೆವು.

ಹಕ್ಕೊತ್ತಾಯಗಳು :

1) ಕೋವಿಡ್– 19 ವೈರಾಣುವನ್ನು ಪರಿಣಾಮಕಾರಿಯಾಗಿ ಎದುರಿಸಲು ಅಗತ್ಯ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕು. ಎಲ್ಲಾ ನಾಗರೀಕರುಗಳಿಗೆ ಉಚಿತ ಹಾಗೂ ಸುರಕ್ಷತಾ ಚಿಕಿತ್ಸೆ ದೊರೆಯುವಂತೆ ಕ್ರಮವಹಿಸಬೇಕು. ಇದಕ್ಕಾಗಿ ದೇಶದ ಒಟ್ಟು ಆಂತರಿಕ ಉತ್ಪಾದನೆಯ ಶೇ 3 ರಷ್ಟು ಅಂಶವನ್ನು ವೆಚ್ಚ ಮಾಡಲು ಕ್ರಮವಹಿಸಬೇಕು.
2) ಆದಾಯ ತೆರಿಗೆ ವ್ಯಾಪ್ತಿಗೆ ಬಾರದ ದೇಶದ ಎಲ್ಲಾ ಕುಟುಂಬಗಳಿಗೆ ಕನಿಷ್ಠ ಕೋವಿಡ್ – 19 ಸಮಸ್ಯೆ ಇತ್ಯರ್ಥವಾಗುವವರೆಗೆ ಮಾಸಿಕ 7,500 ರೂಗಳ ನೆರವು ಘೋಷಿಸಬೇಕು.
3) ಈ ಎಲ್ಲಾ ಕುಟುಂಬಗಳ ಸದಸ್ಯರಿಗೆ, ಮಾಸಿಕ ತಲಾ 10 ಏರಿ ಸಮಗ್ರ ಆಹಾರ ಸಾಮಗ್ರಿಗಳನ್ನು ಒದಗಿಸಬೇಕು ಹಾಗೂ ಆರೋಗ್ಯ ಸುರಕ್ಷತಾ ಸಾಮಗ್ರಿಗಳ ಕಿಟ್ ನ್ನು ಒದಗಿಸಬೇಕು.
4) ನಗರ ಹಾಗೂ ಗ್ರಾಮೀಣ ಪ್ರದೇಶದ ಉದ್ಯೋಗ ಕೇಳುವ ಎಲ್ಲಾ ಜನತೆಗೆ ಉದ್ಯೋಗ ಖಾತ್ರಿ ಯೋಜನೆಯಡಿ ತಲಾ ಕುಟುಂಬಕ್ಕೆ ಕನಿಷ್ಠ 200 ದಿನಗಳ ಉದ್ಯೋಗ ನೀಡಬೇಕು. ಕೂಲಿಹಣವನ್ನು ಕನಿಷ್ಠ 600 ರೂಗಳಿಗೆ ಹೆಚ್ಚಿಸಬೇಕು.
5) ವಿದ್ಯಾವಂತ ನಿರುದ್ಯೋಗಿ ಯುವಕ ಹಾಗೂ ಯುವತಿಯರಿಗೆ ನಿರುದ್ಯೋಗ ಭತ್ಯೆ ಮಾಸಿಕ 10,000 ರೂಗಳನ್ನು ಒದಗಿಸಬೇಕು.
6) ಎಲ್ಲ ರೀತಿಯ ಕಾರ್ಮಿಕರುಗಳಿಗೆ ಲಾಕ್ ಡೌನ್ ಅವಧಿಯ ವೇತನವು ದೊರೆಯುವಂತೆ ಅಗತ್ಯ ಕ್ರಮವಹಿಸಬೇಕು. ಕಾರ್ಮಿಕ ಕಾಯ್ದೆಗಳ ದುರ್ಬಲಗೊಳಿಸುವಿಕೆಯನ್ನು ತಕ್ಷಣ ತಡೆಯಬೇಕು.
7) ಸಾರ್ವಜನಿಕ ರಂಗದ ಕೈಗಾರಿಕೆಗಳು ಹಾಗೂ ಹಣಕಾಸು ವಲಯದ ಸಂಸ್ಥೆಗಳ ಖಾಸಗೀಕರಣವನ್ನು ಕೂಡಲೇ ನಿಲ್ಲಿಸಬೇಕು.
8) ವ್ಯವಸಾಯವನ್ನು ಕಾರ್ಪೋರೇಟ್ ಕಂಪನಿಗಳಿಗೆ ವಹಿಸುವ ಎಲ್ಲಾ ಭೂ ಹಾಗೂ ವ್ಯವಸಾಯ ಸಂಬಂಧಿ ತಿದ್ದುಪಡಿ ಕಾಯ್ದೆಗಳನ್ನು ಹಿಂಪಡೆಯಬೇಕು.
9) ಸಾರ್ವಜನಿಕರನ್ನು ಕಾಳಸಂತೆಯ ಲೂಟಿಕೋರತನಕ್ಕೆ ಒಳಪಡಿಸುವ ಅಗತ್ಯ ವಸ್ತುಗಳ ತಿದ್ದುಪಡಿ ಕಾಯ್ದೆ–2020 ನ್ನು ವಾಪಾಸು ಪಡೆಯಬೇಕು.

ಎಸ್. ವರಲಕ್ಷ್ಮಿ, ಅಧ್ಯಕ್ಷರು.
ಮೀನಾಕ್ಷಿ ಸುಂದರಂ,
ಪ್ರಧಾನ ಕಾರ್ಯದರ್ಶಿ. ಸಿಐಟಿಯು
ಜಿ.ಸಿ. ಬಯ್ಯಾರೆಡ್ಡಿ, ಅಧ್ಯಕ್ಷರು. ಯು. ಬಸವರಾಜ
ಪ್ರಧಾನ ಕಾರ್ಯದರ್ಶಿ, ಎಐಕೆಎಸ್
ನಿತ್ಯಾನಂದ ಸ್ವಾಮಿ, ಅಧ್ಯಕ್ಷರು. ಚಂದ್ರಪ್ಪ
ಹೊಸಕೇರಾ, ಪ್ರಧಾನ ಕಾರ್ಯದರ್ಶಿ
ಎಐಎಡಬ್ಲ್ಯೂಯು (23.07.2020)

ಆನ್‌ಲೈನ್ ಶಿಕ್ಷಣ ಕ್ಲಾಸ್ ರೂಂ ಶಿಕ್ಷಣಕ್ಕೆ ಪೂರಕ ಮಾತ್ರ, ಪರ್ಯಾಯ ಅಲ್ಲ



ಶ್ರೀಪಾದ ಭಟ್

ಆನ್–ಲೈನ್ ಶಿಕ್ಷಣವನ್ನು ಕ್ಲಾಸ್‌ರೂಂ ವ್ಯವಸ್ಥೆಗೆ ಪೂರಕವಾಗಿ ಬಳಸಿಕೊಳ್ಳಬಹುದೇ ಹೊರತು ಅದಕ್ಕೆ ಪರ್ಯಾಯವಾಗಿಯಂತೂ ಅಲ್ಲ. ಆನ್–ಲೈನ್ ಸಂಪನ್ಮೂಲ, ಸೇವೆಗಳು ಈಗಿನ ಕ್ಲಾಸ್‌ರೂಂ ಶಿಕ್ಷಣವನ್ನು ಮತ್ತಷ್ಟು ಸುಧಾರಿಸಲು, ಬಲಪಡಿಸಲು ಸಹಾಯಕವಾಗುತ್ತದೆ ಆದರೆ ಅದನ್ನು ಪಲ್ಲಟಗೊಳಿಸಲು ಮಾತ್ರ ಸಾದ್ಯವಿಲ್ಲ. ವಿವಿಧ ಜಾತಿ, ಧರ್ಮ, ಲಿಂಗ, ವರ್ಗ ಇತ್ಯಾದಿಗಳ ಆಧಾರದಲ್ಲಿ ಪ್ರತ್ಯೇಕತೆ ಮತ್ತು ತಾರತಮ್ಯವನ್ನು ಆಚರಿಸುತ್ತಿರುವ ಭಾರತದಂತಹ ದೇಶದಲ್ಲಿ ಶತಮಾನಗಳಿಂದ ಶಿಕ್ಷಣದಿಂದ ವಂಚಿತರಾದ ತಳ ಸಮುದಾಯಗಳು, ದಲಿತರು, ಅಂಚಿನಲ್ಲಿರುವವರು ಸಮಾಜದ ಮುಖ್ಯವಾಹಿನಿಗೆ ಬರಲು ಈಗಿನ ಕ್ಲಾಸ್‌ರೂಂ ಶಿಕ್ಷಣ ವ್ಯವಸ್ಥೆಯಿಂದ ಸಾಧ್ಯವಾಗಿದೆ. ಈ ಪದ್ಧತಿಯಲ್ಲಿನ ಅನೇಕ ಮಿತಿಗಳನ್ನು, ದೌರ್ಬಲ್ಯಗಳನ್ನು ಮೀರಿಕೊಳ್ಳಬೇಕಾಗಿದೆ. ಆನ್–ಲೈನ್ ಶಿಕ್ಷಣವು ಈ ಮಿತಿಗಳನ್ನು ಪರಿಹರಿಸಲು ಬಳಕೆಯಾಗಬೇಕೆ ಹೊರತು ಮಕ್ಕಳು ಶಿಕ್ಷಣದಿಂದ ವಂಚಿತರಾಗುವಂತಹ ಪರಿಸ್ಥಿತಿಗೆ ಕಾರಣವಾಗಬಾರದು.ಆನ್–ಲೈನ್ ಶಿಕ್ಷಣದ ಮಿತಿಗಳು ಮತ್ತು ಅಪಾಯಗಳನ್ನು ಇಲ್ಲಿ ಚರ್ಚಿಸಲಾಗಿದೆ.

ಕೋವಿಡ್ 19 ಕಾಯಿಲೆ ದೇಶದಾದ್ಯಂತ ಹಬ್ಬಿಕೊಂಡು ಮೂರು ತಿಂಗಳ ಮೇಲಾಗಿದೆ. ಇದರ ಕಾರಣಕ್ಕೆಲಾಕ್ ಡೌನ್ ಪರ್ವ ಆರಂಭವಾಗಿದೆ. ಕಾಯಿಲೆ ಸಾಂಕ್ರಾಮಿಕವಾಗಿ ಹರಡದಂತೆ ತಡೆಯುವ ಒಂದು ಕಾರ್ಯತಂತ್ರವಾಗಿ ಸಹಕಾರಿ ಆಗಲಿದೆ ಎನ್ನುವ ಆಶಯದೊಂದಿಗೆ,ಮಾರ್ಚ24 ರಿಂದ ಮೇ 4ರವರೆಗೆ ಯಾವುದೇ ಮುನ್ಸೂಚನೆ ಇಲ್ಲದೆ ದೇಶ ಪೂರ್ತಿ ಲಾಕ್‌ಡೌನ್ ಹೇರಲಾಯಿತು. ನಂತರ ಇದನ್ನು ಮುಂದುವರೆಸಬೇಕೆ, ಬೇಡವೆ ಎಂಬುದನ್ನು ನಿರ್ದರಿಸಲು ಆಯಾ ರಾಜ್ಯಗಳ ವಿವೇಚನೆಗೆ ಬಿಡಲಾಯಿತು. ಆದರೆ ಬೇರೆ ಬೇರೆ ಇಲಾಖೆಗಳು ಕಾರ್ಯ ನಿರ್ವಹಿಸಿದರೂ ಸಹ ಮಕ್ಕಳ, ವಿದ್ಯಾರ್ಥಿಗಳ ಆರೋಗ್ಯದ ಹಿತದೃಷ್ಟಿಯಿಂದ ಶಾಲಾ ಕಾಲೇಜುಗಳನ್ನು ಮುಚ್ಚಲಾಯಿತು. ನಾಲ್ಕು ತಿಂಗಳ ನಂತರವೂ ತರಗತಿಗಳನ್ನು ಪ್ರಾರಂಭಿಸುವುದರ ಕುರಿತು ಇಂದಿಗೂ ನಿರ್ಧರಿಸಿಲ್ಲ. ಈ ಲಾಕ್‌ಡೌನ್ ಸೆಪ್ಟೆಂಬರ್–ಅಕ್ಟೋಬರ್‌ವರೆಗೂ ಮುಂದುವರೆಯುವ ಸಾಧ್ಯತೆಗಳಿವೆ. ಈ ಅವಧಿಯಲ್ಲಿ ಶೈಕ್ಷಣಿಕ ಚಟುವಟಿಕೆಯನ್ನು ಸಂಪೂರ್ಣ ಸ್ಥಗಿತಗೊಳಿಸುವುದನ್ನುತಡೆಯಲು,ಮಕ್ಕಳು,ವಿದ್ಯಾರ್ಥಿಗಳು ಶಿಕ್ಷಣವನ್ನು ಮುಂದುವರಿಸಲು 'ಆನ್–ಲೈನ್ ಶಿಕ್ಷಣ', 'ಇ–ಶಿಕ್ಷಣ'ದ ಪ್ರಚಾರ ಪ್ರಾರಂಭವಾಯಿತು.

ಕೊರೋನ ಪೆಂಡಮಿಕ್ ಕಾರಣದಿಂದ ಶೈಕ್ಷಣಿಕ ವಲಯದಲ್ಲಿ ಉಂಟಾದ ಸ್ಥಗಿತತೆಯ ದುರ್ಲಾಭ ಪಡೆಯಲು ಆನ್‌ಲೈನ್ ಶಿಕ್ಷಣ ಶುರು ಮಾಡುತ್ತಿದ್ದಾರೆ ಎನ್ನುವ ಟೀಕೆ ಇದೆ. ವಿದ್ಯಾರ್ಥಿಗಳ ಭವಿಷ್ಯದ ನೆಪದಲ್ಲಿ, ಸಿಲಬಸ್‌ನ್ನು ಪೂರ್ಣಗೊಳಿಸುವ, ಪರೀಕ್ಷೆಗಳನ್ನು ನಡೆಸಲೇಬೇಕಾದ ಅನಿವಾರ್ಯತೆ ಈ ಆನ್–ಲೈನ್ ಶಿಕ್ಷಣದ ಪರವಾದ ನಿರ್ಧಾರಕ್ಕೆ ಕಾರಣವಾಗಿದೆ. ಇಲ್ಲಿ ಶಿಕ್ಷಣದ ಹಕ್ಕುದಾರರಾದ ಪೋಷಕರು ಮತ್ತು ವಿದ್ಯಾರ್ಥಿಗಳು ಗೊಂದಲದಲ್ಲಿದ್ದಾರೆ. ಸಹಜವಾಗಿ ಇವರಿಗೆ ಆರೋಗ್ಯ ಮತ್ತು ಶಿಕ್ಷಣ ಎರಡೂ ಮುಖ್ಯವಾಗುತ್ತದೆ. ಆರೋಗ್ಯವನ್ನು ಮುಂದಿಟ್ಟುಕೊಂಡು ಶಿಕ್ಷಣವನ್ನು ತ್ಯಾಗ ಮಾಡಲು ಮನಸ್ಸಿಲ್ಲ. ಆದರೆ ಶಿಕ್ಷಣಕ್ಕಾಗಿ ಆರೋಗ್ಯವನ್ನು ಬಲಿ ಕೊಡುವುದಂತೂ ಸಾದ್ಯವಿಲ್ಲ. ಇಂತಹ ಬಿಕ್ಕಟ್ಟಿನ ಪರಿಸ್ಥಿತಿಯನ್ನು ನಿವಾರಿಸಬೇಕಾದ ಸರಕಾರಗಳು ಏಕಪಕ್ಷಿಯವಾಗಿ ಆನ್–ಲೈನ್ ಶಿಕ್ಷಣದ ಪರವಾಗಿ ವಕಾಲತ್ತು ವಹಿಸಿರುವುದು ಮಾತ್ರ ಆಕ್ಷೇಪಾರ್ಹವಾಗಿದೆ. ಆರೋಗ್ಯ ವಲಯಕ್ಕೆ ಸಂಬಂಧಪಟ್ಟಂತೆ ಸರಕಾರವು (ಕೇಂದ್ರ ಮತ್ತು ರಾಜ್ಯ) ಕೊರೋನ ವೈರಾಣು ಸಾಂಕ್ರಾಮಿಕ ಪಿಡುಗನ್ನು ನಿವಾರಿಸಲು ಲಸಿಕೆಯನ್ನು ಕಂಡುಹಿಡಿಯವ ಸಂಶೋಧನೆಗಳು ಜಾರಿಯಲ್ಲಿವೆ. ಆದರೆ ಅದು ಮುಂದಿನ ವರ್ಷದಲ್ಲಿ ಬಳಕೆಗೆ ದೊರಕುವ ಸಾದ್ಯತೆಗಳಿವೆ ಎಂದು ವಿಜ್ಞಾನಿಗಳು ಹೇಳುತ್ತಿದ್ದಾರೆ. ಈ ಪೂರ್ಣ ಪ್ರಮಾಣದ ಪರಿಹಾರಕ್ಕೆ ಒಂದು ವರ್ಷ ಕಾಯುವಂತೆಯೂ ಇಲ್ಲ. ಈಗ ತಕ್ಷಣಕ್ಕೆ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಬಲಗೊಳಿಸುವುದು, ಖಾಸಗಿ ವೈದ್ಯಕೀಯ ಸಂಸ್ಥೆಗಳನ್ನು ಈ ಚಿಕಿತ್ಸೆಯಲ್ಲಿ ಪಾಲ್ಗೊಳ್ಳುವಂತೆ ನೋಡಿಕೊಳ್ಳುವುದು ಸರಕಾರದ ಮೊದಲ ಆದ್ಯತೆಯಾಗಬೇಕಿತ್ತು. ಆದರೆ ಎರಡೂ ವಿಷಯಗಳಲ್ಲಿಯೂ ಅದು ವಿಫಲವಾಗಿದೆ.

ಇನ್ನು ಆನ್–ಲೈನ್ ಶಿಕ್ಷಣದ ಪರವಾದ ಚರ್ಚೆಯಲ್ಲಿ ಮುಂಚೂಣಿಯಲ್ಲಿರುವವರು ಖಾಸಗಿ ವಿದ್ಯಾಸಂಸ್ಥೆಗಳು. ಅದರಲ್ಲೂ ಕಾರ್ಪೋರೇಟ್ ರಂಗದ ಶಿಕ್ಷಣ ವ್ಯಾಪಾರಿಗಳು ಇದನ್ನು ಬಲವಾಗಿ ಬೆಂಬಲಿಸುತ್ತಿದ್ದಾರೆ ಮತ್ತು ಇದರ ಪರವಾಗಿ ಪೋಷಕರು ಮತ್ತು ಸರಕಾರದ ಮೇಲೆ ಒತ್ತಡ ತಂತ್ರವನ್ನು ಅನುಸರಿಸುತ್ತಿದ್ದಾರೆ. ಅನೇಕ ಕಾರ್ಪೋರೇಟ್ ಶಿಕ್ಷಣ ಸಂಸ್ಥೆಗಳು ಮೇಲ್ವರ್ಗ, ಮದ್ಯಮವರ್ಗದ ಪೋಷಕರಿಂದ ಆನ್–ಲೈನ್‌ನಲ್ಲಿ ಶುಲ್ಕ ವಸೂಲಿ ಮಾಡಿದ್ದಾರೆ. ಇದಕ್ಕೆ ಪ್ರತಿಯಾಗಿ ಪೋಷಕರು ತರಗತಿಗಳನ್ನು ಪ್ರಾರಂಭಿಸಿ ಎಂದು ಒತ್ತಾಯಿಸುತ್ತಿದ್ದಾರೆ. ಖಾಸಗಿ ಶಿಕ್ಷಣ ಸಂಸ್ಥೆಗಳು ಇದನ್ನು ತಮ್ಮ ಆಸ್ತಿತ್ವದ ಪ್ರಶ್ನೆಯನ್ನಾಗಿ ಪರಿಗಣಿಸಿದ್ದಾರೆ ಮತ್ತು ವಿದ್ಯಾರ್ಥಿಗಳು ತಮ್ಮ ಶಾಲೆ, ಕಾಲೇಜುಗಳನ್ನು ತೊರೆದು ಬೇರೆಡೆ ವಲಸೆ ಹೋಗದಂತೆ ತಡೆಯಲು ಆನ್–ಲೈನ್ ಶಿಕ್ಷಣ ಕೊಡುವುದು ಅವರ ಒಂದು ಕಾರ್ಯತಂತ್ರವಾಗಿದೆ.

ಮತ್ತೊಂದೆಡೆ ಸರಕಾರವು ಪೂರ್ವ ಪ್ರಾಥಮಿಕ, ಪ್ರಾಥಮಿಕ, ಪ್ರೌಢ, ಪದವಿಪೂರ್ವ ಶಿಕ್ಷಣದಲ್ಲಿ ಆನ್–ಲೈನ್ ತರಗತಿಗಳನ್ನು ಪ್ರಾರಂಭಿಸಬೇಕೆ, ಬೇಡವೆ ಎಂದು ನಿರ್ದರಿಸಲು ಎಂ.ಕೆ. ಶ್ರೀಧರ್ ನೇತೃತ್ವದಲ್ಲಿ ತಜ್ಞರ ಸಮಿತಿ ನೇಮಿಸಿತ್ತು. ಇದರಲ್ಲಿ ಪ್ರಗತಿಪರ ಚಿಂತಕರು, ಶಿಕ್ಷಣ ತಜ್ಞರಾದ ನಿರಂಜನರಾದ್ಯರು ಒಬ್ಬ ಸದಸ್ಯರು. ಜುಲೈ ತಿಂಗಳಲ್ಲಿ ಈ ಸಮಿತಿ ತನ್ನ ವರದಿ ಸಲ್ಲಿಸಿದೆ. ಈ ಸಮಿತಿಯು ಎಲ್ಲಿಯೂ ಸಾರಾಸಗಟಾಗಿ ಆನ್–ಲೈನ್ ಶಿಕ್ಷಣ ಬೇಡ ಎಂದು ಹೇಳಿಲ್ಲ. ಬದಲಿಗೆ ಆನ್–ಲೈನ್ ಶಿಕ್ಷಣವಿರಲಿ ಮತ್ತು ಅದಕ್ಕಾಗಿ ನಿರ್ದಿಷ್ಟ ವಿದಾನಗಳು, ಅವಧಿಯನ್ನು ಸೂಚಿಸಿದೆ. ಕರ್ನಾಟಕ ಸರಕಾರ ಈ ಕುರಿತು ಇನ್ನೂ ಈ ನಿರ್ದಾರ ತೆಗೆದುಕೊಂಡಿಲ್ಲ. ಆದರೆ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಎಲ್.ಕೆ.ಜಿ.ಯಿಂದ ಸ್ನಾತಕೋತ್ತರ ಶಿಕ್ಷಣದವರೆಗೂ ಆನ್–ಲೈನ್ ತರಗತಿಗಳು ಪ್ರಾರಂಭವಾಗಿವೆ. ಸರಕಾರಿ ಶಾಲೆಗಳಲ್ಲಿ ಇನ್ನೂ ಇದು ಪ್ರಾರಂಭವಾಗಿಲ್ಲ.

ವರ್ತಮಾನ ಶಿಕ್ಷಣದ ಬಿಕ್ಕಟ್ಟುಗಳು

ಮೇಲಿನ ಪೀಠಿಕೆಯು ಈಗಿನ ಬಿಕ್ಕಟ್ಟನ್ನು ವಿವರಿಸುವ ಸಣ್ಣ ಪ್ರಯತ್ನ ಮಾತ್ರ. ಆದರೆ ಆನ್–ಲೈನ್ ಶಿಕ್ಷಣದ ಸಾಧಕ–ಬಾಧಕಗಳನ್ನು ನಂತರ ಚರ್ಚಿಸೋಣ. ವೈಜ್ಞಾನಿಕ ಶಿಕ್ಷಣದ ಪದ್ಧತಿಯ ಪ್ರಕಾರ, ಮಾನವೀಯತೆ ಮತ್ತು ಬಹುತ್ವದ ನೆಲೆಯಲ್ಲಿ ದೇಶವನ್ನು ಕಟ್ಟಲು, ಹೊಸ ತಲೆಮಾರನ್ನು ರೂಪಿಸಲು ಸಾಮಾಜೀಕರಣದ, ನೆರೆಹೊರೆ ಪದ್ಧತಿ ಒಂದೆ ನಮ್ಮ ಮುಂದಿರುವ ಮಾದರಿ. ಸೌಹಾರ್ದತೆ, ಭ್ರಾತೃತ್ವ ಮತ್ತು ಬಹುಸಂಸ್ಕೃತಿ ಸಮಾಜದ ನಿರ್ಮಾಣಕ್ಕೆ ಶಿಕ್ಷಣ ಒಂದು ಸಾಧನ ಮತ್ತು ಸಾಮಾಜಿಕ ಪರಿವರ್ತನೆಗೂ ಕಾರಣವಾಗುತ್ತದೆ. ಇದನ್ನು ಸಾಧಿಸಲು ಪಠ್ಯಪುಸ್ತಕಗಳ ಆಯ್ಕೆ, ಪಠ್ಯಪುಸ್ತಕಗಳ ರಚನೆ, ಬೋಧನ ಕ್ರಮ, ಕಲಿಕಾ ಕ್ರಮಗಳನ್ನು ಒಳಗೊಂಡ ಅತ್ಯುತ್ತಮ ಗುಣಮಟ್ಟದ 'ವ್ಯಾಸಂಗಕ್ರಮ (ಪೆಡಗಾಜಿ)'ಯನ್ನು ರೂಪಿಸುವುದು ಸಹ ಸರಕಾರದ ಮತ್ತು ಶಿಕ್ಷಕರ, ಪ್ರಾಧ್ಯಾಪಕರ ಜವಾಬ್ದಾರಿಯಾಗಿದೆ. ಈ ಮೇಲಿನ ಶೈಕ್ಷಣಿಕ ವ್ಯವಸ್ಥೆಯನ್ನು ನಿರಂತರವಾಗಿ ಮುಂದುವರೆಸಿಕೊಂಡು ಹೋಗಲು, ಸಾಮಾಜಿಕ ನ್ಯಾಯವನ್ನು ಜಾರಿಗೊಳಿಸಲು ಈಗಿನ ಕ್ಲಾಸ್‌ರೂಂ ಶಿಕ್ಷಣ ಪದ್ಧತಿಯಿಂದ ಮಾತ್ರ ಸಾಧ್ಯ.

ಆನ್–ಲೈನ್ ಶಿಕ್ಷಣವನ್ನು ಕ್ಲಾಸ್‌ರೂಂ ವ್ಯವಸ್ಥೆಗೆ ಪೂರಕವಾಗಿ ಬಳಸಿಕೊಳ್ಳಬಹುದೇ ಹೊರತು ಅದಕ್ಕೆ ಪರ್ಯಾಯವಾಗಿಯಂತೂ ಅಲ್ಲ.ಆನ್–ಲೈನ್ ಸಂಪನ್ಮೂಲ, ಸೇವೆಗಳು ಈಗಿನ ಕ್ಲಾಸ್‌ರೂಂ ಶಿಕ್ಷಣವನ್ನು ಮತ್ತಷ್ಟು ಸುಧಾರಿಸಲು, ಬಲಪಡಿಸಲು ಸಹಾಯಕವಾಗುತ್ತದೆ ಆದರೆ ಅದನ್ನು ಪಲ್ಲಟಗೊಳಿಸಲು ಮಾತ್ರ ಸಾದ್ಯವಿಲ್ಲ. ವಿವಿಧ ಜಾತಿ, ಧರ್ಮ, ಲಿಂಗ, ವರ್ಗ ಇತ್ಯಾದಿಗಳ ಆಧಾರದಲ್ಲಿ ಪ್ರತ್ಯೇಕತೆ ಮತ್ತು ತಾರತಮ್ಯವನ್ನು ಆಚರಿಸುತ್ತಿರುವ ಭಾರತದಂತಹ ದೇಶದಲ್ಲಿ ಶತಮಾನಗಳಿಂದ ಶಿಕ್ಷಣದಿಂದ ವಂಚಿತರಾದ ತಳ ಸಮುದಾಯಗಳು, ದಲಿತರು, ಅಂಚಿನಲ್ಲಿರುವವರು ಸಮಾಜದ ಮುಖ್ಯವಾಹಿನಿಗೆ ಬರಲು ಈಗಿನ ಕ್ಲಾಸ್‌ರೂಂ ಶಿಕ್ಷಣ ವ್ಯವಸ್ಥೆಯಿಂದ ಸಾಧ್ಯವಾಗಿದೆ. ಈ ಪದ್ಧತಿಯಲ್ಲಿನ ಅನೇಕ ಮಿತಿಗಳನ್ನು, ದೌರ್ಬಲ್ಯಗಳನ್ನು ಮೀರಿಕೊಳ್ಳಬೇಕಾಗಿದೆ. ಆನ್–ಲೈನ್ ಶಿಕ್ಷಣವು ಈ ಮಿತಿಗಳನ್ನು ಪರಿಹರಿಸಲು ಬಳಕೆಯಾಗಬೇಕೆ ಹೊರತು ಮಕ್ಕಳು ಶಿಕ್ಷಣದಿಂದ ವಂಚಿತರಾಗುವಂತಹ ಪರಿಸ್ಥಿತಿಗೆ ಕಾರಣವಾಗಬಾರದು.

ಆನ್–ಲೈನ್ ಶಿಕ್ಷಣದ ಮಿತಿಗಳು ಮತ್ತು ಅಪಾಯಗಳನ್ನು ಈ ಕೆಳಗಿನಂತೆ ಚರ್ಚಿಸಬಹುದು:

ಮೂಲ ಸೌಕರ್ಯಗಳ ಕೊರತೆ ಮತ್ತು ಡಿಜಿಟಲ್ ವಿಭಜನೆ

ಗ್ರಾಮೀಣ ಅಭಿವೃದ್ಧಿ ಇಲಾಖೆಯು 2017–18ರಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ನಡೆಸಿದ ಮಿಷನ್ ಅಂತ್ಯೋದಯ ಸಮೀಕ್ಷೆಯ ಪ್ರಕಾರ ಶೇ. 16ರಷ್ಟು ಕುಟುಂಬಗಳಿಗೆ 1–8 ಗಂಟೆ ವಿದ್ಯುತ್ ಸರಬರಾಜಿದೆ. ಶೇ. 33ರಷ್ಟು ಕುಟುಂಬಗಳಿಗೆ 9–12 ಗಂಟೆ, ಶೇ. 47ರಷ್ಟು ಕುಟುಂಬಗಳಿಗೆ 12 ಗಂಟೆಗೂ ಹೆಚ್ಚಿನ ಸಮಯದಲ್ಲಿ ವಿದ್ಯುತ್ ಸರಬರಾಜಿದೆ. ಅಲ್ಲದೆ ಈ ವಿದ್ಯುತ್ ಸರಬರಾಜು ಸಹ ಅನಿಯಮಿತವಾಗಿರುತ್ತದೆ. ಆನ್–ಲೈನ್ ಶಿಕ್ಷಣವನ್ನು ಜಾರಿಗೊಳಿಸಿದರೆ ಶೇ. 84ರಷ್ಟು ಕುಟುಂಬಗಳ ಮಕ್ಕಳು ವಿದ್ಯುತ್ ಸಂಪರ್ಕದ ಕೊರತೆಯ ಕಾರಣಕ್ಕೆ ಶಿಕ್ಷಣದಿಂದ ವಂಚಿತರಾಗುತ್ತಾರೆ.

ಶೇ. 11ರಷ್ಟು ಕುಟುಂಬಗಳು ಕಂಪ್ಯೂಟರ್/ಲ್ಯಾಪ್–ಟಾಪ್ ಹೊಂದಿದ್ದಾರೆ. ಶೇ. 24ರಷ್ಟು ಭಾರತೀಯರ ಬಳಿ ಸ್ಮಾರ್ಟಫೋನ್ ಸೌಲಭ್ಯವಿದೆ. 2017–18ರಲ್ಲಿಎನ್.ಎಸ್.ಎಸ್ ನಡೆಸಿದ ಸಮೀಕ್ಷೆಯ ಪ್ರಕಾರ ಶೇ. 24ರಷ್ಟು ಕುಟುಂಬಗಳು ಅಂತರ್ಜಾಲ (ಇಂಟರ್‌ನೆಟ್) ಸೌಲಭ್ಯ ಹೊಂದಿದ್ದಾರೆ. ಶೇಕಡಾ 66ರಷ್ಟು ಕುಟುಂಬಗಳು ವಾಸಿಸುವ ಗ್ರಾಮೀಣ ಭಾಗದಲ್ಲಿ ಶೇ. 15ರಷ್ಟು ಕುಟುಂಬಗಳ ಬಳಿ ಮಾತ್ರ ಅಂತರ್ಜಾಲ ಸೌಲಭ್ಯವಿದೆ. ನಗರ ಪ್ರದೇಶದಲ್ಲಿ ಶೇ. 47ರಷ್ಟು ಕುಟುಂಬಗಳ ಬಳಿ ಮಾತ್ರ ಅಂತರ್ಜಾಲ ಸೌಲಭ್ಯವಿದೆ. ಇಲ್ಲಿ ಕುಟುಂಬಗಳ ಬಳಿ ಅಂತರ್ಜಾಲದ ಸೌಕರ್ಯವಿದೆ ಎಂದಾಕ್ಷಣ ಅದನ್ನು ಅವರು ಖಾಸಗಿಯಾಗಿ ಹೊಂದಿರುತ್ತಾರೆ ಎಂದು ಅರ್ಥವಲ್ಲ ಮತ್ತು ಇಲ್ಲಿ ಅದು ಎಲ್ಲಾ ಮಕ್ಕಳ ಬಳಿ ಲಭ್ಯವಿದೆ ಎಂದೂ ಅರ್ಥವಲ್ಲ

ಬಡತನ ರೇಖೆಗಿಂತ ಕೆಳಗಿರುವ ಕೆಳಸ್ತರದ ಶೇ.20ರಷ್ಟು ಬಡ ಕುಟುಂಬಗಳಲ್ಲಿ ಶೇ. 2.7 ಪ್ರಮಾಣದ ಕುಟುಂಬಗಳು ಕಂಪ್ಯೂಟರ್ ಹೊಂದಿದ್ದಾರೆ ಮತ್ತು ಶೇ.8.9ರಷ್ಟು ಕುಟುಂಬಗಳು ಅಂತರ್ಜಾಲ ಸೌಕರ್ಯ ಹೊಂದಿವೆ. ಬಡತನ ರೇಖೆಗಿಂತ ಮೇಲಿರುವ ಮೇಲಸ್ತರದ ಶೇ.20ರಷ್ಟು ಬಡ ಕುಟುಂಬಗಳಲ್ಲಿ ಶೇ. 27.6 ಪ್ರಮಾಣದ ಕುಟುಂಬಗಳು ಕಂಪ್ಯೂಟರ್ ಹೊಂದಿದ್ದಾರೆ ಮತ್ತು ಶೇ.50ರಷ್ಟು ಕುಟುಂಬಗಳು ಅಂತರ್ಜಾಲ ಸೌಕರ್ಯ ಹೊಂದಿವೆ. ಅಂತರ್ಜಾಲ ಲಭ್ಯತೆಯಲ್ಲಿಯೂ ಲಿಂಗ ತಾರತಮ್ಯವಿದೆ. 2019ರ ಅಂಕಿಅಂಶಗಳ ಪ್ರಕಾರ ನಗರ/ಪಟ್ಟಣ ಭಾಗದಲ್ಲಿ ಶೇ. 67ರಷ್ಟು ಪುರುಷರು ಮತ್ತು ಶೇ.33ರಷ್ಟು ಮಹಿಳೆಯರ ಬಳಿ ಅಂತರ್ಜಾಲ ಸೌಲಬ್ಯವಿದೆ. ಗ್ರಾಮೀಣ ಭಾಗದಲ್ಲಿ ಶೇ. 72ರಷ್ಟು ಪುರುಷರು ಮತ್ತು ಶೇ.28ರಷ್ಟು ಮಹಿಳೆಯರ ಬಳಿ ಅಂತರ್ಜಾಲ ಸೌಲಭ್ಯವಿದೆ. ಬಹುಸಂಖ್ಯೆಯ ಕುಟುಂಬಗಳು ಒಂದು ಕೋಣೆಯ ಮನೆಯಲ್ಲಿ ವಾಸಿಸುತ್ತಾರೆ. ಇಂತಹ ಕಿರಿದಾದ ಮನೆಯಲ್ಲಿ ಮಕ್ಕಳು, ವಿದ್ಯಾರ್ಥಿಗಳು ಉತ್ತಮ ಗುಣಮಟ್ಟದ ಶಿಕ್ಷಣ ಪಡೆಯುತ್ತಾರೆ ಎಂಬುದು ಒಂದು ಮಿಥ್ಯೆ.



ಇನ್ನು ಲಭ್ಯವಿರುವ ಅಂತರ್ಜಾಲ ಸಂಪರ್ಕವೂ ಸಹ ನಿರಂತರವಾಗಿ ದೊರಕುವುದಿಲ್ಲ. ಬ್ರಾಡ್‌ಬಾಂಡ್ ಅಂತರ್ಜಾಲದಲ್ಲಿ ಶೇ. 53 ಪ್ರಮಾಣದ ಕುಟುಂಬಗಳಿಗೆ ದುರ್ಬಲ ಅಂತರ್ಜಾಲ ಸಂಪರ್ಕವಿದೆ, ಶೇ. 53 ಪ್ರಮಾಣದ ಕುಟುಂಬಗಳಿಗೆ ಸಿಗ್ನಲ್‌ನ ತೊಂದರೆ ಇದೆ. ಮೊಬೈಲ್ ಅಂತರ್ಜಾಲದಲ್ಲಿ ಶೇ. 40.2 ಪ್ರಮಾಣದ ಕುಟುಂಬಗಳಿಗೆ ದುರ್ಬಲ ಅಂತರ್ಜಾಲ ಸಂಪರ್ಕವಿದೆ, ಶೇ. 56.6 ಪ್ರಮಾಣದ ಕುಟುಂಬಗಳಿಗೆ ಸಿಗ್ನಲ್‌ನ ತೊಂದರೆ ಇದೆ. ಇದಲ್ಲದೆ ಈಗಿನ ಸಂದರ್ಭದಲ್ಲಿ ವೇಗ ಸಂಪರ್ಕಕ್ಕೆ ಅಗತ್ಯವಿರುವ 4ಜಿ ಸಂಪರ್ಕ ಗ್ರಾಮೀಣ ಭಾಗದಲ್ಲಿ ದೊರಕುವುದಿಲ್ಲ. (ಅಂಕಿ ಅಂಶಗಳು: ಸ್ಕ್ರಾಲ್. ಇನ್')

ಕರ್ನಾಟಕ ರಾಜ್ಯದಲ್ಲಿ 48,210 ಸರಕಾರಿ ಶಾಲೆಗಳಿವೆ, 7256 ಅನುದಾನಿತ, 19,769 ಅನುದಾನರಹಿತ ಖಾಸಗಿ ಶಾಲೆಗಳಿವೆ. ಸರಕಾರಿ ಶಾಲೆಗಳಲ್ಲಿ 43.8 ಲಕ್ಷ ಮಕ್ಕಳು, ಅನುದಾನಿತ ಶಾಲೆಗಳಲ್ಲಿ 13.4 ಲಕ್ಷ ಮಕ್ಕಳು ಅನುದಾನರಹಿತ ಖಾಸಗಿ ಶಾಲೆಗಳಲ್ಲಿ 44 ಲಕ್ಷ ಮಕ್ಕಳು ವಿದ್ಯಾಬ್ಯಾಸ ಮಾಡುತ್ತಿದ್ದಾರೆ. ಸರಕಾರಿ ಶಾಲೆಗಳಲ್ಲಿ ಶೇ.48ರಷ್ಟು ಹುಡುಗರು, ಶೇ.52ರಷ್ಟು ಹುಡುಗಿಯರು ವ್ಯಾಸಂಗ ಮಾಡುತ್ತಿದ್ದಾರೆ. ಅನುದಾನಿತ ಶಾಲೆಗಳಲ್ಲಿ ಶೇ.52ರಷ್ಟು ಹುಡುಗರು, ಶೇ.48ರಷ್ಟು ಹುಡುಗಿಯರು ವ್ಯಾಸಂಗ ಮಾಡುತ್ತಿದ್ದಾರೆ. ಖಾಸಗಿ ಶಾಲೆಗಳಲ್ಲಿ ಶೇ.56ರಷ್ಟು ಹುಡುಗರು, ಶೇ.44ರಷ್ಟು ಹುಡುಗಿಯರು ವ್ಯಾಸಂಗ ಮಾಡುತ್ತಿದ್ದಾರೆ.

ಸರಕಾರಿ ಶಾಲೆಗಳಲ್ಲಿ 1.35ಲಕ್ಷ ಸಾಮಾನ್ಯ ಕೆಟಗರಿಯ ಮಕ್ಕಳು, 26.4ಲಕ್ಷ ಹಿಂದುಳಿದ ವರ್ಗದ ಮಕ್ಕಳು, 11.1 ಲಕ್ಷ ಪರಿಶಿಷ್ಟ ಜಾತಿಯ ಮಕ್ಕಳು, 4.95 ಲಕ್ಷ ಪರಿಶಿಷ್ಟ ಪಂಗಡದ ಮಕ್ಕಳು, 5.82 ಲಕ್ಷ ಮುಸ್ಲಿಂ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಅನುದಾನಿತ ಶಾಲೆಗಳಲ್ಲಿ 91 ಸಾವಿರ ಸಾಮಾನ್ಯ ಕೆಟಗರಿಯ ಮಕ್ಕಳು, 8.63 ಲಕ್ಷ ಹಿಂದುಳಿದ ವರ್ಗದ ಮಕ್ಕಳು, 2.88 ಲಕ್ಷ ಪರಿಶಿಷ್ಟ ಜಾತಿಯ ಮಕ್ಕಳು, 95 ಸಾವಿರ ಪರಿಶಿಷ್ಟ ಪಂಗಡದ ಮಕ್ಕಳು, 23 ಸಾವಿರ ಮುಸ್ಲಿಂ ಮಕ್ಕಳು ವಿದ್ಯಾಬ್ಯಾಸ ಮಾಡುತ್ತಿದ್ದಾರೆ. ಖಾಸಗಿ ಶಾಲೆಗಳಲ್ಲಿ 9.97 ಲಕ್ಷ ಸಾಮಾನ್ಯ ಕೆಟಗರಿಯ ಮಕ್ಕಳು, 27.4 ಲಕ್ಷ ಹಿಂದುಳಿದ ವರ್ಗದ ಮಕ್ಕಳು, 4.95 ಲಕ್ಷ ಪರಿಶಿಷ್ಟ ಜಾತಿಯ ಮಕ್ಕಳು, 1.64 ಲಕ್ಷ ಪರಿಶಿಷ್ಟ ಪಂಗಡದ ಮಕ್ಕಳು, 7.9 ಲಕ್ಷ ಮುಸ್ಲಿಂ ಮಕ್ಕಳು ವಿದ್ಯಾಬ್ಯಾಸ ಮಾಡುತ್ತಿದ್ದಾರೆ.

ಮೇಲಿನ ಅಂಕಿಅಂಶಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಮುಸ್ಲಿಂ ಸಮುದಾಯದ ಮಕ್ಕಳು ಮೂಲಭೂತ ಸೌಕರ್ಯಗಳ ಕೊರತೆ ಮತ್ತು ಅಂತರ್ಜಾಲದ ಕೊರತೆಯ ಕಾರಣಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಶಿಕ್ಷಣದಿಂದ ವಂಚಿತರಾಗುತ್ತಾರೆ. ಇದನ್ನು ಪದವಿ, ಉನ್ನತ ಶಿಕ್ಷಣಕ್ಕೂ ಅನ್ವಯಿಸಬಹುದು.ಮೇಲಿನ ಅಂಕಿಅಂಶಗಳನ್ನು ವಿಶ್ಲೇಷಿಸಿದಾಗ ಆನ್–ಲೈನ್ ಶಿಕ್ಷಣ ಕಡ್ಡಾಯಗೊಳಿಸಿದರೆ ಯಾವುದೇ ಆಯ್ಕೆಗಳಿಲ್ಲದ ಸರಾಸರಿಯಾಗಿ ಶೇ. 60–80 ಪ್ರಮಾಣದ ಕುಟುಂಬದ ಮಕ್ಕಳು ಸೌಲಭ್ಯಗಳ ಕೊರತೆಯಿಂದಾಗಿ ಶಿಕ್ಷಣದಿಂದ ವಂಚಿತರಾಗುತ್ತಾರೆ. ಇದರಿಂದ ಮತ್ತೆ ಕೇವಲ ಶೇ.10–20 ಪ್ರಮಾಣದ ಉಳ್ಳವರಿಗೆ ಮಾತ್ರ ಶಿಕ್ಷಣ ದೊರಕುತ್ತದೆ. ಅದರಲ್ಲಿಯೂ ಗ್ರಾಮೀಣ ಭಾಗದ ಹೆಣ್ಣುಮಕ್ಕಳಿಗೆ ಅವರ ಪೋಷಕರು ಮನೆಯಲ್ಲಿ ಕುಳಿತು ವ್ಯಾಸಂಗ ಮಾಡುವ ಅವಕಾಶವನ್ನು ಕೊಡುವುದಿಲ್ಲ. ಅಲ್ಲಿನ ಪುರುಷಾಧಿಪತ್ಯದ


ಪುಟ 15 ರಿಂದ



ರಾಜಸ್ಥಾನ ಕಾದಾಟ ಮತ್ತು ಬಿಜೆಪಿಯ ಮಿಶ್ರ ತಂತ್ರಗಳು

ರಾಜಸ್ಥಾನದಲ್ಲಿನ ಪ್ರಸಕ್ತ ಬಿಕ್ಕಟ್ಟಿನ ಮುಖ್ಯ ಲಕ್ಷಣ ಬಿಜೆಪಿಯ ಅಸ್ಥಿರಗೊಳಿಸುವ ಆಟವೇ ಆಗಿದ್ದರೂ, ಈ ಚಿತ್ರದ ಇನ್ನೊಂದು ಮಗ್ಗುಲನ್ನೂ ನೋಡುವುದು ಅಗತ್ಯವಾಗಿದೆ. ಅದೆಂದರೆ, ದೇಶದಲ್ಲಿ ಮುಖ್ಯ ಪ್ರತಿಪಕ್ಷವಾಗಿರುವ ಕಾಂಗ್ರೆಸಿನ ನಿತ್ರಾಣಗೊಂಡಿರುವ ಪರಿಸ್ಥಿತಿ. ಗುಂಪುಗಾರಿಕೆಯ ಜಗಳಗಳಿಂದ, ವಂಶ ರಾಜಕೀಯದಿಂದ ಅದು ಜರ್ಝರಿತಗೊಂಡಿದೆ. ಇದು ಸ್ವಾರ್ಥಪರಾಯಣ ಮತ್ತು ಅಧಿಕಾರದಾಹಿ ಮುಖಂಡರನ್ನು ಮಂಚೂಣಿಗೆ ತಂದಿದೆ. ರಾಜಸ್ಥಾನದ ಬಿಕ್ಕಟ್ಟು ಕಾಂಗ್ರೆಸಿನ ಆಂತರಿಕ ಜಗ್ಗಾಟದಿಂದ ಹುಟ್ಟಿಕೊಂಡಿದೆ. ತನ್ನ ಸದ್ಯದ ಸ್ಥಿತಿಯಲ್ಲಿ ಬಿಜೆಪಿಯ ಸವಾಲನ್ನು ರಾಜಕೀಯವಾಗಿ, ಸೈದ್ಧಾಂತಿಕವಾಗಿ ಮತ್ತು ಸಂಘಟನಾತ್ಮಕವಾಗಿ ಎದುರಿಸಲು ಅದು ಅಸಮರ್ಥವಾಗಿದೆ.

ವ್ಯಂಗ್ಯಚಿತ್ರ: ಸುಭಾನಿ, ಡೆಕ್ಕನ್ ಕ್ರಾನಿಕಲ್



ಜನತೆಯ ತೀರ್ಪು ಮತ್ತು ಪಕ್ಷಾಂತರಿಗಳು



Image posted on Facebook by Sachin Pilot



ಪ್ರಕಾಶ ಕಾರಟ್

ರಾಜಸ್ಥಾನದ ಉಪಮುಖ್ಯಮಂತ್ರಿಯೂ ಮತ್ತು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರೂ ಆಗಿದ್ದ ಸಚಿನ್ ಪೈಲಟ್ ಬಂಡಾಯದ ಪರಿಣಾಮವಾದ ರಾಜಕೀಯ ನಾಟಕ ಇನ್ನೂ ಅನಾವರಣಗೊಳ್ಳುತ್ತಲೇ ಇದೆ. ಆದರೆ ಅದರ ಅಗತ್ಯ ರೂಪುರೇಷೆಗಳು ಸ್ಪಷ್ಟಗೊಂಡಿವೆ. ಕಾಂಗ್ರೆಸಿನ ಆಂತರಿಕ ಜಗಳಾಟವನ್ನು, ಬಿಜೆಪಿಯೇತರ ಸರಕಾರಗಳನ್ನು, ಅದರಲ್ಲೂ ಕಾಂಗ್ರೆಸ್‌ಗೆ ಸೇರಿದವುಗಳನ್ನು, ಅಸ್ಥಿರಗೊಳಿಸುವ ಬಿಜೆಪಿಯ ಓಡಾಟಗಳಿಂದ ಪ್ರತ್ಯೇಕಿಸುವುದು ಸಾಧ್ಯವಿಲ್ಲ.

ಮೋದಿ ಸರಕಾರ ಮೇ 2019ರಲ್ಲಿ ಅಧಿಕಾರಕ್ಕೆ ಮರಳಿದ ನಂತರ, ಮೊದಲಿಗೆ ಜುಲೈ 2019ರಲ್ಲಿ ಕರ್ನಾಟಕದಲ್ಲಿ ಕಾಂಗ್ರೆಸ್–ಜೆಡಿ(ಎಸ್) ಸರಕಾರವನ್ನು ಉರುಳಿಸಲಾಯಿತು. ಅದರ ನಂತರ ಈ ವರ್ಷದ ಮಾರ್ಚ್‌ನಲ್ಲಿ ಮಧ್ಯಪ್ರದೇಶದಲ್ಲಿ ಕಾಂಗ್ರೆಸ್ ಸರಕಾರದ ಸರದಿ.

ಬಿಜೆಪಿ ತಾನು ಗುರಿಯಿಟ್ಟ ಸರಕಾರವನ್ನು ಅಸ್ಥಿರಗೊಳಿಸಲು ಮಿಶ್ರ ತಂತ್ರಗಳನ್ನು ಬಳಸುತ್ತ ಬಂದಿದೆ. ಕರ್ನಾಟಕದಲ್ಲಿ ಅದು ಪಕ್ಷಾಂತರಿ ಶಾಸಕರು ಪಕ್ಷಾಂತರ ನಿಷೇಧ ಕಾನೂನಿನಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗುವಂತೆ ತಮ್ಮ ಶಾಸಕ ಸ್ಥಾನಗಳಿಗೆ ರಾಜೀನಾಮೆ ಕೊಡುವ ವಿಧಾನವನ್ನು ಪರಿಪೂರ್ಣಗೊಳಿಸಿತು. 15 ಕಾಂಗ್ರೆಸ್ ಮತ್ತು ಜೆಡಿ(ಎಸ್) ಶಾಸಕರು ರಾಜೀನಾಮೆ ನೀಡಿದ್ದರಿಂದ ಸರಕಾರ ವಿಧಾನಸಭೆಯಲ್ಲಿ ಅಲ್ಪಮತಕ್ಕೆ ಇಳಿಯಿತು. ಹೀಗೆ ರಾಜೀನಾಮೆ ನೀಡಿದವರನ್ನು ಉಪಚುನಾವಣೆಗಳಲ್ಲಿ ಬಿಜೆಪಿ ಅಭ್ಯರ್ಥಿಗಳಾಗಿ ನಿಲ್ಲಿಸಲಾಯಿತು. ಇವರಲ್ಲಿ ಹಲವರಿಗೆ ಯೆಡಿಯೂರಪ್ಪ ಸಂಪುಟದಲ್ಲಿ ಮಂತ್ರಿಗಳ ಸ್ಥಾನ ಕೊಟ್ಟು ಪುರಸ್ಕರಿಸಲಾಯಿತು.

ಬಿಜೆಪಿ ಮತ್ತು ಕೇಂದ್ರ ಸರಕಾರ ರಾಜ್ಯ ಸರಕಾರಗಳನ್ನು ಅಸ್ಥಿರಗೊಳಿಸಲು ಒಂದಷ್ಟು ತಂತ್ರ ಸಮೂಹಗಳನ್ನು ರೂಪಿಸಿವೆ. ಮೊದಲನೆಯದಾಗಿ, ಶಾಸಕರನ್ನು ಆಕರ್ಷಿಸಲು ದೊಡ್ಡ ಪ್ರಮಾಣದಲ್ಲಿ ಹಣದ ಬಳಕೆ. ಇಷ್ಟು ದೊಡ್ಡ ಮೊತ್ತಗಳು ಕಾನೂನುಬಾಹಿರ ಹಣವಲ್ಲದೇ ಬೇರೇನೂ ಆಗಿರಲು ಸಾಧ್ಯವಿಲ್ಲ. ಇನ್ನು ಕೆಲವರಿಗೆ ಮಂತ್ರಿಪದವಿಯ, ಅಥವ ಫಲವತ್ತಾದ ಹುದ್ದೆಗಳ ಆಮಿಷ ಒಡ್ಡುವುದು. ಅಲ್ಲದೆ, ಮನಸ್ಸಿಲ್ಲದ, ಅಥವ ಪಟ್ಟು ಬಿಡದ ಶಾಸಕರ ಮೇಲೆ ಒತ್ತಡ ತರಲು ಆದಾಯ ತೆರಿಗೆ(ಐಟಿ), ಜಾರಿ ನಿರ್ದೇಶನಾಲಯ(ಇಡಿ) ಬಳಸಿ ಅವರ ಮೇಲೆ. ಅಥವ ಅವರ ಸಂಬಂಧಿಗಳ ಮೇಲೆ ದಾಳಿ ನಡೆಸುವುದು. ಈ ಸಂಸ್ಥೆಗಳನ್ನು ಹುದ್ದೆಗಳಲ್ಲಿ ಇದ್ದವರನ್ನು ಕೈಗೊಳ್ಳಬಹುದಾದ ಪ್ರತಿಕ್ರಮಗಳನ್ನು ತಟಸ್ಥಗೊಳಿಸಲೂ ಬಳಸುವುದು. ಅಂತಿಮವಾಗಿ, ಅವಕಾಶ ಸಿಕ್ಕಾಗಲೆಲ್ಲ ಬಿಜೆಪಿಯ ಪರವಾಗಿ ಹಸ್ತಕ್ಷೇಪ ಮಾಡಬಲ್ಲ ಒಬ್ಬ ನಮ್ರ ರಾಜ್ಯಪಾಲರ ಬಳಕೆ.

ಈ ಮೊದಲು ಗೋವ ಮತ್ತು ಮಣಿಪುರದಲ್ಲಿ ಸರಕಾರಗಳನ್ನು ರಚಿಸಲು ಇಂತಹ ತಂತ್ರಗಳೇ ಬಿಜೆಪಿಗೆ ನೆರವಾದವು. ರಾಜಸ್ಥಾನದಲ್ಲಿ ಈ ತಂತ್ರಗಳು ಪೂರ್ಣವಾಗಿ ಫಲಿಸಿಲ್ಲ. ಆದ್ದರಿಂದಲೇ ಹೋರಾಟ ದೀರ್ಘಗೊಂಡಿದೆ.


ರಾಜಸ್ಥಾನದಲ್ಲಿನ ಪ್ರಸಕ್ತ ಬಿಕ್ಕಟ್ಟಿನ ಮುಖ್ಯ ಲಕ್ಷಣ ಬಿಜೆಪಿಯ ಅಸ್ಥಿರಗೊಳಿಸುವ ಆಟವೇ ಆಗಿದ್ದರೂ, ಈ ಚಿತ್ರದ ಇನ್ನೊಂದು ಮಗ್ಗುಲನ್ನೂ ನೋಡುವುದು ಅಗತ್ಯವಾಗಿದೆ. ಅದೆಂದರೆ, ದೇಶದಲ್ಲಿ ಮುಖ್ಯ ಪ್ರತಿಪಕ್ಷವಾಗಿರುವ ಕಾಂಗ್ರೆಸಿನ ನಿತ್ರಾಣಗೊಂಡಿರುವ ಪರಿಸ್ಥಿತಿ. ಗುಂಪುಗಾರಿಕೆಯ ಜಗಳಗಳಿಂದ, ವಂಶ ರಾಜಕೀಯದಿಂದ ಅದು ಜರ್ಝರಿತಗೊಂಡಿದೆ. ಇದು ಸ್ವಾರ್ಥಪರಾಯಣ ಮತ್ತು ಅಧಿಕಾರದಾಹಿ ಮುಖಂಡರನ್ನು ಮಂಚೂಣಿಗೆ ತಂದಿದೆ. ರಾಜಸ್ಥಾನದ ಬಿಕ್ಕಟ್ಟು ಕಾಂಗ್ರೆಸಿನ ಆಂತರಿಕ ಜಗ್ಗಾಟದಿಂದ ಹುಟ್ಟಿಕೊಂಡಿದೆ.

2018ರಲ್ಲಿ ಕಾಂಗ್ರೆಸ್ ಸರಕಾರ ರಚನೆಯಾದಂದಿನಿಂದ ಮುಖ್ಯಮಂತ್ರಿ ಗೆಹ್ಲೋಟ್ ಮತ್ತು ಉಪಮುಖ್ಯಮಂತ್ರಿ ಪೈಲಟ್ ನಡುವೆ ಹಣಾಹಣಿ ನಡೆಯುತ್ತಲೇ ಇತ್ತು. ಪೋಲಿಸ್ ವಿಶೇಷ ಕಾರ್ಯಾಚರಣೆ ಗುಂಪಿನಿಂದ ಸರಕಾರವನ್ನು ಅಸ್ಥಿರಗೊಳಿಸುವ ಒಂದು ಪಿತೂರಿಯ ಪ್ರಕರಣದಲ್ಲಿ ಸಚಿನ್ ಪೈಲಟ್‌ಗೆ ವಿಚಾರಣೆಗೆ ಹಾಜರಾಗಲು ನೋಟೀಸು ಬಂದಾಗ ಈ ಕಿತ್ತಾಟ ಲಂಗುಲಗಾಮಿಲ್ಲದ ಹೋರಾಟ ವಾಗಿ ಪರಿಣಮಿಸಿತು. ಈ ಜಗಳಾಟ ಬಿಜೆಪಿಗೆ ಸರಕಾರ ಉರುಳಿಸುವ ಪ್ರಯತ್ನಗಳಿಗೆ ಅನುಕೂಲ ಕಲ್ಪಿಸಿತು.

ಬಹುಶಃ ಗೆಹ್ಲೋಟ್ ಸರಕಾರ ಈ ಸಂಘರ್ಷದಲ್ಲಿ ಬದುಕುಳಿಯಬಹುದು. ಆದರೆ ಕಾಂಗ್ರೆಸ್ ಪಕ್ಷ ತನ್ನ ಸದ್ಯದ ಸ್ಥಿತಿಯಲ್ಲಿ ಬಿಜೆಪಿಯ ಸವಾಲನ್ನು ರಾಜಕೀಯವಾಗಿ, ಸೈದ್ಧಾಂತಿಕವಾಗಿ ಮತ್ತು ಸಂಘಟನಾತ್ಮಕವಾಗಿ ಎದುರಿಸಲು ಅಸಮರ್ಥವಾಗಿದೆ.

ಚುನಾವಣಾ ರಾಜಕೀಯ ಮತ್ತು ಚುನಾಯಿತ ಪ್ರತಿನಿಧಿಗಳ ಅವನತಿಗೆ ದೊಡ್ಡ ಬಂಡವಳಿಗರ ಹಣದ ಅತಿಕ್ರಮಣ ಮತ್ತು ರಾಜಕೀಯ ವ್ಯವಸ್ಥೆಯ ಮೇಲೆ ನವ–ಉದಾರವಾದಿ ಬಂಡವಾಳಶಾಹಿಯ ಸರ್ವವ್ಯಾಪಿ ಪ್ರಭಾವದೊಂದಿಗೆ ನೇರ ಸಂಬಂಧವಿದೆ. ವಿಧಾನ ಮಂಡಲಗಳಲ್ಲಿ ಮತ್ತು ಸಂಸತ್ತಿನಲ್ಲಿ ಚುನಾಯಿತ ಪ್ರತಿನಿಧಿಗಳ ಒಂದು ಹೊಸ ತಳಿಗೆ ರಾಜಕೀಯ ಮತ್ತು ವ್ಯಾಪಾರ ಪರಸ್ಪರ ಹೆಣೆದುಕೊಂಡಿದೆ. ಬಿಜೆಪಿ ಇಂತಹ ಚುನಾಯಿತ ಪ್ರತಿನಿಧಿಗಳ ಬೇಟೆಯಾಡುತ್ತದೆ.

ಪ್ರಜಾಪ್ರಭುತ್ವದ ಮತ್ತು ರಾಜ್ಯಗಳ ಹಕ್ಕುಗಳ ಮೇಲೆ ದಾಳಿ ಮತ್ತು ದೇಶಾದ್ಯಂತ ಏಕಪಕ್ಷ ಆಳ್ವಿಕೆಯ ಓಟ ಇವೆಲ್ಲವೂ ಹಿಂದುತ್ವ ಸರ್ವಾಧಿಕಾರಶಾಹಿ ರಾಜ್ಯಭಾರದ ಅಭಿವ್ಯಕ್ತಿಗಳು. ಅದರ ತಂತ್ರಗಳನ್ನು ಅನುಕರಿಸಿ ಅದರ ವಿರುದ್ಧ ಹೋರಾಟ ನಡೆಸಲು ಸಾಧ್ಯವಿಲ್ಲ.



ಚುನಾವಣಾ ರಾಜಕೀಯ ಮತ್ತು ಚುನಾಯಿತ ಪ್ರತಿನಿಧಿಗಳ ಅವನತಿಗೆ ದೊಡ್ಡ ಬಂಡವಳಗರ ಹಣದ ಅತಿಕ್ರಮಣ ಮತ್ತು ರಾಜಕೀಯ ವ್ಯವಸ್ಥೆಯ ಮೇಲೆ ನವ–ಉದಾರವಾದಿ ಬಂಡವಾಳಶಾಹಿಯ ಸರ್ವವ್ಯಾಪಿ ಪ್ರಭಾವದೊಂದಿಗೆ ನೇರ ಸಂಬಂಧವಿದೆ. ವಿಧಾನ ಮಂಡಲಗಳಲ್ಲಿ ಮತ್ತು ಸಂಸತ್ತಿನಲ್ಲಿ ಚುನಾಯಿತ ಪ್ರತಿನಿಧಿಗಳ ಒಂದು ಹೊಸ ತಳಿಗೆ ರಾಜಕೀಯ ಮತ್ತು ವ್ಯಾಪಾರ ಪರಸ್ಪರ ಹೆಣೆದುಕೊಂಡಿದೆ. ಬಿಜೆಪಿ ಇಂತಹ ಚುನಾಯಿತ ಪ್ರತಿನಿಧಿಗಳ ಬೇಟೆಯಾಡುತ್ತದೆ.

ಮಧ್ಯಪ್ರದೇಶದಲ್ಲಿ ಹಸಿ ಮಾರುಕಟ್ಟೆ
ವ್ಯಂಗ್ಯಚಿತ್ರ: ಸಂದೀಪ್ ಅಧ್ವರ್ಯು, ಟೈಂಸ್ ಆಫ್ ಇಂಡಿಯ



ಕರ್ನಾಟಕದಲ್ಲಿ ‘ಭರವಸೆ ಈಡೇರಿಕೆ’
ವ್ಯಂಗ್ಯಚಿತ್ರ: ಪಿ.ಮಹಮ್ಮದ್,

ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆಗೆ ತಿದ್ದುಪಡಿ ಬೇಡ!

1949 ರಲ್ಲಿ ಜಾರಿಗೆ ಬಂದ ಬ್ಯಾಂಕಿಂಗ್ ರೆಗ್ಯುಲೇಷನ್ ಕಾಯಿದೆಗೆ 2020ರ ಜೂನ್ 20ರಂದು ಸುಗ್ರೀವಾಜ್ಞೆಯ ಮೂಲಕ ಕೆಲವು ತಿದ್ದುಪಡಿಗಳನ್ನು ಜಾರಿಗೆ ತರಲಾಗಿದೆ. ಕೇಂದ್ರ ಸರಕಾರ ಹೇಳುವಂತೆ, ಠೇವಣಿದಾರರ ಹಿತಾಸಕ್ತಿ ರಕ್ಷಿಸುವುದಾಗಲಿ, ಸಹಕಾರಿ ಬ್ಯಾಂಕುಗಳ ನಿರ್ವಹಣೆಯನ್ನು ವೃತ್ತಿಪರಗೊಳಿಸಿ ಉತ್ತಮ ಪಡಿಸಿ ಅವುಗಳನ್ನು ಬಲಗೊಳಿಸುವುದಾಗಲಿ ಈ ಸುಗ್ರೀವಾಜ್ಞೆಯ ಉದ್ದೇಶ ಅಲ್ಲ. ಇತ್ತೀಚೆಗೆ ರಾಜ್ಯದಲ್ಲಿನ ಎಲ್ಲಾ ಜಿಲ್ಲಾ ಸಹಕಾರಿ ಬ್ಯಾಂಕುಗಳನ್ನು, ರಾಜ್ಯ ಸಹಕಾರಿ ಬ್ಯಾಂಕಿನಲ್ಲಿ ವಿಲೀನಗೊಳಿಸಿ ಒಂದು ರಾಜ್ಯ ಮಟ್ಟದ ಬ್ಯಾಂಕನ್ನು ಕೇರಳ ಸರ್ಕಾರ ಸ್ಥಾಪಿಸಿದೆ. ಈ "ಕೇರಳ ಬ್ಯಾಂಕ್' ಸಂಪೂರ್ಣ ರಾಜ್ಯ ಸರ್ಕಾರದ ಒಡೆತನದಲ್ಲಿದ್ದು ಈಗಾಗಲೇ ಉತ್ತಮ ಕಾರ್ಯ ನಿರ್ವಹಣೆ ಪ್ರಾರಂಭಿಸಿರುವುದು ಕೇಂದ್ರ ಸರ್ಕಾರದ ಕೆಂಗಣ್ಣಿಗೆ ಕಾರಣವಾಗಿದೆ. ಕೇರಳದ ಮೇಲ್ಪಂಕ್ತಿಯನ್ನು ಅನುಸರಿಸಿ ಇನ್ನಷ್ಟು ಹೆಚ್ಚು ರಾಜ್ಯ ಸರಕಾರಗಳು ಮುಂದಾಗದಂತೆ ತಡೆಯುವುದು ಈ ಸುಗ್ರೀವಾಜ್ಞೆಯ ಪ್ರಮುಖ ಉದ್ದೇಶವಿದ್ದಂತೆ ಕಾಣುತ್ತದೆ.

ಹೆಚ್. ನಾಗಭೂಷಣ ರಾವ್

1949 ರಲ್ಲಿ ಜಾರಿಗೆ ಬಂದ ಬ್ಯಾಂಕಿಂಗ್ ರೆಗ್ಯುಲೇಷನ್ ಕಾಯಿದೆಯು ಬ್ಯಾಂಕುಗಳ ಕಾರ್ಯನಿರ್ವಹಣೆ, ಲೈಸೆನ್ಸಿಂಗ್, ಆಡಳಿತ ಮತ್ತು ವ್ಯವಹಾರಗಳನ್ನು ನಿಯಂತ್ರಿಸುತ್ತದೆ. 2020ರ ಜೂನ್ 20ರಂದು ಸುಗ್ರೀವಾಜ್ಞೆಯ ಮೂಲಕ ಈ ಕಾಯಿದೆಗೆ ತಿದ್ದುಪಡಿಯನ್ನು ಜಾರಿಗೆ ತರಲಾಗಿದೆ. ಈಗ ಜಾರಿಗೆ ತಂದಿರುವ ತಿದ್ದುಪಡಿಯಲ್ಲಿನ ಅಂಶಗಳ ಬಗ್ಗೆ ಕೇಂದ್ರ ಸರ್ಕಾರವು ಪತ್ರಿಕಾ ಪ್ರಕಟಣೆಯನ್ನು ನೀಡಿದ್ದು, "ಸಹಕಾರಿ ಬ್ಯಾಂಕುಗಳನ್ನು ಭಾರತೀಯ ರಿಜರ್ವ ಬ್ಯಾಂಕಿನ ಪೂರ್ಣ ಮೇಲ್ವಿಚಾರಣೆಯ ಅಡಿಯಲ್ಲಿ ತರುವ ಮೂಲಕ ಠೇವಣಿದಾರರ ಹಿತರಕ್ಷಣೆಗೆ ಕೈಗೊಳ್ಳಲಾಗಿದೆ" ಎಂದು ಪ್ರಕಟಿಸಿದೆ. ಇದಲ್ಲದೆ, "ವಾಣಿಜ್ಯ ಬ್ಯಾಂಕುಗಳ ಮೇಲೆ ಇರುವಂತಹ ಅಧಿಕಾರಗಳನ್ನು ನಿಬಂಧನೆಗಳನ್ನು ಸಹಕಾರಿ ಬ್ಯಾಂಕುಗಳಿಗೆ ವಿಸ್ತರಿಸುವ ಮೂಲಕ ಅವುಗಳ ನಿರ್ವಹಣೆ ಮತ್ತು ಮೇಲುಸ್ತುವಾರಿಯನ್ನು ಉತ್ತಮಪಡಿಸುವ, ಅವುಗಳನ್ನು ವೃತ್ತಿಪರಗೊಳಿಸಿ ಹೆಚ್ಚಿನ ಬಂಡವಾಳವನ್ನು ದೊರಕಿಸಲು" ಈ ತಿದ್ದುಪಡಿಗಳನ್ನು ತಂದಿದೆ ಎಂದಿದೆ. ಆದರೆ, ಸರ್ಕಾರದ ಪ್ರಕಟಣೆ ಸಂಪೂರ್ಣ ಸುಳ್ಳು ಎಂಬುದನ್ನು ಈ ಕೆಳಗಿನಂತೆ ಪಟ್ಟಿ ಮಾಡಬಹುದಾಗಿದೆ.

ಮೊದಲನೆಯದಾಗಿ, ಸಹಕಾರಿ ಬ್ಯಾಂಕುಗಳನ್ನು ರಿಜರ್ವ್ ಬ್ಯಾಂಕಿನ ನಿಯಂತ್ರಣದ ಅಡಿಯಲ್ಲಿ ತರುವುದಕ್ಕೆ ಈ ತಿದ್ದುಪಡಿ ಬೇಕಾಗಿಲ್ಲ. ಮೊದಲಿನಿಂದಲೂ, ಪಟ್ಟಣ ಸಹಕಾರ ಬ್ಯಾಂಕು. ಗಳಿಗೆ ಲೈಸನ್ಸ್ ನೀಡುವ ಹಾಗೂ ರದ್ದು ಮಾಡುವ ಅಧಿಕಾರ ರಿಜರ್ವ್ ಬ್ಯಾಂಕಿನ ಕೈಯಲ್ಲಿಯೇ ಇದೆ. ಈ ಬ್ಯಾಂಕುಗಳ ಸಾಲ ನೀಡಿಕೆ ಹಾಗೂ ವಸೂಲಾತಿಗೆ ಸಂಬಂಧಿಸಿದ ನೀತಿಗಳನ್ನು ರೂಪಿಸಲು ರಾಜ್ಯ/ಕೇಂದ್ರ ಸಹಕಾರಿ ಇಲಾಖೆಯ ರಿಜಿಸ್ಟ್ರಾರ್‌ರವರೊಂದಿಗೆ ರಿಜರ್ವ್ ಬ್ಯಾಂಕ್‌ಗೂ ಅಧಿಕಾರವಿದೆ. ಮೇಲೆ ಹೇಳಿದ ಉದ್ದೇಶಕ್ಕೆ ಈ ಅಧಿಕಾರಗಳು ಸಾಕು. ಆದರೆ ಈ ತಿದ್ದುಪಡಿ ಯಾವುದೇ ಕ್ರಮ ಕೈಗೊಳ್ಳುವ ಮೊದಲು ರಾಜ್ಯ ಸಹಕಾರಿ ಇಲಾಖೆಯ ರಿಜಿಸ್ಟ್ರಾರ್ ರಿಂದ ಅಭಿಪ್ರಾಯ ಕೇಳಬೇಕು. ನಿಯಮಿತ ಅವಧಿಯೊಳಗೆ ರಿಜಿಸ್ಟ್ರಾರ್ ಅಭಿಪ್ರಾಯ ಕೊಡುವಂತೆ ಕೇಳುವ, ಆ ಅಭಿಪ್ರಾಯವನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ರಿಜರ್ವ ಬ್ಯಾಂಕಿಗೆ ಕೊಡುವ ಮೂಲಕ ರಾಜ್ಯ ಸಹಕಾರಿ ರಿಜಿಸ್ಟ್ರಾರ್‌ಗೆ ಮತ್ತು ಆ ಮೂಲಕ ರಾಜ್ಯ ಸರಕಾರಕ್ಕೆ ಇದ್ದ ಅಧಿಕಾರವನ್ನು ಕಸಿದುಕೊಂಡಿದೆ. ಪೂರ್ಣ ಅಧಿಕಾರವನ್ನು ರಿಜರ್ವ ಬ್ಯಾಂಕಿಗೆ ವರ್ಗಾಯಿಸಿದೆ.

ಎರಡನೇಯದಾಗಿ, ರಿಜರ್ವ್ ಬ್ಯಾಂಕಿನ ನಿಯಂತ್ರಣದಲ್ಲಿ ತರುವುದರಿಂದ ಸಾರ್ವಜನಿಕರ ಠೇವಣಿಗೆ ಭದ್ರತೆ ದೊರಕುತ್ತದೆ ಎಂಬುದು ಸಂಪೂರ್ಣ ಅರ್ಥಹೀನ. ಏಕೆಂದರೆ, ರಿಜರ್ವ್ ಬ್ಯಾಂಕಿನ ನೇರ ನಿಯಂತ್ರಣದಲ್ಲಿರುವ ವಾಣಿಜ್ಯ ಬ್ಯಾಂಕುಗಳಲ್ಲಿ ವಂಚನೆಯ ಪ್ರಕರಣಗಳೇನೂ ಕಡಿಮೆಯಾಗಿಲ್ಲ. ಇತ್ತೀಚಿನ ಉದಾಹರಣೆಯಾಗಿ, ಪಂಜಾಬ್ ನ್ಯಾಷನಲ್ ಬ್ಯಾಂಕಿನ ಒಂದೇ ಶಾಖೆಯಲ್ಲಿ ನೀರವ್ ಮೋದಿಯವರು ರೂ. 14000 ಕೋಟಿ ರೂಪಾಯಿಗಳು ವಂಚನೆ ಮಾಡಿರುವುದನ್ನು ಗಮನಿಸಬಹುದು. ಪ್ರಕಟಿತ ಅಂಕಿಅಂಶಗಳ ಪ್ರಕಾರ, 2015–16 ರಲ್ಲಿ ಬ್ಯಾಂಕಿಂಗ್ ಕ್ಷೇತ್ರದಲ್ಲಿನ ವಂಚನೆಗೆ ಒಳಪಟ್ಟ ಒಟ್ಟು ಮೊತ್ತವು ರೂ. 18,699 ಕೋಟಿಗಳಷ್ಟು ಇತ್ತು. ನಂತರದ ದಿನಗಳಲ್ಲಿ ಈ ವಂಚನೆಗೊಳಗಾದ ಮೊತ್ತದಲ್ಲಿ ತೀವ್ರ ಬೆಳವಣಿಗೆ ಕಂಡು ಬಂದಿದ್ದು, 2018–19 ರಲ್ಲಿ ರೂ. 71,543 ಕೋಟಿಗೆ ತಲುಪಿದೆ. ಅಷ್ಟೇ ಅಲ್ಲ 2019–20 ರ ಮೊದಲ ಅರ್ಧವರ್ಷದಲ್ಲಿ ವಂಚನೆಗೊಳಗಾದ ಮೊತ್ತದಲ್ಲಿ ಭಾರೀ ಪ್ರಮಾಣ ಹೆಚ್ಚಳವಾಗಿ ರೂ. 1,13,374 ಕೋಟಿ ರೂಪಾಯಿಗಳಿಗೆ ತಲುಪಿದ್ದು, ಇದು ರಿಜರ್ವ್ ಬ್ಯಾಂಕ್‌ನ ನಿಯಂತ್ರಣದಲ್ಲಿರುವ ಬ್ಯಾಂಕುಗಳಲ್ಲಿ ನಡೆದಿದೆಯೆಂಬುದನ್ನು ಗಮನಿಸಬೇಕಾಗಿದೆ. ಕಳೆದ 3 ವರ್ಷಗಳಿಂದ ರಿಜರ್ವ್ ಬ್ಯಾಂಕಿನ ಮೇಲುಸ್ತುವಾರಿಯಲ್ಲಿದ್ದ ಯಸ್ ಬ್ಯಾಂಕಿನಲ್ಲಿ ಅದರ ಮುಖ್ಯ ಪ್ರಮೋಟರ್ ಭ್ರಷ್ಟಾಚಾರದಲ್ಲಿ ತೊಡಗಿ ಸಾಲ ಕೊಟ್ಟಿದ್ದು ಸುಸ್ತಿ ಸಾಲವಾಗಿ ಪರಿವರ್ತಿತವಾಗಿತ್ತು ಮತ್ತು ಸಾವಿರಾರು ಕೋಟಿ ರೂ. ಠೇವಣಿ ಪಲಾಯನವಾಗಿತ್ತು. ಕೊನೆಗೆ ಬ್ಯಾಂಕ್ ಮೊರೆಟೋರಿಯಂ (Moratotium - ಬ್ಯಾಂಕಿನ ರೇವಣದಾರರು ಹಣ ವಾಪಸು ಪಡೆಯುವುದು ಅಥವಾ ಗರಿಷ್ಠ ಮೊತ್ತದ ಮೇಲೆ ಇತ್ಯಾದಿ ಬ್ಯಾಂಕಿಂಗ್ ವ್ಯವಹಾರಗಳ ಮೇಲೆ ನಿರ್ಬಂಧ) ಸ್ಥಿತಿಗೂ ದಬ್ಬಲ್ಪಟ್ಟಿತ್ತು. ಹೀಗೆ ವಂಚನೆಗೆ ತಡೆ ಒಡ್ಡುವಲ್ಲಿ ರಿಜರ್ವ್ ಬ್ಯಾಂಕಿನ ವೈಫಲ್ಯದಿಂದಾಗಿ, ಸಾರ್ವಜನಿಕರ ಠೇವಣಿಗೆ ಅಭದ್ರತೆ ಹೆಚ್ಚುತ್ತಲೇ ಬಂದಿದೆ. ಈ ಪ್ರಮೋಟರ್ ಮೇಲೆ ಯಾವುದೇ ಕ್ರಮವನ್ನು ಕೈಗೊಳ್ಳಲಾಗಲಿಲ್ಲ. ಇದೇ ಇತ್ತೀಚೆಗೆ ಐಸಿಐಸಿಐ ನಲ್ಲಿ ಪುನರಾವರ್ತನೆಯಾದಂತೆ ಕಾಣುತ್ತಿದೆ.



ಮೂರನೆಯದಾಗಿ, ಇತ್ತೀಚೆಗೆ ಸಹಕಾರಿ ಕ್ಷೇತ್ರದಲ್ಲಿನ ಪಿಎಂಸಿ ಬ್ಯಾಂಕ್‌ನ ವಿಫಲತೆಯನ್ನೇ ಈ ಕಾನೂನು ತಿದ್ದುಪಡಿಗೆ ಕಾರಣವೆಂಬಂತೆ ಬಿಂಬಿಸಲಾಗುತ್ತಿದೆ. ನಿಜವಾಗಿಯೂ ಪಿಎಂಸಿ ಬ್ಯಾಂಕ್‌ನ ವಿಫಲತೆಯೇ ಕೇಂದ್ರ ರಿಜಿಸ್ಟ್ರಾರ್ ಮತ್ತು ರಿಜರ್ವ ಬ್ಯಾಂಕಿನ ನಿರ್ಲಕ್ಷ ಮತ್ತು ಅಸಮರ್ಥತೆಗೆ ಹಿಡಿದ ಕನ್ನಡಿ. ಅದು ಹಲವು ವರ್ಷಗಳಿಂದ ಆ ಬ್ಯಾಂಕಿನ ಮೇಲುಸ್ತುವಾರಿ ವಹಿಸಿದ್ದು ಆ ಅವಧಿಯಲ್ಲೇ ದೊಡ್ಡ ಹಗರಣಗಳು ನಡೆದಿವೆ. ಆ ಬ್ಯಾಂಕಿನ ಒಟ್ಟು ಸಾಲದ ಶೇ. 71ರಷ್ಟು ಸಾಲವನ್ನು ಒಬ್ಬರಿಗೆ 21 ಸಾವಿರ ಖೊಟ್ಟಿ ಖಾತೆ ಸೃಷ್ಟಿಸಿ ಕೊಟ್ಟ ಹಗರಣ ಅದಾಗಿತ್ತು. 25 ಕ್ಕೂ ಅಧಿಕ ಸಹಕಾರಿ ಬ್ಯಾಂಕುಗಳು ಕಳೆದ ಒಂದೆರಡು ವರ್ಷಗಳಿಂದ ಮೋರಟೇರಿಯಂ ಸ್ಥಿತಿಗೆ ದೂಡಲ್ಪಟ್ಟಿದೆ ಹಾಗೂ ಅವುಗಳ ನಿರ್ದೇಶಕ ಮಂಡಳಿಗಳನ್ನು ರದ್ದುಪಡಿಸುವ ಮೂಲಕ ರಿಜರ್ವ್ ಬ್ಯಾಂಕ್ ಅಧಿಕಾರ ಚಲಾಯಿಸುತ್ತದೆ. ರುಪೀ ಕೋಆಪರೇಟಿವ್ ಬ್ಯಾಂಕ್ ಎನ್ನುವ ಸಹಕಾರಿ ಬ್ಯಾಂಕೊಂದು 2013 ರಿಂದ ಮೋರಟೋರಿಯಂನಲ್ಲಿದೆ. ಕಳೆದ ಒಂದೆರಡು ತಿಂಗಳುಗಳಲ್ಲಿ ಮವುಸಾ ಕೋ ಆಪರೇಟಿವ್ ಬ್ಯಾಂಕ್ ಹಾಗೂ ಸಿಕೆಪಿ ಕೋ ಆಪರೇಟಿವ್ ಬ್ಯಾಂಕ್‌ಗಳ ಲೈಸನ್ಸ್‌ನ್ನು ರದ್ದುಪಡಿಸಲಾಗಿದೆ. ಇದರಲ್ಲಿ ಸಿಕೆಪಿ ಕೋ ಆಪರೇಟಿವ್ ಬ್ಯಾಂಕಿನ ನಿರ್ದೇಶಕ ಮಂಡಳಿಯನ್ನು ರದ್ದುಗೊಳಿಸಿ ಕಳೆದ ಎಂಟು ವರ್ಷಗಳಿಂದ ರಿಜರ್ವ್ ಬ್ಯಾಂಕ್‌ನ ನೇರ ನಿಯಂತ್ರಣ ಹಾಗೂ ಉಸ್ತುವಾರಿಯಲ್ಲಿ ಕಾರ್ಯ ನಿರ್ವಹಿಸುತಿತ್ತು. ಈ ಬ್ಯಾಂಕನ್ನು ಈಗ ವಿಸರ್ಜಿಸಲಾಗಿದ್ದು ಠೇವಣಿದಾರರು ತಮ್ಮ 120 ಕೋಟಿ ರೂ.ವನ್ನು ಕಳೆದುಕೊಂಡಿದ್ದಾರೆ. ಇದನ್ನು ಗಮನಿಸಿದರೆ, ಈ ಬ್ಯಾಂಕುಗಳನ್ನು ರಿಜರ್ವ್ ಬ್ಯಾಂಕು ಕೂಡ ರಕ್ಷಿಸಲಾಗಲಿಲ್ಲ ಎಂಬುದನ್ನು ಗುರುತಿಸಬೇಕಾಗುತ್ತದೆ. ಮೋರಟೇರಿಯಂ ಸ್ಥಿತಿಯಲ್ಲಿರುವ ಇಂತಹ ಸಹಕಾರಿ ಬ್ಯಾಂಕುಗಳ ಠೇವಣಿದಾರರನ್ನು ತೀವ್ರ ಅಭದ್ರತೆ ಕಾಡುತ್ತಿದ್ದು, ಹಲವರು ಸತ್ತಿದ್ದಾರೆ, ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಕೊನೆಯದಾಗಿ, ರಿಜರ್ವ್ ಬ್ಯಾಂಕ್‌ನ ಅಂಕಿ ಅಂಶಗಳ ಪ್ರಕಾರ 2004 ರಲ್ಲಿ 1926 ಇದ್ದ ಪಟ್ಟಣ ಸಹಕಾರಿ ಬ್ಯಾಂಕುಗಳ ಸಂಖ್ಯೆ 2018ರಲ್ಲಿ 1551ಕ್ಕೆ ಇಳಿದಿದೆ. ಈ ಅವಧಿಯಲ್ಲಿ 129 ಬ್ಯಾಂಕುಗಳು ವಿಲೀನ ಪ್ರಕ್ರಿಯೆಗೆ ಒಳಪಟ್ಟವು. ಪಟ್ಟಣ ಸಹಕಾರಿ ಬ್ಯಾಂಕುಗಳ ಮೇಲುಸ್ತುವಾರಿಯಲ್ಲಿ ರಿಜರ್ವ್ ಬ್ಯಾಂಕ್ ಪೂರ್ಣವಾಗಿ ವಿಫಲವಾಗಿದೆ ಎಂದು ಇದರ ಅರ್ಥ. ಹೀಗಾಗಿ ಸಹಕಾರಿ ಬ್ಯಾಂಕುಗಳನ್ನು ರಿಜರ್ವ್ ಬ್ಯಾಂಕಿನ ನಿಯಂತ್ರಣಕ್ಕೆ ಒಳಪಡಿಸುವುದರಿಂದ ಅವುಗಳ ಕಾರ್ಯಕ್ಷಮತೆಯಲ್ಲಿ ಬದಲಾವಣೆ ಉಂಟಾಗುವ ಮೂಲಕ ಠೇವಣಿದಾರರ ಹಣ ಸುರಕ್ಷಿತವಾಗುತ್ತದೆ ಎಂಬ ವಾದ ಹುರುಳಿಲ್ಲದ್ದು ಎಂದು ಸಾಬೀತಾಗುತ್ತದೆ.

ಸಹಕಾರಿ ಬ್ಯಾಂಕುಗಳ ನಿರ್ವಹಣೆಯಲ್ಲಿ ಹಲವು ಸಮಸ್ಯೆಗಳು ಇರುವುದು ನಿಜ. ಅವುಗಳ ನಿರ್ವಹಣೆಯನ್ನು ವೃತ್ತಿಪರಗೊಳಿಸುವ, ಉತ್ತಮ ಪಡಿಸುವ ಕುರಿತು 2011ರಲ್ಲಿ ತರಲಾದ 97ನೇ ಸಂವಿಧಾನ ತಿದ್ದುಪಡಿಯಲ್ಲಿ (ನಿಯಮಿತ ಚುನಾವಣೆ, ಅಡಿಟ್ ಇತ್ಯಾದಿ) ಹಲವು ಕ್ರಮಗಳನ್ನು ಸೂಚಿಸಲಾಗಿದೆ. ಇವನ್ನು ಮುತುವರ್ಜಿಯಿಂದ ಜಾರಿಗೆ ತರಲು ಕೇಂದ್ರ ಸರಕಾರ ಯಾವುದೇ ಕ್ರಮ ಕೈಗೊಂಡಿಲ್ಲ.

ಇನ್ನೊಂದು ಕಡೆ ವಾಣಿಜ್ಯ ಬ್ಯಾಂಕಿನ ನಿಬಂಧನೆಗಳ ನಿರ್ವಹಣೆಯಲ್ಲಿ ರಿಜರ್ವ ಬ್ಯಾಂಕಿನ ನೀತಿಗಳಲ್ಲಿ ತಂದ ಕೆಲವು ಬದಲಾವಣೆಗಳು, ಅವ್ಯವಹಾರಗಳು ಹಗರಣಗಳ ತುರ್ತು ಗುರುತಿಸುವಿಕೆ ಹಾಗೂ ಕ್ರಮ ವಹಿಸುವಿಕೆಯ ಕ್ಷಮತೆಗೆ ಮಾರಕವಾಗಿವೆ. ಶಾಖೆಯ ಹಂತದಲ್ಲಿ ದಾಖಲೆಗಳ ಆನ್-ಸೈಟ್ ಅಡಿಟ್ ನ್ನು ನಿಲ್ಲಿಸಿ, ಬ್ಯಾಂಕಿನ ಆಂತರಿಕ ತಪಾಸಣೆಗಳ ಸ್ವ-ಸರ್ಟಿಫಿಕೆಟ್ ಆರಂಭಿಸಿದ್ದು ಇಂತಹ ಬದಲಾವಣೆಗೆ ಒಂದು ಉದಾಹರಣೆ. ಇದರಿಂದಾಗಿ ಬ್ಯಾಂಕುಗಳಲ್ಲಿ ಹಗರಣಗಳು, ಅವ್ಯವಹಾರಗಳು ಸುಲಭವಗಿವೆ. ಅವುಗಳ ಮೇಲೆ ನಿಗಾ ದುರ್ಬಲವಾಗಿವೆ.

ಮುಚ್ಚಿಟ್ಟ ಕಾರ್ಯಸೂಚಿ(ಹಿಡನ್ ಅಜೆಂಡಾ)

'ಠೇವಣಿದಾರರ ಹಿತರಕ್ಷಣೆಗಾಗಿ' 'ಬ್ಯಾಂಕುಗಳ ನಿರ್ವಹಣೆ ಉತ್ತಮ ಪಡಿಸಲು' ಎಂಬ ವಾದ ಸುಳ್ಳು ಎಂದು ಸಾಬೀತಾಗಿರುವಾಗ, ಈ ತಿದ್ದುಪಡಿಯ ಮುಚ್ಚಿಟ್ಟ ಕಾರ್ಯಸೂಚಿಯ ಕಡೆಗೆ ಗಮನ ಹರಿಸಬೇಕಾಗುತ್ತದೆ.

2015 ರಲ್ಲಿ ಶ್ರೀ ಗಾಂಧಿಯವರ ಅಧ್ಯಕ್ಷತೆಯಲ್ಲಿ ನೇಮಕಗೊಂಡಿದ್ದ ರಿಜರ್ವ್ ಬ್ಯಾಂಕಿನ ಉನ್ನತ ಮಟ್ಟದ ಸಮಿತಿಯ ಸಣ್ಣ ಪ್ರಮಾಣದ ಪಟ್ಟಣ ಸಹಕಾರಿ ಬ್ಯಾಂಕುಗಳನ್ನು Small Finance Bank

ಪುಟ 15 ನೋಡಿ



ಕರಡು ಪರಿಸರ ಅಧಿಸೂಚನೆ ಇ.ಐ.ಎ 2020

ಪರಿಸರ ರಕ್ಷಣೆಯ ಸಂಬಂಧವಾಗಿ ಮೋದಿ ಸರಕಾರ ಪ್ರಕಟಿಸಿರುವ 'ಪರಿಸರ ಪರಿಣಾಮ ನಿರ್ಧಾರಣೆ' (Environment Impact Assessment -ಇ.ಐ.ಎ.) ಕರಡು ಅಧಿಸೂಚನೆ ಅಭಿವೃದ್ಧಿಯ ಹೆಸರಿನಲ್ಲಿ ಕೇಂದ್ರ ಸರಕಾರದ ಕಾರ್ಪೊರೇಟ್‌ಗಳ ಪರವಾದ ಅಜೆಂಡಾಕ್ಕೆ ಅನುಗುಣವಾಗಿಯೇ ಇದೆ. ಈ ಕರಡಿನ ಕಾಳಜಿ ಜನಗಳ ಹಿತಾಸಕ್ತಿಗಳೂ ಅಲ್ಲ, ಅಥವ ಪರಿಸರದ ರಕ್ಷಣೆಯೂ ಅಲ್ಲ. ನಿಜ ಹೇಳಬೇಕೆಂದರೆ ಅದು ತಪ್ಪು ಕೃತ್ಯಗಳಿಗೆ ಮತ್ತು ಉಲ್ಲಂಘನೆಗಳಿಗೆ ಲೈಸೆನ್ಸ್ ಕೊಡುತ್ತದೆ. ಆದ್ದರಿಂದ ಈ ಕರಡು ಅಧಿಸೂಚನೆಯನ್ನು ಹಿಂತೆಗೆದುಕೊಳ್ಳಬೇಕು ಎಂದು ಸಿಪಿಐ(ಎಂ) ಪರವಾಗಿ ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ಕೇಂದ್ರ ಪರಿಸರ, ಅರಣ್ಯಗಳು ಮತ್ತು ಹವಾಮಾನ ಬದಲಾವಣೆ ಮಂತ್ರಿ ಪ್ರಕಾಶ ಜಾವಡೇಕರ್ ಅವರಿಗೆ ಬರೆದಿರುವ ಪತ್ರದಲ್ಲಿ ಆಗ್ರಹಿಸಿದ್ದಾರೆ. ಸಂಬಂಧಪಟ್ಟ ಎಲ್ಲರ ಅಭಿಪ್ರಾಯಗಳನ್ನು ತೆಗೆದುಕೊಂಡು ಇದರ ಮರುಕರಡನ್ನು ತಯಾರಿಸಬಹುದು. ಇದು ಪರಿಸರ, ಜನತೆ ಮತ್ತು ದೇಶದ ಹಿತದೃಷ್ಟಿಯಿಂದ ಒಳ್ಳೆಯದು ಎಂದೂ ಅವರು ಹೇಳಿದ್ದಾರೆ.



ಪರಿಸರ ರಕ್ಷಣೆ ಕುರಿತಂತೆ ಭಾರತದಲ್ಲಿ 1986ರಲ್ಲಿ ಒಂದು ಕಾಯ್ದೆಯನ್ನು ತಂದಿದ್ದು ಅದರ ಅಡಿಯಲ್ಲಿ 1994ರಲ್ಲಿ 'ಪರಿಸರ ಪರಿಣಾಮ ನಿರ್ಧಾರಣೆ' (Environment Impact Assessment -ಇ.ಐ.ಎ.) ಅಧಿಸೂಚನೆಯನ್ನು ಹೊರಡಿಸಲಾಯಿತು. 2006ರಲ್ಲಿ ಇದರ ಸ್ಥಾನದಲ್ಲಿ ಒಂದು ಮಾರ್ಪಾಡು ಮಾಡಿದ ಅಧಿಸೂಚನೆಯನ್ನು ಹೊರಡಿಸಲಾಯಿತು. ಈಗ ಮೋದಿ ಸರಕಾರ ಇದರ ಸ್ಥಾನದಲ್ಲಿ ತರಲು ಒಂದು ಕರಡು ಇ.ಐ.ಎ. ಅಧಿಸೂಚನೆಯನ್ನು ಪ್ರಕಟಿಸಿ ಜೂನ್ 10 ರೊಳಗೆ ಪ್ರತಿಕ್ರಿಯೆಗಳನ್ನು ಕಳಿಸುವಂತೆ ಕೇಳಲಾಯಿತು. ಆ ಪ್ರಕಟಣೆಯ ದಿನಾಂಕ ಮಾರ್ಚ್ 23ರಂದು ಎಂದಿದ್ದರೂ ಅದು ಕೊವಿಡ್ ವಿರುದ್ಧ ಸಮರ ಉಂಟು ಮಾಡಿದ ಪರಿಸ್ಥಿತಿಯಿಂದಾಗಿ ಗಜೆಟ್‌ನಲ್ಲಿ ಅದರ ಪ್ರಕಟಣೆ ವಿಳಂಬಗೊಂಡಿತು. ಇದೊಂದು ಗಂಭೀರ ಪ್ರಶ್ನೆಯಾದ್ದರಿಂದ ಈ ಬಗ್ಗೆ ಆಮೂಲಾಗ್ರ ಚರ್ಚೆ ನಡೆಯಬೇಕಾಗಿದೆ, ಆದ್ದರಿಂದ ಸಮಯ ಮಿತಿಯನ್ನು ವಿಸ್ತರಿಸಬೇಕು ಎಂದು ಬೃಂದಾ ಕಾರಟ್ ಮೇ5 ರಂದು ಪರಿಸರ ಮಂತ್ರಿಗಳಿಗೆ ಪತ್ರ ಬರೆದರು. ಇತರ ಹಲವರಿಂದಲೂ ದೇಶದ ಎಲ್ಲೆಡೆಯಿಂದ ಈ ಆಗ್ರಹ ಬಂದಾಗ ಪರಿಸರ ಮಂತ್ರಾಲಯದ ಉನ್ನತ ಅಧಿಕಾರಿಗಳು ಈ ಗಡುವನ್ನು ಆಗಸ್ಟ್ 10ರ ವರೆಗೆ ವಿಸ್ತರಿಸಲು ಮುಂದಾದರು. ಆದರೆ ಪರಿಸರ ಮಂತ್ರಿಗಳು ಅದನ್ನು ಜೂನ್ 30 ಕ್ಕೆ ಇಳಿಸಿದರು. ಇದರ ವಿರುದ್ಧ ಕೆಲವರು ದಿಲ್ಲಿ ಹೈಕೋರ್ಟಿಗೆ ಹೋದರು. ಹೈಕೋರ್ಟ್ ಇದನ್ನು ಆಗಸ್ಟ್ 11ರ ವರೆಗೆ ವಿಸ್ತರಿಸಿತು. ಇದೊಂದು ಸಕಾರಾತ್ಮಕ ಮಧ್ಯಪ್ರವೇಶ ಎಂದು ಹೇಳುತ್ತ ಬೃಂದಾ ಕಾರಟ್ ಅವರು ತಮ್ಮ ಜುಲೈ 17ರ ಪತ್ರದಲ್ಲಿ ಈ ಕರಡನ್ನು ಕುರಿತಂತೆ ಸಿಪಿಐ(ಎಂ)ನ ವಿವರವಾದ ವಿಮರ್ಶೆಯನ್ನು ಪ್ರಸ್ತುತ ಪಡಿಸುತ್ತ, ಇದನ್ನು ಏಕೆ ಹಿಂತೆಗೆದುಕೊಳ್ಳಬೇಕಾಗಿದೆ ಎಂದು ಸಿಪಿಐ(ಎಂ) ಆಗ್ರಹಿಸುತ್ತಿದೆ ಎಂಬುದನ್ನು ವಿವರಿಸಿದ್ದಾರೆ. ಅವುಗಳನ್ನು ಈ ಮುಂದೆ ಕೊಡಲಾಗಿದೆ.



ಪರಿಸರದ ರಕ್ಷಣೆಯ ಕಾಳಜಿ ಇಲ್ಲ! ನಿಯಂತ್ರಣಗಳ ಉಲ್ಲಂಘನೆಗೆ ಲೈಸೆನ್ಸ್ !!

ಭಾರತದ ಪರಿಸರ ನಿಯಂತ್ರಣ ರಚನೆ ಗಟ್ಟಿಮುಟ್ಟಾಗಿಲ್ಲ, ಅದನ್ನು ಸರಿಪಡಿಸಬೇಕಾಗಿದೆ ಎಂಬುದು ಸ್ಪಷ್ಟ. 'ಪರಿಸರ ಪರಿಣಾಮ ನಿರ್ಧಾರಣೆ' (Environment Impact Assessment - ಇ.ಐ.ಎ.) ಈ ರಚನೆಯ ಒಂದು ಭಾಗ. 2020ರಲ್ಲಿ ವಿಶ್ವ ಬ್ಯಾಂಕಿನ 'ವ್ಯಾಪಾರ–ವ್ಯವಹಾರ ನಡೆಸುವ ಸುಗಮತೆ' (Ease of Doing Business) ಸೂಚ್ಯಂಕದಲ್ಲಿ ಭಾರತದ ಸ್ಥಾನ 190 ದೇಶಗಳಲ್ಲಿ 63ನೇಯದು. ಕಳೆದ ವರ್ಷಕ್ಕೆ ಹೋಲಿಸಿದರೆ 14 ಶ್ರೇಯಾಂಕದಷ್ಟು ಉತ್ತಮಗೊಂಡಿದೆ. ಆದರೆ, ಯೇಲ್ ವಿಶ್ವವಿದ್ಯಾಲಯದ 'ಜಾಗತಿಕ ಪರಿಸರ ನಿರ್ವಹಣೆ ಸೂಚ್ಯಂಕ' (Global Environment Performance)ದಲ್ಲಿ 180 ದೇಶಗಳಲ್ಲಿ 168ನೇ ಸ್ಥಾನದಷ್ಟು ಕೆಳಗೆ ಇದೆ. 2.9 ಅಂಶಗಳಷ್ಟು ಇಳಿಕೆಯಾಗಿದೆ. ಅಂದರೆ ಸರಕಾರದ ಆದ್ಯತೆ ವ್ಯಾಪಾರ–ವ್ಯವಹಾರಗಳೇ, ಅವಕ್ಕೆ ನೆರವಾಗಲು ಅದು ಪರಿಸರ ನಿಯಂತ್ರಣಗಳನ್ನೂ ನಿಸ್ಸಾರಗೊಳಿಸುತ್ತದೆ, ಅದರಿಂದಾಗಿ ಪರಿಸರದ ಮೇಲೆ, ಮತ್ತು ತಮ್ಮ ಜೀವನ ಹಾಗೂ ಜೀವನೋಪಾಯಗಳಿಗಾಗಿ ನೈಸರ್ಗಿಕ ಸಂಪನ್ಮೂಲಗಳ ಮೇಲೆ ಅವಲಂಬಿಸಿರುವವರ ಮೇಲೆ ಗಂಭೀರ ದುಷ್ಪರಿಣಾಮಗಳು ಉಂಟಾಗುತ್ತಿವೆ ಎಂಬುದನ್ನು ಇದು ತೋರಿಸುತ್ತದೆ.

ಇ.ಐ.ಎ. ಅಧಿಸೂಚನೆಗಳು, 2006(ಇ.ಐ.ಎ. 2006) ನ್ನು ಹೊರಡಿಸಿದ ನಂತರದ ಒಂದೂವರೆ ದಶಕದ ನಂತರ ಈ ಅವಧಿಯ ಅನುಭವಗಳನ್ನು ಬಳಸಿಕೊಳ್ಳಲು ಈ ಹೊಸ ಅಧಿಸೂಚನೆ (ಇ.ಐ.ಎ.2020) ಒಂದು ಅವಕಾಶವಾಗಿತ್ತು. ಈ ಮೂಲಕ ಇನ್ನೂ ಬಿಗುವಾದ ನಿಯಂತ್ರಣಗಳು ಹಾಗೂ ಕಟ್ಟುನಿಟ್ಟಾದ ಉಸ್ತುವಾರಿ ಮತ್ತು ಜಾರಿಯನ್ನು ಖಾತ್ರಿಪಡಿಸಲು ಇ.ಐ.ಎ. ಮಾರ್ಗಸೂತ್ರಗಳನ್ನು ರೂಪಿಸಬಹುದಾಗಿತ್ತು. ದುರದೃಷ್ಟವಶಾತ್, ಕರಡು ಇ.ಐ.ಎ.2020 ಈ ಹಿಂದಿನ ಇ.ಐ.ಎ.2006ರ ದೌರ್ಬಲ್ಯಗಳನ್ನು ಸರಿಪಡಿಸುವ ಬದಲು ತದ್ವಿರುದ್ಧವಾದುದನ್ನೇ ಮಾಡಿದೆ.

ಈ ಕ್ರಮದ ಕಾನೂನುಬದ್ಧತೆ ಕೂಡ ಸಂದೇಹಾಸ್ಪದ

ಪರಿಸರ ರಕ್ಷಣೆ ಕಾಯ್ದೆ, 1986 "ಪರಿಸರವನ್ನು ರಕ್ಷಿಸಲು ಮತ್ತು ಉತ್ತಮಗೊಳಿಸಲು" ಕ್ರಮಗಳನ್ನು ಕೈಗೊಳ್ಳಬೇಕು ಎಂದು ಕೇಂದ್ರ ಸರಕಾರಕ್ಕೆ ಅಧಿಕಾರವನ್ನು ಕೊಡುತ್ತದೆ. ಆದರೆ ಕರಡು ಇ.ಐ.ಎ.2020, ತದ್ವಿರುದ್ಧವಾಗಿ, ವಿಭಿನ್ನ ವಿಧಾನಗಳಲ್ಲಿ ಈಗಿರುವ ರಕ್ಷಣೆಗಳನ್ನೂ ದುರ್ಬಲಗೊಳಿಸುತ್ತದೆ. ಅಲ್ಲದೆ, ರಾಷ್ಟ್ರೀಯ ಹಸಿರು ನ್ಯಾಯಮಂಡಳಿ(ಎನ್.ಜಿ.ಟಿ.) ಮತ್ತು ಸುಪ್ರಿಂ ಕೋರ್ಟ್ ಸೇರಿದಂತೆ ನ್ಯಾಯಾಲಯಗಳು ಕೇಂದ್ರ ಸರಕಾರ ಪರಿಸರ ನಿಯಂತ್ರಣಗಳನ್ನು ದುರ್ಬಲಗೊಳಿಸುವ ಅಥವ ಇತರ ಪ್ರಯತ್ನಗಳ ವಿರುದ್ಧ ನೀಡಿರುವ ತೀರ್ಪುಗಳಿಂದ ತಪ್ಪಿಸಿಕೊಳ್ಳುವ ಪ್ರಯತ್ನವನ್ನೂ ಮಾಡಿದೆ. ಆದ್ದರಿಂದ ಈ ಕ್ರಮದ ಕಾನೂನುಬದ್ಧತೆ ಕೂಡ ಸಂದೇಹಾಸ್ಪದವಾಗಿದೆ, ಇದನ್ನು ನ್ಯಾಯಾಲಯಗಳು ರದ್ದು ಮಾಡಬಹುದು ಕೂಡ.

ಪರಿಸರ ಸಂಬಂಧಿ ಕಾಳಜಿಯಿಲ್ಲ, ಕಾರ್ಪೊರೇಟ್‌ಗಳ ಬಗ್ಗೆಯೇ ಕಾಳಜಿ

ಕರಡು ಇ.ಐ.ಎ. 2020 ಕಾರ್ಪೊರೇಟ್ ಹಿತಾಸಕ್ತಿಗಳನ್ನು ತುಷ್ಟೀಕರಿಸುವ ಪ್ರಸಕ್ತ ಸರಕಾರದ ಒಟ್ಟಾರೆ ಧೋರಣಾ ನಿಲುವಿನ, ಅಂದರೆ ಹೂಡಿಕೆಗೆ ಪ್ರೋತ್ಸಾಹ ಕೊಡುವ ಮತ್ತು 'ಸುಗಮ ವ್ಯಾಪಾರ–ವ್ಯವಹಾರ'ಕ್ಕೆ ಸೌಕರ್ಯ ಒದಗಿಸುವ ಹೆಸರಲ್ಲಿ ಕಾರ್ಪೊರೇಟ್ ಆಗ್ರಹಗಳನ್ನು ಈಡೇರಿಸುವುದರ ಭಾಗವಾಗಿದೆ. ಇದರಲ್ಲಿ ಉದ್ದಿಮೆಗಳ ಮಂಜೂರಾತಿಗೆ ಅವು ಪಾಲಿಸಬೇಕಾದ ಪರಿಸರ ನಿಯಮಾವಳಿಗಳನ್ನು ಸಡಿಲಗೊಳಿಸುವ ನೀತಿ ನಿರ್ಧಾರಗಳೂ ಸೇರಿವೆ. ಇತ್ತೀಚೆಗೆ ವಾಣಿಜ್ಯ ಗಣಿಗಾರಿಕೆಯನ್ನು ನಿಯಂತ್ರಣಮುಕ್ತಗೊಳಿಸಿ, ಪರಿಸರ ಸಂಬಂಧಿ ನಿಯಮಾವಳಿಗಳನ್ನು ಮತ್ತು ಸಮಯ ಚೌಕಟ್ಟನ್ನು ಸಡಿಲಗೊಳಿಸಲಾಗಿದೆ. ಇವು ಪರಿಸರ ಸಂಬಂಧಿ ಕಾಳಜಿಗಳಿಂದಲ್ಲ, ಕಾರ್ಪೊರೇಟ್‌ಗಳ ಬಗ್ಗೆ ಕಾಳಜಿಯಿಂದ ಮಾಡಿರುವ ಬದಲಾವಣೆಗಳು.

ಉದಾಹರಣೆಗೆ, 'ಮಾನ್ಯತೆ ಪಡೆದ ಪರಿಸರ ಪ್ರಭಾವ ನಿರ್ಧಾರಣೆ ಸಲಹಾ ಸಂಘಟನೆ'(ಎ.ಸಿ.ಒ.)ಗಳನ್ನು ಕುರಿತಂತೆ ಕಳೆದ ಹಲವು ವರ್ಷಗಳ ಗಂಭೀರ ಅನುಭವಗಳನ್ನು ಈ ಕರಡು ಇ.ಐ.ಎ. 2020 ಗಮನಕ್ಕೆ ತಗೊಂಡಿಲ್ಲ. ಈ ಎ.ಸಿ.ಒ.ಗಳು ಪ್ರಾಜೆಕ್ಟ್‌ಗಳ ಪ್ರಸ್ತಾವನೆಗಳನ್ನು ಮುಂದಿಟ್ಟವರ ಪರವಾಗಿ ಈ ಇ.ಐ.ಎ. ವರದಿಗಳನ್ನು ಸಲ್ಲಿಸಬೇಕು. ಈ ವರದಿಗಳು ಅತ್ಯಂತ ಅತೃಪ್ತಿಕರವಾಗಿರುತ್ತವೆ, ಅವುಗಳಲ್ಲಿ ಗಟ್ಟಿತನ ಇರುವುದಿಲ್ಲ, ಹೆಚ್ಚಾಗಿ ಬೇರೆ ವರದಿಗಳಿಂದ ನಕಲು ಮಾಡಿದ್ದೇ ಆಗಿರುತ್ತವೆ. ಒಂದೆಡೆ ಪ್ರಾಜೆಕ್ಟಿನ ಪ್ರಸ್ತಾವನೆಯನ್ನು ಕೊಟ್ಟವರ ಹಣವನ್ನು ಪಡೆಯುವ ಈ ಸಂಸ್ಥೆ, ಇನ್ನೊಂದೆಡೆಯಲ್ಲಿ ತನ್ನ ವರದಿಯಲ್ಲಿ ಪರಿಸರ ರಕ್ಷಣೆಯ ಕಾನೂನುಗಳನ್ನು ಪಾಲಿಸಬೇಕು– ಇವೆರಡರ ನಡುವೆ ಹಿತಾಸಕ್ತಿಗಳ ತಾಕಲಾಟದ ಪ್ರಶ್ನೆ ಮತ್ತೆ–ಮತ್ತೆ ಎದ್ದೇಳುತ್ತ ಬಂದಿವೆ. ಇದಲ್ಲದೆ ಈ ವರದಿಗಳ ಲಭ್ಯತೆಯ ಪ್ರಶ್ನೆಯೂ ಬಂದಿದೆ. ಇದನ್ನು ಪ್ರಕಟಿಸಬೇಕು ಎಂದು ಕಾನೂನು ಹೇಳುತ್ತದೆ, ಮತ್ತು ಯಾವುದೇ ಪ್ರಾಜೆಕ್ಟ್ ಮಂಜೂರಾತಿ ಮೊದಲು ಆ ಬಗ್ಗೆ ಸಾರ್ವಜನಕ ಸಮಾಲೋಚನೆಗಳು ನಡೆಯಬೇಕೆಂದೂ ಹೇಳುತ್ತದೆ. ಅದಕ್ಕೆ ಈ ವರದಿ ಮುಖ್ಯವಾಗುತ್ತದೆ. ಆದರೆ ಸಾಮಾನ್ಯವಾಗಿ ಪೂರ್ಣ ವರದಿಗಳು ಲಭ್ಯವಿರುವುದಿಲ್ಲ, ಕೇವಲ ಸಾರಾಂಶ ಪ್ರಕಟವಾಗಿರುತ್ತದೆ. ಹಾಗಿರುವಾಗ, ಅಥವ ಅದು ಪಕ್ಷಪಾತದಿಂದ ತುಂಬಿದ್ದರೆ ಅಥವ ಕಳಪೆ ಗುಣಮಟ್ಟದ್ದಾಗಿದ್ದರೆ ಇಂತಹ ಸಮಾಲೋಚನೆ ಸಾಧ್ಯವಾಗುವುದಿಲ್ಲ. ಈ ಪ್ರಕ್ರಿಯೆಯನ್ನು ಉತ್ತಮಪಡಿಸುವ ಅಗತ್ಯವಿತ್ತು, ಇ.ಐ.ಎ. ವರದಿಗಳನ್ನು ಸಾರ್ವಜನಿಕ ಸಂಸ್ಥೆಗಳು ಮತ್ತು ಇತರ ಸ್ವತಂತ್ರ ಸಂಸ್ಥೆಗಳು ಮಾಡುವಂತಾಗಬೇಕಿತ್ತು. ಆದರೆ ಕರಡು ಇ.ಐ.ಎ. 2020 ಈ ಪ್ರಕ್ರಿಯೆಯನ್ನು ಇನ್ನಷ್ಟು ಅಪಾರದರ್ಶಕ ಗೊಳಿಸಿದೆ.

ಆದಿವಾಸಿಗಳ ಹಕ್ಕುಗಳ ಉಪೇಕ್ಷೆ

ಈ ಕರಡಿನ ಅತ್ಯಂತ ಆಕ್ಷೇಪಣೀಯ ಸಂಗತಿ ಎಂದರೆ ಆದಿವಾಸಿಗಳ ಆತಂಕಗಳು ಈ ಇಡೀ ದಸ್ತಾವೇಜಿನ ಭಾಗವಾಗಿಯೇ ಇಲ್ಲ. ವಾಸ್ತವವಾಗಿ ಪರಿಸರ ನಿಯಂತ್ರಣಗಳನ್ನು ದುರ್ಬಲಗೊಳಿಸಿದರೆ, ಅದರಿಂದ ಅತಿ ಹೆಚ್ಚು ಬಾಧಿತರಾಗುವವರು ಇವರೇ. ಆದಿವಾಸಿ, ಬುಡಕಟ್ಟು, ಗ್ರಾಮಸಭಾ, ಅರಣ್ಯ ಹಕ್ಕುಗಳ ಕಾಯ್ದೆ, ಐದನೇ ಶೆಡ್ಯೂಲ್, ಆರನೇ ಶೆಡ್ಯೂಲ್, ಪಿ.ಇ.ಎಸ್.ಎ.(ಪಂಚಾಯತು–ಪರಿಶಿಷ್ಟ ಪ್ರದೇಶಗಳಿಗೆ ವಿಸ್ತರಣೆ– ಕಾಯ್ದೆ)ಈ ಪದಗಳು ಈ ದಸ್ತಾವೇಜಿನಲ್ಲಿ ಎಲ್ಲಿಯೂ ಕಾಣಸಿಗುವುದಿಲ್ಲ. ಬೇಸ್‌ಲೈನ್ ಮಾಹಿತಿ ಕುರಿತ ನಿರೂಪಣೆಯಲ್ಲಿ(ಪರಿಚ್ಛೇದ 3(5)), ಅಥವ ಸಾಮಾನ್ಯ ಷರತ್ತುಗಳು(ಪರಿಚ್ಛೇದ 3.30)ರಲ್ಲಿ ಭೂಸ್ವಾಧೀನಕ್ಕೆ ಸಂಬಂಧಪಟ್ಟಂತೆ ಆದಿವಾಸಿ ಸಮುದಾಯಗಳ ಸಂವಿಧಾನಿಕ ಮತ್ತು ಕಾನೂನು

ಪುಟ 10 ನೋಡಿ



ನಾಲ್ಕು ಆತಂಕಕಾರಿ ಅಂಶಗಳು

1. ಪ್ರಾಜೆಕ್ಟ್‌ಗಳ ಮರು ವರ್ಗೀಕರಣ, ಇದರ ಮೂಲಕ ಬಹಳಷ್ಟು ಪ್ರಾಜೆಕ್ಟುಗಳು ಪರಿಸರ ಪರಿಣಾಮ ನಿರ್ಧಾರಣಾ ಸಮಿತಿಗಳ ಪರೀಕ್ಷಣೆ ಮತ್ತು ಸಾರ್ವಜನಿಕ ಸಮಾಲೋಚನೆಯ ವ್ಯಾಪ್ತಿಗೂ ಒಳಗಾಗದಂತೆ ಮಾಡಲಾಗಿದೆ.
2. ಸಾರ್ವಜನಿಕ ಸಮಾಲೋಚನೆಗಳನ್ನು ಕೆಲವು ವಿಷಯಗಳಲ್ಲಿ ದುರ್ಬಲಗೊಳಿಸಲಾಗಿದೆ, ಇನ್ನು ಕೆಲವು ವಿಷಯಗಳಲ್ಲಿ ತೆಗೆದು ಬಿಡಲಾಗಿದೆ.
3. ಪ್ರಾಜೆಕ್ಟ್‌ಗಳಲ್ಲಿ ಉಲ್ಲಂಘನೆಗಳಾದಲ್ಲಿ ಅವನ್ನು ನಂತರ ಕಾನೂನುಬದ್ಧಗೊಳಿಸುವ ಅಂಶವನ್ನು ಸೇರಿಸಲಾಗಿದೆ. ಮತ್ತು
4. ವಿವಿಧ ಪರಿಚ್ಛೇದಗಳ ಮೂಲಕ ಹಲವಾರು ವಿನಾಯ್ತಿ/ ಸೌಲಭ್ಯಗಳನ್ನು ನೀಡಲಾಗಿದೆ.

ನಿಯಂತ್ರಣಗಳ ಉಲ್ಲಂಘನೆಗೆ ಲೈಸೆನ್ಸ್ !!



ಕರಡು ಇ.ಐ.ಎ 2020

ಪುಟ 9 ರಿಂದ

ಹಕ್ಕುಗಳನ್ನು ಉಪೇಕ್ಷಿಸಲಾಗಿದೆ. ಈ ಅಧಿಸೂಚನೆಯನ್ನು ತಿರಸ್ಕರಿಸಲು ಇದೊಂದೇ ಕಾರಣ ಸಾಕಾಗುತ್ತದೆ.

2010ರ ಕೈಪಿಡಿಯ ಬಗ್ಗೆ ಮೌನವೇಕೆ?

ಇ.ಐ.ಎ.2006ರ ನಾಲ್ಕು ವರ್ಷಗಳ ನಂತರ ಫೆಬ್ರುವರಿ 2010ರಲ್ಲಿ ಹೈದರಾಬಾದಿನ ಎ.ಎಸ್.ಸಿ. ಖನಿಜಗಳ ಗಣಿಗಾರಿಕೆಗೆ ಒಂದು ಇ.ಐ.ಎ. ಮಾರ್ಗದರ್ಶಕ ಕೈಪಿಡಿಯನ್ನು ತಯಾರಿಸಿತು. ಈಗ ಇ.ಐ.ಎ.2006ರ ಸ್ಥಾನದಲ್ಲಿ ಇ.ಐ.ಎ.2020 ಬರುವುದರೊಂದಿಗೆ ಈ ಕೈಪಿಡಿಯ ಸ್ಥಾನಮಾನವೇನು? ಈಗ ಗಣಿಗಾರಿಕೆಯನ್ನು ವಾಣಿಜ್ಯ ಹಿತಾಸಕ್ತಿಗಳಿಗೆ ತೆರೆಯುತ್ತಿರುವಾಗ ಇದು ಇನ್ನಷ್ಟು ಮಹತ್ವದ್ದಾಗುತ್ತದೆ. ಓಪನ್ ಕಾಸ್ಟಿಂಗ್(ತೆರೆದ ಹೊಂಡ) ಗಣಿಗಾರಿಕೆಗೆ ಭಾರೀ ಮಾನವ ಮತ್ತು ಪರಿಸರ ಬೆಲೆಗಳನ್ನು ತೆರಬೇಕಾಗಿದ್ದರೂ ಸರಕಾರ ಇದನ್ನೇ ಪ್ರಧಾನ ಗಣಿಗಾರಿಕೆ ವಿಧಾನವಾಗಿ ಮಂಜೂರು ಮಾಡುತ್ತಿದೆ. ಕಳೆದ ದಶಕದಲ್ಲಿ ಈ ವಿಧಾನದಿಂದಾಗಿ ಇಂತಹ ಗಣಿಗಳ ಸುತ್ತಲಿನ ಗಾಳಿ, ನೀರು ಮತ್ತು ನೆಲ ಭಾರಿ ವಿನಾಶವನ್ನು ಕಂಡಿವೆ. ಗಣಿ ಕಾರ್ಮಿಕರು ಇದನ್ನು 'ಕಸಾಯಿ ಗಣಿಗಾರಿಕೆ' ಎನ್ನುತ್ತಾರೆ. 2010ರ ಕೈಪಿಡಿಯ ಸ್ಥಾನಮಾನವೂ ಈಗ ಸಂದೇಹಾಸ್ಪದವಾಗಿರುವಾಗ, ಕರಡು ಇ.ಐ.ಎ 2020ರಲ್ಲಿ ಪರಿಸರಕ್ಕೆ ಈ ಹೆಚ್ಚುತ್ತಿರುವ ಬೆದರಿಕೆಯನ್ನು ಎದುರಿಸುವುದಿರಲಿ, ಅದನ್ನು ಗುರುತಿಸುವುದೂ ಇಲ್ಲ. 2010ರ ಕೈಪಿಡಿ ಇಂತಹ ಗಣಿಗಳಲ್ಲಿ ಗಣಿಗಾರಿಕೆ ಮುಗಿದ ನಂತರ ಅಲ್ಲಿಯ ನೆಲ–ಜಲವನ್ನು ಅದರ ಮೂಲ ನೆಲೆಗೆ ಮರಳಿಸುವ ಹೊಣೆಯನ್ನು ಪ್ರಾಜೆಕ್ಟ್‌ದಾರರಿಗೆ ವಿಧಿಸುತ್ತದೆ. ಐದು ವರ್ಷಗಳಿಗೊಮ್ಮೆ ಇದರ ಪರಾಮರ್ಶೆಯನ್ನು ನಡೆಸಬೇಕೆಂದೂ ಹೇಳುತ್ತದೆ. ಈಗ ನಡೆಯುತ್ತಿರುವ ಬೃಹತ್ ಪ್ರಮಾಣದ ಪರಿಸರ ವಿನಾಶದ ಸಂದರ್ಭದಲ್ಲಿ ಇದೊಂದು ತುರ್ತು ಪ್ರಶ್ನೆಯಾಗಿದೆ. ಆದರೆ ಕರಡು ಇ.ಐ.ಎ.2020 ಇವೆಲ್ಲದರ ಬಗ್ಗೆ ಮೌನವಾಗಿದೆ.

ಅಧಿಕಾರದ ಕೇಂದ್ರೀಕರಣ

ಕೆಲವು ಅಂಶಗಳಲ್ಲಿ ಈ ಕರಡು ಇ.ಐ.ಎ.2020 ಅಧಿಕಾರವನ್ನು ಕೇಂದ್ರ ಮಂತ್ರಾಲಯದಲ್ಲಿ ಕೇಂದ್ರೀಕರಿಸುತ್ತದೆ. ಉದಾ: ಪರಿಚ್ಛೇದ 6,7,8 ಮತ್ತು 9ರಲ್ಲಿ ಕೇಂದ್ರ ಮತ್ತು ರಾಜ್ಯ ಮಟ್ಟಗಳಲ್ಲಿ ಪರಿಣತ ನಿರ್ಧಾರಣೆ ಸಮಿತಿ (Expert Appraisal Committee) ಮತ್ತು ತಾಂತ್ರಿಕ ಸಮಿತಿಗಳಿಗೆ ನೇಮಕಗಳ ಅಧಿಕಾರವನ್ನು ಕೇವಲ ಮಂತ್ರಾಲಯಕ್ಕೆ ಕೊಡಲಾಗಿದೆ, ಈ ಮೂಲಕ ಅದು ರಾಜ್ಯ ಮಟ್ಟದ ನೇಮಕಗಳಲ್ಲೂ ಹಸ್ತಕ್ಷೇಪ ಮಾಡುತ್ತದೆ. ಪರಿಸರ ಉಸ್ತುವಾರಿ ರೂಪುರೇಷೆಯನ್ನು ನಿರ್ಧರಿಸುವ ಈ ಸಮಿತಿಗಳಿಗೆ ಸ್ವಾಯತ್ತತೆ ಇರದಿದ್ದರೆ ಅವು ಸರಕಾರ ಬಯಸುವಂತೆ ಮಂಜೂರಾತಿ ನೀಡುವ ರಬ್ಬರ್ ಸ್ಟಾಂಪುಗಳಾಗುತ್ತವೆ. ಪರಿಚ್ಛೇದ 11 ಕೇಂದ್ರಕ್ಕೆ ಒಂದಕಿಂತ ಹೆಚ್ಚು ಪರಿಣತರ ಸಮಿತಿಯನ್ನು ನೇಮಿಸುವ ಅಧಿಕಾರವನ್ನೂ ಇದು ಕೊಡುತ್ತದೆ. ಅಂದರೆ ರಾಜ್ಯಮಟ್ಟದ ಇಂತಹ ಸಮಿತಿ ಒಂದು ವೇಳೆ ಕೇಂದ್ರ ಸರಕಾರ ಬಯಸುವಂತೆ ವರ್ತಿಸದಿದ್ದರೆ ಬೇರೊಂದು ಸಮಿತಿಯನ್ನು ನೇಮಿಸಿ ತನಗೆ ಬೇಕಾದ ಮಂಜೂರಾತಿಯನ್ನು ಪಡೆಯಬಹುದು. ವಿವಿಧ ಸಮಿತಿಗಳಿಗೆ ನೇಮಕ ಕೇವಲ ಕೇಂದ್ರ ಮಂತ್ರಾಲಯದ ಅಧಿಕಾರವಾಗುವುದು ಸಲ್ಲದು, ಮತ್ತು ಇಂತಹ ಸಮಿತಿಗಳ ಸದಸ್ಯರ ಸಾಮಾಜಿಕ ಸಂಯೋಜನೆಯೂ ಹೆಚ್ಚು ಪ್ರಜಾಸತ್ತಾತ್ಮಕವಾಗಿರಬೇಕು, ಅಂದರೆ ಸೂಕ್ತ ಪರಿಣತಿ ಇರುವ ಮಹಿಳೆಯರು, ಪರಿಶಿಷ್ಟ ಜಾತಿ, ಬುಡಕಟ್ಟುಗಳ ಪ್ರಾತಿನಿಧ್ಯ ಇರುವಂತೆ ನೋಡಿಕೊಳ್ಳಬೇಕು.

ಇವೆಲ್ಲವುಗಳಿಂದ, ಈ ಐದು ಅಂಶಗಳು ಸ್ಪಷ್ಟವಾಗುತ್ತವೆ:

1. **ಕರಡು ಇ.ಐ.ಎ 2020, ಈ ಮೊದಲು ಕೇಂದ್ರ ಸರಕಾರ ಇ.ಐ.ಎ. ನಿಯಂತ್ರಣಗಳನ್ನು ದುರ್ಬಲಗೊಳಿಸಲು ತಂದ ನಿಯಮಗಳು, ವಿಧಾನಗಳು, ಅಧಿಸೂಚನೆಗಳು ಮತ್ತು ತಿದ್ದುಪಡಿಗಳನ್ನು ರದ್ದು ಮಾಡಿರುವ ನ್ಯಾಯಾಲಯಗಳ ನಿರ್ಧಾರಗಳನ್ನು ತಳ್ಳಿಹಾಕುವ ಒಂದು ಉಪಕರಣ;**
2. **ಇದು ಪ್ರಾಜೆಕ್ಟ್ ಮಂಡನೆಯ ವಿಷಯದಲ್ಲಿ ಈಗಿರುವ ಹಿತಾಸಕ್ತಿಗಳ ತಾಕಲಾಟದ ಪ್ರಶ್ನೆಯನ್ನು ಪರಿಶೀಲಿಸುವುದಿಲ್ಲ;**
3. **ಖನಿಜಗಳ ಗಣಿಕಾರಿಕೆ ಕುರಿತಾದ ಮಾರ್ಗದರ್ಶಕ ಕೈಪಿಡಿ ಈ ಕರಡಿನ ಭಾಗ ಎಂದು ಖಾತ್ರಿಪಡಿಸದೆ, ನಿರ್ದಿಷ್ಟವಾಗಿ ಓಪನ್ ಕಾಸ್ಟ್ ಗಣಿಗಾರಿಕೆಯ ಮೇಲಿನ ನಿಯಂತ್ರಣಗಳನ್ನು ದುರ್ಬಲಗೊಳಿಸಿದೆ;**
4. **ಪರಿಸರ ನಿಯಂತ್ರಣದ ಒಟ್ಟು ರಚನೆಯ ಭಾಗಗಳಾಗಿರುವ ವಿವಿಧ ಪರಿಣಾಮ ನಿರ್ಧಾರಣಾ ಮತ್ತು ತಾಂತ್ರಿಕ ಸಮಿತಿಗಳ ಆಯ್ಕೆ ವಿಧಾನವನ್ನು ಬದಲಿಸಿ ಈ ಸಮಿತಿಗಳ ಸ್ವಾಯತ್ತತೆಯನ್ನು, ರಾಜ್ಯಗಳ ಪಾತ್ರವನ್ನು, ಮತ್ತು ಹೆಚ್ಚು ಪ್ರಜಾಸತ್ತಾತ್ಮಕವಾದ ಸಂಯೋಜನೆಯನ್ನು ಕೂಡ ಖಾತ್ರಿಪಡಿಸಬೇಕಾಗಿದೆ;**
5. **ಆದಿವಾಸಿಗಳ ಸಾಂವಿಧಾನಿಕ ಮತ್ತು ಕಾನೂನಾತ್ಮಕ ಹಕ್ಕುಗಳನ್ನು ದುರ್ಬಲ ಗೊಳಿಸಲಾಗಿದೆ, ಕೆಲವು ವಿಷಯಗಳನ್ನು ನಿರ್ಮೂಲ ಮಾಡಲಾಗಿದೆ.**

ನಾಲ್ಕು ಆತಂಕಕಾರಿ ಅಂಶಗಳು

ಇದಲ್ಲದೆ, ಕರಡು ಇ.ಐ.ಎ 2020 ತಂದಿರುವ ಬದಲಾವಣೆಗಳಲ್ಲಿ ಆತಂಕ ಉಂಟು ಮಾಡುವಂತಹ ನಾಲ್ಕು ನಿರ್ದಿಷ್ಟ ಅಂಶಗಳಿವೆ. ಅವೆಂದರೆ:

1. ಪ್ರಾಜೆಕ್ಟ್‌ಗಳ ಮರು ವರ್ಗಿಕರಣ, ಇದರ ಮೂಲಕ ಬಹಳಷ್ಟು ಪ್ರಾಜೆಕ್ಟುಗಳು ಪರಿಸರ ಪರಿಣಾಮ ನಿರ್ಧಾರಣಾ ಸಮಿತಿಗಳ ಪರೀಕ್ಷಣೆ ಮತ್ತು ಸಾರ್ವಜನಿಕ ಸಮಾಲೋಚನೆಯ ವ್ಯಾಪ್ತಿಗೂ ಒಳಗಾಗದಂತೆ ಮಾಡಲಾಗಿದೆ.
2. ಸಾರ್ವಜನಿಕ ಸಮಾಲೋಚನೆಗಳನ್ನು ಕೆಲವು ವಿಷಯಗಳಲ್ಲಿ ದುರ್ಬಲಗೊಳಿಸಲಾಗಿದೆ, ಇನ್ನು ಕೆಲವು ವಿಷಯಗಳಲ್ಲಿ ತೆಗೆದು ಬಿಡಲಾಗಿದೆ.
3. ಪ್ರಾಜೆಕ್ಟ್‌ಗಳಲ್ಲಿ ಉಲ್ಲಂಘನೆಗಳಾದಲ್ಲಿ ಅವನ್ನು ನಂತರ ಕಾನೂನುಬದ್ಧಗೊಳಿಸುವ ಅಂಶವನ್ನು ಸೇರಿಸಲಾಗಿದೆ. ಮತ್ತು
4. ವಿವಿಧ ಪರಿಚ್ಛೇದಗಳ ಮೂಲಕ ಹಲವಾರು ವಿನಾಯ್ತಿ/ ಸೌಲಭ್ಯಗಳನ್ನು ನೀಡಲಾಗಿದೆ.

- ಕರಡಿನ ಪರಿಚ್ಛೇದ 5 ಹಲವಾರು ವಾತಾವರಣವನ್ನು ಕಲುಷಿತಗೊಳಿಸುವ ಉದ್ದಿಮೆಗಳನ್ನು ಬಿ2 ವರ್ಗಕ್ಕೆ ಸೇರಿಸಿದೆ, ಅಂದರೆ ಅವುಗಳಿಗೆ ಪರಿಣಾಮ ನಿರ್ಧಾರಣೆ ಸಮಿತಿಗಳ ಪರೀಕ್ಷಣೆಗಳು ಬೇಕಿಲ್ಲ, ಪರಿಸರ ಮಂಜೂರಾತಿಯನ್ನು ಪಡೆಯಬೇಕಾಗಿಲ್ಲ ಮತ್ತು ಸಾರ್ವಜನಿಕ ಸಮಾಲೋಚನೆಗೂ ಒಳಗಾಗಬೇಕಿಲ್ಲ. ಇದು 2006ರ ಅಧಿಸೂಚನೆ ಮತ್ತು ಪರಿಸರ ಕಾಯ್ದೆಯ ಉಲ್ಲಂಘನೆಯೇ ಅಗುತ್ತದೆ. ರಿಯಲ್ ಎಸ್ಟೇಟ್ ಮತ್ತು ಕಟ್ಟಡ ನಿರ್ಮಾಣ ವಲಯವಂತೂ ಸುಮಾರಾಗಿ ಎಲ್ಲ ಪರಿಸರ ಸಂಬಂಧಿ ನಿಯಂತ್ರಣಗಳಿಂದ ವಿನಾಯ್ತಿ ಪಡೆಯುತ್ತವೆ. 50 ಸಾವಿರ ಚದರ ಮೀಟರಿನಿಂದ ಒಂದೂವರೆ ಲಕ್ಷ ಚದರ ಮೀಟರ್ ಅಳತೆಯ ನಿರ್ಮಾಣಗಳು ಮಾತ್ರವೇ ಪರಿಣಾಮ ನಿರ್ಧಾರಣಾ ಸಮಿತಿಯ ಪರೀಕ್ಷಣೆಗೆ ಒಳಗಾಗುತ್ತವೆ. ಈ ಹಿಂದೆ ಇ.ಐ.ಎ.2006 ಕ್ಕೆ ತಿದ್ದುಪಡಿ ತಂದು ಈ ಚದರಳತೆಯ ಪ್ರಾಜೆಕ್ಟ್‌ಗಳಿಗೆ ಈ ರೀತಿಯ ವಿನಾಯ್ತಿ ನೀಡಿದ್ದನ್ನು ರಾಷ್ಟ್ರೀಯ ಹಸಿರು ನ್ಯಾಯಮಂಡಳಿ(ಎನ್.ಜಿ.ಟಿ.) ರದ್ದು ಮಾಡಿತ್ತು. ಕೇಂದ್ರ ಸರಕಾರ ಇದರ ವಿರುದ್ಧ ಸುಪ್ರಿಂ ಕೋರ್ಟಿಗೆ ಅಪೀಲು ಹೋದಾಗ ಅದು ಎನ್.ಜಿ.ಟಿ. ನಿರ್ಧಾರವನ್ನು ಎತ್ತಿ ಹಿಡಿಯಿತು. ಈ ಕರಡಿನ ಮೂಲಕ ಕೇಂದ್ರ ಸರಕಾರ ಅದನ್ನು ಬದಿಗೆ ತಳ್ಳುವ ಪ್ರಯತ್ನ ಮಾಡಿದೆ. ಇನ್ನೊಂದು ಅತ್ಯಂತ ಆಕ್ಷೇಪಾರ್ಹ ಸಂಗತಿಯೆಂದರೆ ತೈಲ ಮತ್ತು ಅನಿಲ ಶೋಧನೆಯನ್ನೂ ಈ ಬಿ2 ವರ್ಗಕ್ಕೆ ಸೇರಿಸಲಾಗಿದೆ. ಇತ್ತೀಚೆಗೆ ಅಸ್ಸಾಂನ ಬಾಗ್ಜನ್ ತೈಲಬಾವಿಯಲ್ಲಿ ಸ್ಫೋಟದ ಸ್ವಲ್ಪವೇ ಮೊದಲು ದಿಬ್ರು ಸೈಖೋವ್ ರಾಷ್ಟ್ರೀಯ ಉದ್ಯಾನದಲ್ಲಿ ಪರಿಸರ ಮಂಜೂರಾತಿಯನ್ನು ಕೊಡಲಾಗಿತ್ತು ಎಂಬುದನ್ನು ಗಮನಿಸಬಹುದು. ಇಂತಹ ಪರಿಯೋಜನೆಗಳನ್ನು ಸಾರ್ವಜನಿಕ ಸಮಾಲೋಚನೆಯಿಂದ ತಪ್ಪಿಸಲಿಕ್ಕಾಗಿ, ಅವನ್ನು ಬಿ2 ವರ್ಗಕ್ಕೆ ಸೇರಿಸಲಾಗಿದೆ. ಇವು ಕಾರ್ಪೊರೇಟ್ ಹಿತಗಳನ್ನು ಈಡೇರಿಸಲಿಕ್ಕಾಗಿ ಮಾತ್ರ.
- ಪರಿಚ್ಛೇದ 5.7 'ಆಯಕಟ್ಟಿ'ನ ವಿಧ ಎಂಬುದರ ಬಗ್ಗೆ ಹೇಳುತ್ತದೆ. ಇಲ್ಲಿ ಆಯಕಟ್ಟಿನ ಉದ್ದಿಮೆ ಏನು ಎಂಬುದರ ನಿರೂಪಣೆ ಅಸ್ಪಷ್ಟವಾಗಿದೆ. ಇದರಿಂದಾಗಿ ಇದರಲ್ಲಿ ರಕ್ಷಣಾ ಮತ್ತು ಭದ್ರತಾ ಪ್ರಾಜೆಕ್ಟುಗಳಲ್ಲದೆ ಬೇರೆ ಉದ್ದಿಮೆಗಳನ್ನೂ ಸೇರಿಸಬಹುದು. ವಿದ್ಯುತ್ ಉತ್ಪಾದನೆ, ಖಾಸಗಿ ಬಂದರು ನಿರ್ಮಾಣ ಮುಂತಾದವನ್ನೂ ಈ ವರ್ಗಕ್ಕೆ ಸೇರಿಸಿ ಅವುಗಳಿಗೆ ಪರಿಣತರ ಮಂಜೂರಾತಿ, ಸಾರ್ವಜನಿಕ ಸಮಾಲೋಚನೆಯಿಂದ ವಿನಾಯ್ತಿ ಕೊಡಬಹುದು. ಇಲ್ಲಿರುವ ಪ್ರಶ್ನೆ, ರಾಷ್ಟ್ರೀಯ ಭದ್ರತೆಯ ಆವಶ್ಯಕತೆಗಳ ಬಗ್ಗೆ ನಾಗರಿಕರಿಗೂ ಗೊತ್ತಿದೆ, ಆದರೆ ಅಂತಹ ಪ್ರಾಜೆಕ್ಟುಗಳೂ ಪರಿಸರದ, ಕಾಳಜಿ, ಸಾರ್ವಜನಿಕ ಹಿತಾಸಕ್ತಿ ಹೊಂದಿರುವುದು ಒಳ್ಳೆಯದಲ್ಲವೇ?
- ಪರಿಚ್ಛೇದ 26 ಕೂಡ ಮರು ವರ್ಗೀಕರಣದ ಮೂಲಕ ಪರಿಸರ ಮಂಜೂರಾತಿಯಿಂದ ವಿನಾಯ್ತಿ ಕೊಡುತ್ತದೆ. ಇದರಲ್ಲಿ ಕೈಕಸಬುದಾರರು ಮತ್ತು ಇತರ ಸ್ಥಳೀಯ ಸಮುದಾಯಗಳವರು ಮರಳು, ಮಣ್ಣು, ಮರಮಟ್ಟು ಮುಂತಾದವುಗಳನ್ನು ಸ್ವಂತ ಬಳಕೆಗೆ ಮುಕ್ತವಾಗಿ ಪಡೆಯಬಹುದು ಎಂದು ಹೇಳುತ್ತಲೇ, ಹೀಗೆ ಪಡೆಯಬಹುದಾದವರ ಪಟ್ಟಿಯನ್ನು ವಿಸ್ತರಿಸಿ ಅದರಲ್ಲಿ ಪರಿಸರದ ಮೇಲೆ ದುಷ್ಪರಿಣಾಮ ಬೀರುತ್ತವೆ ಎಂದು ಸಾಬೀತಾಗಿರುವ ಇತರ ಕೆಲವು ಉದ್ದಿಮೆಗಳನ್ನೂ ಸೇರಿಸಲಾಗಿದೆ. ಸೌರ ಪಾರ್ಕ್, ಸೌರೋಷ್ಣ ಪ್ರಾಜೆಕ್ಟ್, ಸಣ್ಣ ನೀರಾವರಿ, ಸ್ಫೋಟಕಗಳು ಮುಂತಾದ ರಕ್ಷಣಾ ಉದ್ದಿಮೆಗಳೂ ಈ ಪಟ್ಟಿಯಲ್ಲಿವೆ. ಈ ಮರು ವರ್ಗೀಕರಣದ ಅಗತ್ಯವಿಲ್ಲ, ಮತ್ತು ಕುಂಬಾರರು ಮುಂತಾದ ಸ್ಥಳೀಯ ಸಮುದಾಯಗಳವರನ್ನು ಬಿಟ್ಟು ಬೇರೆ ಯಾರಿಗೂ ಈ ಹೆಸರಲ್ಲಿ ವಿನಾಯ್ತಿಗಳನ್ನು ಕೊಡಬೇಕಾಗಿಲ್ಲ.
- ಸಾರ್ವಜನಿಕ ಸಮಾಲೋಚನೆ ಕುರಿತಾದ ಪರಿಚ್ಛೇದ 14 ವಿವಿಧ ಪ್ರಾಜೆಕ್ಟ್‌ಗಳಿಂದ ಬಾಧಿತರಾಗುವ ಜನಗಳ ಹಕ್ಕುಗಳಿಗೆ ಘೋರ ಅನ್ಯಾಯ ಮಾಡಿದೆ. ಪರಿಚ್ಛೇದ 12ಎ ಯಿಂದ ಜಿ ವರೆಗೆ ಸಾರ್ವಜನಕ ಸಮಾಲೋಚನೆಯಿಂದ ವಿನಾಯ್ತಿ ಕೊಡುವ ಉದ್ದಿಮೆಗಳನ್ನು ಪಟ್ಟಿ ಮಾಡಲಾಗಿದೆ. 50ಶೇ.ದ ವರೆಗೆ ವಿಸ್ತರಣೆ ಮತ್ತು ಆಧುನೀಕರಣಕ್ಕೂ ಸಾರ್ವಜನಕ ಸಮಾಲೋಚನೆಗಳ ಅಗತ್ಯವಿಲ್ಲೆಂದು ಹೇಳಲಾಗಿದೆ. ಪರಿಚ್ಛೇದ 14.8 'ಸ್ಥಳೀಯ ಸನ್ನಿವೇಶ'ದ ಆಧಾರದಲ್ಲಿ ಸಾರ್ವಜನಕ ಸಂವಾದವನ್ನು ರದ್ದು ಮಾಡಬಹುದು ಎನ್ನುತ್ತದೆ. 14.9 ಇ.ಐ.ಎ. ವರದಿಯನ್ನು ಪಡೆಯಲು ಷರತ್ತುಗಳನ್ನು ವಿಧಿಸುತ್ತದೆ. ಸ್ಪಂದನೆಗಳಿಗೆ ಇರುವ 30 ದಿನಗಳ ಅವಧಿಯನ್ನು 60 ದಿನಗಳಿಗೆ ವಿಸ್ತರಿಸಬೇಕಿತ್ತು, ಬದಲಿಗೆ 20 ದಿನಗಳಿಗೆ ಇಳಿಸಲಾಗಿದೆ. ಇವೆಲ್ಲ ಅನ್ಯಾಯಪೂರ್ಣ ಮತ್ತು ಪ್ರಜಾಪ್ರಭುತ್ವ–ವಿರೋಧಿ ಅಂಶಗಳು. ರಕ್ಷಣಾ ಪ್ರಾಜೆಕ್ಟುಗಳೂ ಸೇರಿದಂತೆ ಪ್ರತಿಯೊಂದೂ ಸಾರ್ವಜನಿಕ ಸಮಾಲೋಚನೆಗೆ ಒಳಪಡಬೇಕು, ಮತ್ತು ಈ ಪ್ರಕ್ರಿಯೆಯನ್ನು ಹೆಚ್ಚು ಪಾರದರ್ಶಕಗೊಳಿಸಬೇಕು. ಐದನೇ ಮತ್ತು ಆರನೇ ಶೆಡ್ಯೂಲ್ ಪ್ರದೇಶಗಳಲ್ಲಿನ ಪ್ರಾಜೆಕ್ಟ್‌ಗಳ ಬಗ್ಗೆ ಗ್ರಾಮಸಭಾದೊಂದಿಗೆ ಸಮಾಲೋಚನೆ ನಡೆಸಬೇಕು. ಭೂಸ್ವಾಧೀನ ಕಾಯ್ದೆ 2013ರಲ್ಲಿ ಇರುವಂತೆ ಗ್ರಾಮಸಭಾಗಳೊಂದಿಗೆ ಸಮಾಲೋಚನೆಗಳಿಗೆ ಒಂದು ಪ್ರತ್ಯೇಕ ವಿಧಾನವನ್ನು ಅಧಿಸೂಚನೆ ಒಳಗೊಂಡಿರಬೇಕು. ಆದಿವಾಸಿ ಸಮುದಾಯಗಳನ್ನು ತಟ್ಟುವ ಪ್ರಾಜೆಕ್ಟ್‌ಗಳಲ್ಲಿ ಸಮಾಲೋಚನೆ ಮಾತ್ರವಲ್ಲ, ಸಮ್ಮತಿಯನ್ನು ಪಡೆಯುವ ಪ್ರಶ್ನೆಯೂ ಇದೆ.
- ಕಾನೂನು ಉಲ್ಲಂಘನೆ ಕುರಿತಾದ ಪರಿಚ್ಛೇದ 22.1 ರಿಂದ 15, ಉಲ್ಲಂಘನೆ ನಡೆಸುವ ಮತ್ತು ನೈಸರ್ಗಿಕ ಸಂಪನ್ಮೂಲಗಳನ್ನು ಲೂಟಿ ಹೊಡೆಯುವ ಅಪರಾಧಿಗಳಿಗೆ ನೆರವು ನೀಡುವಲ್ಲಿ ಅಸಾಧಾರಣ ಮಟ್ಟದ ವರೆಗೆ ಹೋಗಿದೆ. ಪರಿಚ್ಛೇದ 23 ಅಧಿಸೂಚನೆಯನ್ನು ಪಾಲಿಸದೆ ಇದ್ದಾಗ ಅವನ್ನು ಮನ್ನಾ ಮಾಡುವುದನ್ನು ಕುರಿತಾದ್ದು. ಉಲ್ಲಂಘನೆಗಳನ್ನು ವರದಿ ಮಾಡುವ ಸ್ಥಳೀಯ ಸಮುದಾಯಗಳ ಹಕ್ಕನ್ನು ಮಾನ್ಯ ಮಾಡಲಾಗಿಲ್ಲ. ಉಲ್ಲಂಘನೆಗಳಿಗೆ ಸ್ವಲ್ಪ ದಂಡ ತೆತ್ತು ಎಲ್ಲವನ್ನೂ ಹಾಗೆಯೇ ಮುಂದುವರೆಸಲು ಅವಕಾಶ ಮಾಡಿಕೊಡಲಾಗಿದೆ. ಈ ರೀತಿ ಉಲ್ಲಂಘನೆಗಳು ನಡೆದ ಮೇಲೆ ಅವನ್ನು ಕಾನೂನುಬದ್ಧಗೊಳಿಸುವ ಕ್ರಮವನ್ನು ಎನ್.ಜಿ.ಟಿ ಮತ್ತು ಸುಪ್ರಿಂ ಕೋರ್ಟ್ ಪರಿಸರ ಕಾಯ್ದೆಯ ಉಲ್ಲಂಘನೆ ಎಂದು ರದ್ದು ಮಾಡಿರುವ ತೀರ್ಪುಗಳಿವೆ. ಈ ಪರಿಚ್ಛೇದಗಳನ್ನು ಸಂಪೂರ್ಣವಾಗಿ ಕೈ ಬಿಡಬೇಕಾಗಿದೆ. ಕ್ರಿಮಿನಲ್ ಉಲ್ಲಂಘನೆಗಳನ್ನು ಹೀಗೆ ಮಾಫಿ ಮಾಡುವುದಾದರೆ ಪರಿಸರ ನಿಯಂತ್ರಣಗಳಾದರೂ ಏಕೆ ಬೇಕು?
- ಈ ಕರಡಿನಲ್ಲಿ ಪ್ರಾಜೆಕ್ಟ್ ಪ್ರಾಯೋಜಕರಿಗೆ ಪ್ರಯೋಜನಕಾರಿಯಾದ, ಆದರೆ ಜನರಿಗೆ ಮತ್ತು ಪರಿಸರಕ್ಕೆ ಅತ್ಯಂತ ಮಾರಕವಾದ ಹಲವಾರು ಪರಿಚ್ಛೇದಗಳಿವೆ. ಪರಿಚ್ಛೇದ 3(16) ಕಾರ್ಪೊರೇಟ್ ಪರಿಸರ ಹೊಣೆಗಾರಿಕೆಯನ್ನು ಬಹಳ ಸಡಿಲವಾಗಿ ನಿರೂಪಿಸುತ್ತದೆ, 19.1 ಪರಿಚ್ಛೇದವಂತೂ ವಿಚಿತ್ರವಾಗಿದೆ, 'ನಿರ್ಮಾಣ ಅಥವ ಸ್ಥಾಪನೆ ಹಂತ' ಎಂಬುದನ್ನು ಈಗಿರುವ ಗರಿಷ್ಟ 30 ವರ್ಷಗಳಿಂದ 50 ವರ್ಷಗಳ ವರೆಗೂ ವಿಸ್ತರಿಸಿದೆ. ಇದು ಖಾಸಗಿ ಗಣಿ ಕಂಪನಗಳಿಗೆ ದೇಶದ ನೈಸರ್ಗಿಕ ಸಂಪತ್ತುಗಳ ಇನಾಮು ಅಲ್ಲದೆ ಬೇರೇನೂ ಅಲ್ಲ. ಪರಿಚ್ಛೇದ 20.5 ಶರತ್ತುಗಳ ಪಾಲನೆಯ ಬಗ್ಗೆ ವಾರ್ಷಿಕ ವರದಿಗಳನ್ನು ಸಲ್ಲಿಸದವರಿಗೆ ಉದಾರವಾಗಿದೆ. ವಾಸ್ತವವಾಗಿ ಶರತ್ತುಗಳ ಪಾಲನೆಯಾಗದಿರುವುದು ಸ್ಥಳೀಯ ಸಮುದಾಯಗಳಿಗೆ ಮತ್ತು ಪರಿಸರಕ್ಕೆ ಹಾನಿಯುಂಟು ಮಾಡುವ ಒಂದು ಪ್ರಮುಖ ಕಾರಣ. ಪರಿಚ್ಛೇದ 24.3 ಲೀಸ್ ಪಡೆದವರು ಜಿಲ್ಲಾ ಖನಿಜ ನಿಧಿಯನ್ನು ಇ.ಐ.ಎ ಜಾರಿಗೆ ಬಳಸಿಕೊಳ್ಳಲು ಅವಕಾಶ ನೀಡುತ್ತದೆ. ಈ ನಿಧಿಯನ್ನು ಸ್ಥಾಪಿಸಿರುವುದು ಖನಿಜಗಳ ಗಣಿಗಾರಿಕೆಗೆ ಅವಕಾಶ ನೀಡಿರುವಲ್ಲಿ ಸ್ಥಳೀಯ ಸಮುದಾಯಗಳ ಅಭಿವೃದ್ಧಿಯಲ್ಲಿ ಅಪಾರ ಕಂದರವನ್ನು ತುಂಬಲಿಕ್ಕಾಗಿ. ಅದನ್ನು ಲೀಸ್‌ದಾರರ ಅಗತ್ಯಗಳಿಗೆ ತಿರುಗಿಸುವುದು ಈ ಪರಿಕಲ್ಪನೆಗೇ ವಿರುದ್ಧವಾದದ್ದು. ಪರಿಚ್ಛೇದ 25 ಪರಿಸರ ಮಂಜೂರಾತಿ ಅಥವ ಪರಿಸರ ಅನುಮತಿಯ ವಿರುದ್ಧ ಎನ್.ಜಿ.ಟಿಗೆ ಅಪೀಲು ಹೋಗಲು ಕೇವಲ 30 ದಿನಗಳನ್ನು ಕೊಟ್ಟಿದೆ. ಇದನ್ನು ಎರಡರಿಂದ ಮೂರು ತಿಂಗಳ ವರೆಗೆ ವಿಸ್ತರಿಸಬೇಕಾಗಿದೆ.

ಒಟ್ಟಿನಲ್ಲಿ, ಈ ಕರಡು ಅಧಿಸೂಚನೆ ಅಭಿವೃದ್ಧಿಯ ಹೆಸರಿನಲ್ಲಿ ಕೇಂದ್ರ ಸರಕಾರದ ಕಾರ್ಪೊರೇಟ್‌ಗಳ ಪರವಾದ ಅಜೆಂಡಾಕ್ಕೆ ಅನುಗುಣವಾಗಿಯೇ ಇದೆ. ಕರಡು ಇ.ಐ.ಎ. ಯ ಕಾಳಜಿ ಜನಗಳ ಹಿತಾಸಕ್ತಿಗಳೂ ಅಲ್ಲ, ಅಥವ ಪರಿಸರದ ರಕ್ಷಣೆಯೂ ಅಲ್ಲ. ನಿಜ ಹೇಳಬೇಕೆಂದರೆ ಅದು ತಪ್ಪು ಕೃತ್ಯಗಳಿಗೆ ಮತ್ತು ಉಲ್ಲಂಘನೆಗಳಿಗೆ ಲೈಸೆನ್ಸ್ ಕೊಡುತ್ತದೆ.

ಈ ಕರಡು ಅಧಿಸೂಚನೆಯನ್ನು ಹಿಂತೆಗೆದುಕೊಳ್ಳಬೇಕು. ಸಂಬಂಧಪಟ್ಟ ಎಲ್ಲರ ಅಭಿಪ್ರಾಯಗಳನ್ನು ತೆಗೆದುಕೊಂಡು ಇದರ ಮರುಕರಡನ್ನು ತಯಾರಿಸಬಹುದು. ಇದು ಪರಿಸರ, ಜನತೆ ಮತ್ತು ದೇಶದ ಹಿತದೃಷ್ಟಿಯಿಂದ ಒಳ್ಳೆಯದು.

ಶತಮಾನೋತ್ಸವ ಲೇಖನ ಮಾಲೆ–36

ಭಾರತೀಯ ಕ್ರಾಂತಿಯ ಹಾದಿಗಾಗಿ ಹುಡುಕಾಟ

ಎಡಸಾಹಸವಾದದ ಖಡ್ಗದೊಂದಿಗೆ ಬಲ ಪರಿಷ್ಕರಣವಾದವನ್ನು ಎದುರಿಸುವುದು ಅಥವ ಪರಿಷ್ಕರಣವಾದದ ಮೂಲಕ ಎಡಸಾಹಸವಾದವನ್ನು ಎದುರಿಸುವುದು ಪಕ್ಷದೊಳಗಿನ ಈ ಎರಡೂ ತಪ್ಪು ಪ್ರವೃತ್ತಿಗಳನ್ನು ತೊಡೆದುಹಾಕುವುದರಲ್ಲಿ ನೆರವಾಗುವುದಿಲ್ಲ ಎಂದು ಪಕ್ಷವು ಬಹಳ ಕಷ್ಟದಿಂದ ಕಂಡುಕೊಂಡಿತು. ಪಕ್ಷದೊಳಗಿನ ಈ ಗಂಭೀರ ರಾಜಕೀಯ–ಸೈದ್ಧಾಂತಿಕ ಅವ್ಯವಸ್ಥೆಯನ್ನು ಪರಿಶೀಲಿಸಲು ಸೋವಿಯೆತ್ ಸಂಘದ ಕಮ್ಯುನಿಸ್ಟ್ ಪಕ್ಷ(ಸಿಪಿಎಸ್‌ಯು) ಮತ್ತು ಕಾಮ್ರೇಡ್ ಸ್ಟಾಲಿನ್ ಅವರ ಸೌಹಾರ್ದ ಸಹಾಯವನ್ನು ಪಡೆಯಲು ತೀರ್ಮಾನಿಸಲಾಯಿತು. ಅವರೊಂದಿಗೆ ಚರ್ಚೆಗಳಲ್ಲಿ, ಭಾರತೀಯ ಕಮ್ಯುನಿಸ್ಟರೇ ದೇಶದೊಳಗಿನ ನಿರ್ದಿಷ್ಟ ಸನ್ನಿವೇಶದ ವಿಶ್ಲೇಷಣೆಯ ಕಾರ್ಯವನ್ನು ಮಾಡಿ ಮಾರ್ಕ್ಸ್‌ವಾದ–ಲೆನಿನ್‌ವಾದವನ್ನು ಅನ್ವಯಿಸಬೇಕು, ಭಾರತೀಯ ಕಮ್ಯುನಿಸ್ಟರಿಗೆ ಆ ವಿಚಾರದಲ್ಲಿ ಸ್ಪಷ್ಟತೆಯನ್ನು ಪಡೆಯಲು ಸಹಾಯ ಮಾಡುವುದಷ್ಟೇ ತಮ್ಮ ಕೆಲಸ ಎಂದು ಸ್ಟಾಲಿನ್ ಮತ್ತು ಸಿ.ಪಿ.ಎಸ್.ಯು. ಸ್ಪಷ್ಟವಾಗಿ ಹೇಳಿದರು.

ಕನ್ನಡಕ್ಕೆ: ಟಿ.ಸುರೇಂದ್ರ ರಾವ್

ಕಮ್ಯುನಿಸ್ಟರ ನಾಯಕತ್ವದಲ್ಲಿ ನಡೆದ ಹಲವಾರು ರೈತ ಹೋರಾಟಗಳು, ಮುಖ್ಯವಾಗಿ ಸುಪ್ರಸಿದ್ಧ ತೆಲಂಗಾಣ ಸಶಸ್ತ್ರ ಜನರ ಹೋರಾಟವು ಭಾರತದ ಕ್ರಾಂತಿಯ ಹಂತದ ಬಗ್ಗೆ ಮತ್ತು ಅಳವಡಿಸಿಕೊಳ್ಳಬೇಕಾದ ಕಾರ್ಯನೀತಿ ಹಾಗೂ ಅನುಸರಿಸಬೇಕಾದ ಕಾರ್ಯತಂತ್ರ ಕುರಿತ ಪ್ರಶ್ನೆಗಳನ್ನು ಮುಂದಕ್ಕೆ ತಂದವು. ಈ ಪ್ರಶ್ನೆಗಳು ಪಕ್ಷದೊಳಗೆ ಹಲವಾರು ಚರ್ಚೆಗಳಿಗೆ ಮತ್ತು ವಾಗ್ವಾದಗಳಿಗೆ ಕಾರಣವಾದವು.

ಪಕ್ಷದ ಎರಡನೇ ಮಹಾಧಿವೇಶನವು ಅಂಗೀಕರಿಸಿದ ರಾಜಕೀಯ ತಂತ್ರಾತ್ಮಕ ಧೋರಣೆಯು ಭಾರತೀಯ ಕಮ್ಯುನಿಸ್ಟರಿಗೆ ಎದುರಾದ ಈ ಪ್ರಶ್ನೆಗಳಿಗೆ ಉತ್ತರವಾಗಿ ನಡೆದ ಕೂಲಂಕಷವಾದ ವಿಶ್ಲೇಷಣೆಗೆ ಒಳಪಟ್ಟಿದೆ. ತೆಲಂಗಾಣ ಸಶಸ್ತ್ರ ಹೋರಾಟಕ್ಕೆ ನಾಯಕತ್ವ ನೀಡಿದ್ದ ಪಕ್ಷದ ಆಂಧ್ರ ಸಮಿತಿಯು ಆ ಪರಿಶೀಲನೆ ಹಾಗೂ ನಂತರದ ವಾಗ್ವಾದಗಳಿಗೆ ನೇತೃತ್ವ ನೀಡಿತು. ಅವರು ಸಲ್ಲಿಸಿದ ಸವಿಸ್ತಾರವಾದ ಟಿಪ್ಪಣಿಯಲ್ಲಿ ರಾಜಕೀಯ ಕಾರ್ಯತಂತ್ರಾತ್ಮಕ ಧೋರಣೆಯಲ್ಲಿನ ನ್ಯೂನತೆಗಳನ್ನು ಗುರುತಿಸಿದ್ದರು ಮತ್ತು ಪಕ್ಷದ ಅಂದಿನ ನಾಯಕತ್ವವು ಅದನ್ನು ಹೇಗೆ ಜಾರಿಮಾಡಿತು ಎಂಬುದನ್ನು ವಿವರಿಸಿದ್ದರು ಕೂಡ. ಎರಡನೇ ಮಹಾಧಿವೇಶನದಲ್ಲಿ ಆಯ್ಕೆಯಾದ ಪೊಲಿಟ್‌ಬ್ಯೂರೋವು ಆಂಧ್ರ ಕಾರ್ಯದರ್ಶಿ ಮಂಡಳಿಯ ಇಡೀ ಪ್ರತಿಪಾದನೆಯನ್ನು ಪೂರಾ ಪರಿಷ್ಕರಣವಾದವೆಂದು ತಿರಸ್ಕರಿಸಿತ್ತು ಮತ್ತು ಅದು ಮಾರ್ಕ್ಸ್‌ವಾದ–ಲೆನಿನ್‌ವಾದದಿಂದ ದೂರ ಸರಿದಿದೆ ಎಂದು ಚಿತ್ರಿಸಿತ್ತು.

1948ರ ಕೊನೆಯಲ್ಲಿ ಪೊಲಿಟ್‌ಬ್ಯುರೊ 'ಜನತಾ ಪ್ರಜಾಪ್ರಭುತ್ವ'(ಪೀಪಲ್ಸ್ ಡೆಮಾಕ್ರಸಿ), 'ಕಾರ್ಷಿಕ ಸಮಸ್ಯೆ'(ಅಗ್ರೇರಿಯನ್ ಕ್ವೆಶ್ಚನ್) ಮತ್ತು 'ಕಾರ್ಯತಂತ್ರಾತ್ಮಕ ಧೋರಣೆ'(ಟ್ಯಾಕ್ಟಿಕಲ್ ಲೈನ್) ಎಂಬ ಮೂರು ದಸ್ತಾವೇಜುಗಳನ್ನು ಹೊರತಂದಿತು. ಪ್ರಾಯೋಗಿಕ ಕೆಲಸದಲ್ಲಿ ತೊಡಗಿಕೊಂಡಾಗ ಎದ್ದ ಮತ್ತು ಪಕ್ಷ ಎದುರಿಸಬೇಕಾಗಿ ಬಂದ ಹಲವಾರು ಸೈದ್ಧಾಂತಿಕ ಪ್ರಶ್ನೆಗಳ ಬಗ್ಗೆ ಎಡ–ಸಾಹಸವಾದಿ ನಿಲುವುಗಳನ್ನು ಅವು ಬೆಳೆಸಿದವು.

ಈ ರೀತಿಯಲ್ಲಿ ಬೆಳೆಸಿದ ಧೋರಣೆಯನ್ನು ಅನುಸರಿಸಿ, ಮಾರ್ಚ್ 9, 1949ರಂದು ಅಖಿಲ ಭಾರತ ರೈಲ್ವೇ ಮುಷ್ಕರ ಮಾಡಬೇಕೆಂದು ಕರೆ ನೀಡಲಾಯಿತು. ಕೇಂದ್ರ ಸರ್ಕಾರವು ಪಕ್ಷದ ಹಾಗೂ ಕಾರ್ಮಿಕ ಸಂಘದ ಮುಖಂಡರ ಮೇಲೆ ದಾಳಿ ದಬ್ಬಾಳಿಕೆಗಳನ್ನು ಶುರುಮಾಡಿತು. ಹಲವಾರು ರಾಜ್ಯಗಳಲ್ಲಿ ಸಾವಿರಾರು ಸಂಗಾತಿಗಳನ್ನು ಬಂಧಿಸಿ ಜೈಲಿಗೆ ಕಳಿಸಲಾಯಿತು. ಜೈಲುಗಳನ್ನು "ವರ್ಗ ಹೋರಾಟದ ಕೋಟೆಗಳನ್ನಾಗಿ" ಪರಿವರ್ತಿಸಬೇಕೆಂದು ಪಕ್ಷದ ಕೇಂದ್ರ ನಾಯಕತ್ವ ಕರೆ ನೀಡಿತು. ಪಕ್ಷಕ್ಕಾಗಿನ ನಿಷ್ಠೆ ಮತ್ತು ಕ್ರಾಂತಿಯ ಕಾರಣಕ್ಕಾಗಿ ಅನೇಕ ಸಂಗಾತಿಗಳು ತಮ್ಮ ಪ್ರಾಣ ತ್ಯಾಗ ಮಾಡಿದರು.

ವಸ್ತುನಿಷ್ಠ ಪರಿಸ್ಥಿತಿಯನ್ನು ಮತ್ತು ಕಾರ್ಮಿಕರ ಸಿದ್ಧತೆಯನ್ನು ಗಣನೆಗೆ ತಂದುಕೊಳ್ಳದೇ ನೀಡಿದ ಈ ಮುಷ್ಕರ ಹಾಗೂ 'ಜೈಲು ಹೋರಾಟಗಳ' ಕರೆಗಳು ಅಂದಿನ ಪೋಲಿಟ್ ಬ್ಯೂರೋವು ಅನುಸರಿಸಿದ ಎಡ–ಸಾಹಸವಾದಿ ನಿಲುವನ್ನು ತೋರಿಸುತ್ತವೆ. ಸ್ವಯಂ–ವಿಮರ್ಶಾತ್ಮಕವಾದ ವಿಶ್ಲೇಷಣೆ ಮಾಡುವ ಮತ್ತು ಮುಷ್ಕರದ ಕರೆಗೆ ದೊರೆತ ನಿರುತ್ಸಾಹದ ಪ್ರತಿಕ್ರಿಯೆಗೆ ಕಾರಣವಾದ ಅಂಶಗಳನ್ನು ಒಪ್ಪಿಕೊಳ್ಳುವ ಬದಲಾಗಿ, ನಾಯಕತ್ವವು ತಮ್ಮನ್ನು ಪ್ರಶ್ನಿಸಿದವರೆಲ್ಲಾ ಹೇಡಿಗಳು, ನಂಬಿಕೆದ್ರೋಹಿಗಳು ಮತ್ತು ಪರಿಷ್ಕರಣವಾದಿಗಳು ಎಂದು ಹಣೆಪಟ್ಟಿ ಕಟ್ಟಿ ದೂಷಿಸಿತು. ಇದರ ಆಧಾರದಲ್ಲಿ ಅನೇಕ ಸಂಗಾತಿಗಳನ್ನು ತೆಗೆದುಹಾಕಲಾಯಿತು ಮತ್ತು ರಾಜ್ಯ ಸಮಿತಿಗಳನ್ನು ಪುನರ್‌ಸಂಘಟಿಸಲಾಯಿತು. ಪೋಲಿಟ್‌ಬ್ಯೂರೋದ ನಿಲುವನ್ನು ಒಪ್ಪದ ಪಕ್ಷದ ಪ್ರಮುಖ ಸಂಗಾತಿಗಳು ತಮ್ಮ 'ಸ್ವಯಂವಿಮರ್ಶೆ'ಯನ್ನು ಲಿಖಿತವಾಗಿ ನೀಡಬೇಕೆಂದು ನಿರ್ದೇಶನ ನೀಡಲಾಯಿತು ಮತ್ತು ಬಹುತೇಕರು ಈ ನಿರ್ದೇಶನಕ್ಕೆ ಶರಣಾದರು. ನಾಯಕತ್ವವು ಅನುಸರಿಸಿದ ಈ ನೀತಿಗಳ ಪರಿಣಾಮದಿಂದಾಗಿ, ಪಕ್ಷದ ಸದಸ್ಯತ್ವವು 80,000 ದಿಂದ 20,000 ಕ್ಕೆ ಇಳಿಯಿತು. ಪಕ್ಷದ ಒಟ್ಟಾರೆ ವಾತಾವರಣವು ಕಲುಷಿತಗೊಂಡಿತು ಮತ್ತು ಹತಾಶ ಮನೋಭಾವ ಬೆಳೆಯಿತು, ಪಕ್ಷದ ನೇತೃತ್ವದಲ್ಲಿ ನಡೆದ ಕಾರ್ಷಿಕ ಹೋರಾಟಗಳು ಮಾತ್ರವೇ ಪಕ್ಷವನ್ನು ಸಂರಕ್ಷಿಸಿದವು.

ಈ ಹಿನ್ನೆಲೆಯಲ್ಲಿ, 'ಜನತಾ ಪ್ರಜಾಪ್ರಭುತ್ವಕ್ಕಾಗಿ, ಶಾಶ್ವತವಾದ ಶಾಂತಿಗಾಗಿ' ಎಂಬ ಸಂಪಾದಕೀಯವು ಕಮ್ಯುನಿಸ್ಟ್ ಇನ್‌ಫರ್ಮೇಶನ್ ಬ್ಯೂರೋ (ಕಾಮಿನ್‌ಫಾರಂ)ದ ಪತ್ರಿಕೆಯಲ್ಲಿ ಕಾಣಿಸಿಕೊಂಡಿತು. ಭಾರತೀಯ ಕಮ್ಯುನಿಸ್ಟ್ ಪಕ್ಷದ ಉನ್ನತ ನಾಯಕತ್ವವು ಅನುಸರಿಸುತ್ತಿದ್ದ ರಾಜಕೀಯ ಧೋರಣೆಯನ್ನು ಆ ಸಂಪಾದಕೀಯದಲ್ಲಿ ತೀಕ್ಷ್ಣವಾಗಿ ಟೀಕೆ ಮಾಡಲಾಗಿತ್ತು ಮತ್ತು ಪಕ್ಷದೊಳಗಡೆ ದೊಡ್ಡ ಆಂತರಿಕ ವಾಗ್ವಾದಗಳ ಕಿಡಿಯನ್ನು ಹಚ್ಚಿತು. ಈ ಸಂಪಾದಕೀಯದ ಪ್ರಕಟಣೆಯನ್ನು ಒಂದು ಅವಕಾಶವಾಗಿ ಬಳಸಿಕೊಂಡ ಪಕ್ಷದ ಆಂಧ್ರ ಸಮಿತಿಯು ಈ ಹಿಂದೆಯೇ ಪೊಲಿಟ್‌ಬ್ಯುರೊದ ಎಡಸಾಹಸವಾದಿ ಧೋರಣೆಯ ವಿರುದ್ಧ ಶುರುಮಾಡಿದ್ದ ಪಕ್ಷದ ಆಂತರಿಕ ಹೋರಾಟವನ್ನು ಇನ್ನೂ ತೀಕ್ಷ್ಣಗೊಳಿಸಿತು.

ಪಕ್ಷದ ಕೇಂದ್ರ ಸಮಿತಿಯ ಉನ್ನತ ಸಮಿತಿಯಾಗಿ ಪೊಲಿಟ್‌ಬ್ಯೂರೋದ ಕಾರ್ಯನಿರ್ವಹಣೆಯನ್ನು ತೀವ್ರವಾಗಿ ಟೀಕಿಸಲಾಯಿತು. ಪಂಥವಾದಿ ರಾಜಕೀಯ ಧೋರಣೆಯನ್ನು ಆರಂಭಿಸಿ ಬೆಳಸಿದ ಪ್ರಧಾನ ಕಾರ್ಯದರ್ಶಿಯ ಪಾತ್ರ, ತಪ್ಪು ಸಂಘಟನಾ ತತ್ವಗಳ ಅನುಸರಣೆ, ಯಾವುದೇ ಕಡೆಯಿಂದ ಬಂದ ವಿಮರ್ಶೆಗಳ ದಮನ, ಸಾಮೂಹಿಕ ಕಾರ್ಯನಿರ್ವಹಣೆ ಮತ್ತು ಕೇಂದ್ರ ಸಮಿತಿಯ ಸಭೆಯನ್ನು ಕರೆಯುವಲ್ಲಿನ ವೈಫಲ್ಯಗಳನ್ನು ಪಕ್ಷವನ್ನು ಅಸ್ತವ್ಯಸ್ತಗೊಳಿಸುವ ಹಂತಕ್ಕೆ ತಂದು ನಿಲ್ಲಿಸಿದ ಪ್ರಮುಖ ಅಂಶಗಳು ಎಂದು ಗುರುತಿಸಲಾಯಿತು.

ಕಾಮಿನ್‌ಫಾರಂನ ಸಂಪಾದಕೀಯದ ಹಿನ್ನೆಲೆಯಲ್ಲಿ, ಕೇಂದ್ರ ಸಮಿತಿಯು 1950ರ ಮಧ್ಯಭಾಗದಲ್ಲಿ ಸಭೆ ಸೇರಿತು ಮತ್ತು ಗಂಭೀರ ರಾಜಕೀಯ ಚರ್ಚೆಗಳು, ವಿಮರ್ಶೆಗಳು ಹಾಗೂ ಸ್ವಯಂವಿಮರ್ಶೆಗಳ ನಂತರ ಕೆಲವು ರಾಜಕೀಯ ಮತ್ತು ಸಂಘಟನಾ ತೀರ್ಮಾನಗಳಿಗೆ ಬರಲಾಯಿತು.



ಪಿ.ಸುಂದರಯ್ಯ, ಎಂ.ಚಂದ್ರಶೇಖರ ರಾವ್, ಸಿ.ರಾಜೇಶ್ವರ ರಾವ್, ವಾಸುದೇವ ರಾವ್ ಮತ್ತು ಎಂ.ಬಸವಪುನ್ನಯ್ಯ–ಭೂಗತವಾಸದಿಂದ ಹೊರಬಂದಾಗ– ವಿಜಯವಾಡ, 1951

ಎರಡನೇ ಮಹಾಧಿವೇಶನದಲ್ಲಿ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದ ಬಿ.ಟಿ.ರಣದೀವೆಯವರ ಸ್ಥಾನದಲ್ಲಿ ಸಿ.ರಾಜೇಶ್ವರ ರಾವ್ ಅವರನ್ನು ತರಲಾಯಿತು. ಒಂದು ನೂತನ ಮೂರು ಸದಸ್ಯರುಗಳ ಪೋಲಿಟ್‌ಬ್ಯೂರೋ ಮತ್ತು 11 ಸದಸ್ಯರ ಕೇಂದ್ರ ಸಮಿತಿಯನ್ನು ಆಯ್ಕೆ ಮಾಡಲಾಯಿತು. ರಾಜಕೀಯ ಹಾಗೂ ಸಂಘಟನಾ ತೀರ್ಮಾನಗಳನ್ನು ಅಂತಿಮಗೊಳಿಸಲು ನೂತನ ಕೇಂದ್ರ ಸಮಿತಿಯ ಪ್ಲೀನಂನ್ನು, ಪ್ರಾಂತೀಯ ಸಮಿತಿಗಳ ಪ್ರತಿನಿಧಿಗಳನ್ನೂ ಒಳಗೊಂಡಂತೆ ಆರು ತಿಂಗಳೊಳಗಾಗಿ ನಡೆಸಬೇಕೆಂದು ನಿರ್ಧರಿಸಲಾಯಿತು.

ರಾಜಕೀಯ ರಂಗದಲ್ಲಿ, ಆಂಧ್ರ ಸಮಿತಿಯು ಸಲ್ಲಿಸಿದ್ದ 'ಭಾರತೀಯ ಕಮ್ಯುನಿಸ್ಟ್ ಪಕ್ಷದ ಒಳಗಡೆಯ ಎಡ ಮಾರ್ಗಚ್ಯುತಿ' ಎಂಬ ಟಿಪ್ಪಣಿಯನ್ನು ತಿದ್ದುಪಡಿಗಳೊಂದಿಗೆ ಕೇಂದ್ರ ಸಮಿತಿಯು ಅಂಗೀಕರಿಸಿತ್ತು. ಪೊಲಿಟ್‌ಬ್ಯುರೊ ಕಳಿಸಿದ್ದ ಮೂರು ದಸ್ತಾವೇಜುಗಳನ್ನು('ಜನತಾ ಪ್ರಜಾಪ್ರಭುತ್ವ', 'ಕಾರ್ಷಿಕ ಪ್ರಶ್ನೆ' ಮತ್ತು 'ಕಾರ್ಯತಂತ್ರಾತ್ಮಕ ಧೋರಣೆ') ಹಿಂತೆಗೆದುಕೊಳ್ಳಲಾಯಿತು ಮತ್ತು ಇತರ ದಸ್ತಾವೇಜುಗಳನ್ನು ಪರಾಮರ್ಶಿಸಲು ನಿರ್ಧರಿಸಲಾಯಿತು. ಪಕ್ಷದ ಆಂತರಿಕ ಚರ್ಚೆಗಾಗಿ ಮತ್ತು ನಿಗದಿಯಾಗಿದ್ದ ಪ್ಲೀನಂನಲ್ಲಿ ಅಂಗೀಕರಿಸಲು, ನಾಲ್ಕು ಇತರ ದಸ್ತಾವೇಜುಗಳನ್ನು ಅದು ಅಂಗೀಕರಿಸಿತ್ತು – ಈ ಹಿಂದೆ ಚರ್ಚೆಗೆ ಬಿಟ್ಟಿದ್ದ ಮೂರು ದಸ್ತಾವೇಜುಗಳ ವಿಶ್ಲೇಷಣೆ, ರಾಜಕೀಯ ನಿರ್ಣಯ, ಮಾವೋ ಕುರಿತ ನಿರ್ಣಯ ಮತ್ತು ಪೋಲಿಟ್ ಬ್ಯೂರೋದ ಎಡ–ಪಂಥವಾದಿ ಚಟುವಟಿಕೆಗಳ ಕುರಿತು ಸಂಘಟನಾ ವರದಿ.

ಭಾರತೀಯ ಕ್ರಾಂತಿಯ ಹಾದಿಯನ್ನು ತೀರ್ಮಾನಿಸುವ ಮುಖ್ಯ ಬದಲಾವಣೆ ಬಂದಿತ್ತು. ಭಾರತೀಯ ಹಾದಿಯು ರಾಜಕೀಯ ಸಾರ್ವತ್ರಿಕ ಮುಷ್ಕರ ಮತ್ತು ನಗರಗಳಲ್ಲಿನ ಕಾರ್ಮಿಕರ ಸಶಸ್ತ್ರ ಬಂಡಾಯದ ಮೂಲಕ ಅಧಿಕಾರ ಹಿಡಿಯುವ ಹಾದಿ ಎಂದು ಪಕ್ಷದ ಎರಡನೇ ಮಹಾಧಿವೇಶನದಲ್ಲಿ ಆಯ್ಕೆಯಾಗಿದ್ದ ಪೊಲಿಟ್‌ಬ್ಯುರೊ ಪ್ರತಿಪಾದಿಸಿತ್ತು. ನೂತನವಾಗಿ ಆಯ್ಕೆಯಾದ ನಾಯಕತ್ವವು, ಆಂಧ್ರ ಸಮಿತಿಯು ಸೂಚಿಸಿದ್ದ ಹಾದಿಯನ್ನು ಒಪ್ಪಿಕೊಂಡಿತು, ಅದೆಂದರೆ ಪಕ್ಷಪಾತಿ ಸಮರದ ಮೂಲಕ ವಿಮೋಚಿತ ಪ್ರದೇಶಗಳನ್ನು ಸ್ಥಾಪಿಸುವುದು ಮತ್ತು ಅಂತಿಮವಾಗಿ ನಗರಗಳ ವಿಮೋಚನೆ. ಒಂದೇ ಹಂತದ ಕ್ರಾಂತಿಯ ಪ್ರತಿಪಾದನೆಯನ್ನು, ಅಂದರೆ ಭಾರತೀಯ ಕ್ರಾಂತಿಯಲ್ಲಿ ಪ್ರಜಾಸತ್ತಾತ್ಮಕ ಮತ್ತು ಸಮಾಜವಾದಿ ಹಂತಗಳನ್ನು ಹೆಣೆಯುವ ಸಿದ್ಧಾಂತವನ್ನು ಅದು ತಿರಸ್ಕರಿಸಿತು. ಆ ಪ್ರಕಾರವಾಗಿ, ಕ್ರಾಂತಿಕಾರಿ ಹೋರಾಟದ ಸಂದರ್ಭದಲ್ಲಿನ ವರ್ಗ ಮೈತ್ರಿಗಳ ಕಾರ್ಯನೀತಿಯನ್ನೂ ಮರುರೂಪಿಸಲಾಯಿತು. ಶ್ರೀಮಂತ ರೈತರನ್ನೂ ಒಳಗೊಂಡಂತೆ ಇಡೀ ಬಂಡವಾಳಶಾಹಿ ವರ್ಗವನ್ನು ಜನತಾ ಪ್ರಜಾಪ್ರಭುತ್ವ ಕ್ರಾಂತಿಯ ವೈರಿಗಳೆಂದು ನಿರೂಪಿಸಬಾರದೆಂದು ಮತ್ತು ಅವರೊಳಗಿನ ಕೆಲವು ವಿಭಾಗಗಳನ್ನು ಗೆದ್ದುಕೊಳ್ಳಲು ಪ್ರಯತ್ನಗಳನ್ನು ಮಾಡುವುದೆಂದು ಒಪ್ಪಲಾಯಿತು.

ಅಂಗೀಕರಿಸಲಾದ ನೂತನ ರಾಜಕೀಯ ಧೋರಣೆ ಕೂಡ ಭಾರತದ ಸನ್ನಿವೇಶವನ್ನು ಅಂದಾಜುಮಾಡುವಲ್ಲಿ ಮತ್ತು ಆ ಕಾರಣ, ಅನುಸರಿಸಬೇಕಾದ ಕ್ರಾಂತಿಕಾರಿ ಕಾರ್ಯನೀತಿಯಲ್ಲಿ ತಪ್ಪೆಸಗಿತು. ಭಾರತದ ಸ್ವಾತಂತ್ರ್ಯ, ಸಾಮ್ರಾಜ್ಯಶಾಹಿಯ ಪಾತ್ರ ಮತ್ತು ಭಾರತೀಯ ಆಳುವ ವರ್ಗಗಳ ಮೇಲೆ ಅವರ ಪ್ರಭಾವಗಳನ್ನು ನಿರೂಪಿಸುವಲ್ಲಿ ಈ ತಪ್ಪು ಅಂದಾಜು ಅಲ್ಲಿ ಪ್ರತಿಫಲನಗೊಂಡಿತು. ಪರಿಣಾಮವಾಗಿ, ಅನುಸರಿಸಬೇಕಾದ ಕಾರ್ಯನೀತಿ ಮತ್ತು ಅನುಸರಿಸಬೇಕಾದ ಕ್ರಾಂತಿಯ ಹಾದಿ ಕೂಡ ಕೆಲವು ತಪ್ಪುಗಳಿಂದ ಕೂಡಿತ್ತು. ತೆಲಂಗಾಣ ಮತ್ತು ದೇಶದ ಇತರ ಪ್ರದೇಶಗಳಲ್ಲಿನ ನಂತರದ ಬೆಳವಣಿಗೆಗಳು ಈ ಇತಿಮಿತಿಗಳನ್ನು ಮುನ್ನೆಲೆಗೆ ತಂದವು. ಮತ್ತೊಮ್ಮೆ, ತೀಕ್ಷ್ಣವಾದ ಪಕ್ಷದ ಆಂತರಿಕ ಚರ್ಚೆ ಪ್ರಾರಂಭವಾಯಿತು.

ಪಕ್ಷದ ಎರಡನೇ ಮಹಾಧಿವೇಶನಕ್ಕಿಂತ ಮುಂಚೆ ಪ್ರಬಲ ಪ್ರವೃತ್ತಿಯಾಗಿದ್ದ ಬಲ ಪರಿಷ್ಕರಣವಾದವು, ಮತ್ತೆ ತನ್ನ ತಲೆ ಎತ್ತಲು ಈ ಅವಕಾಶವನ್ನು ಬಳಸಿಕೊಂಡಿತು. ಪಕ್ಷದ ಬೊಂಬಾಯಿಯ ಪ್ರಧಾನ ಕಛೇರಿ ಈ ಹೊಸ ವಿರೋಧದ ಕೇಂದ್ರವಾಗಿ ಪರಿಣಮಿಸಿತು; ಎಸ್.ಎ.ಡಾಂಗೆ, ಅಜಯ್

ಪುಟ 14 ನೋಡಿ



ಅಜಯ್ ಕುಮಾರ್ ಫೋಟೋ

"ಉದ್ದೇಶಪೂರ್ವಕ ಸುಸ್ತಿದಾರ"ರಿಂದ ಸಾಲ ವಸೂಲಿಗೆ ಸುಗ್ರೀವಾಜ್ಞೆ ಏಕಿಲ್ಲ?



ವ್ಯಂಗ್ಯಚಿತ್ರಕೃಪೆ:
ಪಿ.ಮಹಮ್ಮದ್, ವಾರ್ತಾಭಾರತಿ

ಬ್ಯಾಂಕ್ ರಾಷ್ಟ್ರೀಕರಣದ 51ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಅಖಿಲ ಭಾರತ ಬ್ಯಾಂಕ್ ನೌಕರರ ಸಂಘ "ಉದ್ದೇಶಪೂರ್ವಕ ಸುಸ್ತಿದಾರರು" ಎಂದು ಬ್ಯಾಂಕುಗಳು ಪಟ್ಟಿ ಮಾಡಿರುವ 2426 ಖಾತೆಗಳ ಪಟ್ಟಿಯನ್ನು ಬಿಡುಗಡೆ ಮಾಡಿದೆ. ಇವರುಗಳ ಒಟ್ಟು ಬಾಕಿ ರೂ.1,47,350 ಕೋಟಿ. ಇದು ಸಪ್ಟಂಬರ್ 30, 2019ರ ವರೆಗೆ, ಅದೂ ಸಾರ್ವಜನಿಕ ವಲಯದ ಬ್ಯಾಂಕುಗಳ ಸುಸ್ತಿದಾರರದ್ದು ಮಾತ್ರ. ವಿಶೇಷವೆಂದರೆ ಈ ಪಟ್ಟಿಯಲ್ಲಿರುವ ಬಹುಪಾಲು ಕಂಪನಿಗಳು ಪ್ರತಿಷ್ಠಿತ ಕಂಪನಿಗಳು ಮತ್ತು ಈಗಲೂ ವ್ಯವಹಾರ ನಡೆಸುತ್ತಿರುವ ಸಂಸ್ಥೆಗಳು. ಇವುಗಳಿಗೆ ಸಾಲ ಮರುಪಾವತಿ ಮಾಡುವ ಸಾಮರ್ಥ್ಯವಿದೆ, ಸಾಕಷ್ಟು ಆಸ್ತಿಗಳೂ ಇವೆ. ಹಾಗಿರುವಾಗ ಅವರಿಂದಾಗಿ ಬ್ಯಾಂಕುಗಳೇಕೆ ನಷ್ಟ ಅನುಭವಿಸಬೇಕು ಎಂದು ಈ ಪಟ್ಟಿಯನ್ನು ಬಿಡುಗಡೆ ಮಾಡುತ್ತ ಸಂಘದ ಪ್ರಧಾನ ಕಾರ್ಯದರ್ಶಿ ವೆಂಕಟಾಚಲಂ ಪ್ರಶ್ನಿಸಿದ್ದಾರೆ.

ಹೌದು, ಬಡರೈತರಿಂದ ವಸೂಲಿ ಮಾಡುವಂತೆ ಬ್ಯಾಂಕುಗಳು ಈ ಬೃಹತ್ ಸಾಲ ಬಾಕಿಗಳ ವಸೂಲಿಗೆ ಈ ಪ್ರತಿಷ್ಠಿತರ ಆಸ್ತಿಗಳನ್ನು' ಮುಟ್ಟುಗೋಲು ಹಾಕಲು ಹಿಂಜರಿಯುತ್ತಿವೆ ಏಕೆ?

ಸರಕಾರ ಇಂತಹ ಸಾಲಗಳನ್ನು 'ರೈಟ್ ಆಫ್' ಮಾಡಲು ಹೇಳುತ್ತದೆ, ಇಲ್ಲವೇ ಎನ್‌ಸಿಎಲ್‌ಟಿ(ರಾಷ್ಟ್ರೀಯ ಕಂಪನಿ ಕಾಯ್ದೆ ನ್ಯಾಯಮಂಡಳಿ)ಗೆ ಹಾಕುತ್ತದೆ. ಅಲ್ಲಿ ಕಂಪನಿಗಳಿಗೆ ಭಾಗಶಃ ಸಾಲಬಾಕಿ ತೆತ್ತು ಪಾರಾಗಲು ಅವಕಾಶ ಸಿಗುತ್ತದೆ. ಉಳಿದ ಭಾಗ ಬ್ಯಾಂಕುಗಳಿಗೆ ಪಂಗನಾಮ. ಆದ್ದರಿಂದ ಈ ಕೇಸುಗಳನ್ನು ಎನ್‌ಸಿಎಲ್‌ಟಿಗೆ ವಹಿಸಬಾರದು, ಕೇಂದ್ರ ಸರಕಾರ ಒಂದು ವಿಶೇಷ ಸುಗ್ರೀವಾಜ್ಞೆ ತಂದು ಅವರ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡು ಸಾಲ ಬಾಕಿ ತೀರಿಸುವಂತೆ ಮಾಡಬೇಕು ಎಂದು ವೆಂಕಟಾಚಲಂ ಹೇಳುತ್ತಾರೆ. "ಬೇಕೆಂದೇ ಸಾಲ ಮರುಪಾವತಿ ಮಾಡದವರು ಮತ್ತು ನೈಜ ಕಾರಣಗಳಿಂದಾಗಿ ಮರುಪಾವತಿ ಮಾಡಲಾಗದವರನ್ನು ಸರಕಾರ ಭಿನ್ನವಾಗಿ ಕಾಣಬೇಕು. ಈ ಉದ್ದೇಶಪೂರ್ವಕ ಸುಸ್ತಿದಾರ ಕಂಪನಿಗಳು ವ್ಯವಹಾರ ಮಾಡುತ್ತಿವೆ, ಅವರ ಬಳಿ ಹಣ ಇದೆ, ಆಸ್ತಿಗಳಿವೆ, ಮರುಪಾವತಿ ಮಾಡಲು ಸಾಧ್ಯವಿದೆ. ಆದ್ದರಿಂದ ಅವರಿಗೆ ಎನ್‌ಸಿಎಲ್‌ಟಿ ಅಥವ ಐಬಿಸಿ(ದಿವಾಳಿ ಸಂಹಿತೆ)ಯ ರಿಯಾಯ್ತಿಗಳನ್ನು ಕೊಡಬಾರದು" ಎಂದಿರುವ ಅವರು ಈ ಉದ್ದೇಶಪೂರ್ವಕವಾಗಿ ಕೆಡಿಸಿರುವ ಸಾಲಗಳನ್ನು ವಸೂಲಿ ಮಾಡಿದರೆ ಬ್ಯಾಂಕುಗಳು ರಾಷ್ಟ್ರೀಯ ಅಭಿವೃದ್ಧಿಯಲ್ಲಿ ಮತ್ತು 'ಆತ್ಮನಿರ್ಭರ್' ಕಾರ್ಯಕ್ರಮದಲ್ಲಿ ದೊಡ್ಡ ಪಾತ್ರವನ್ನು ವಹಿಸಲು ಸಾಧ್ಯವಿದೆ, ಅವರಿಗೆ ರಿಯಾಯ್ತಿಗಳನ್ನು ಕೊಟ್ಟು ಸಾರ್ವಜನಿಕರ ಹಣಕ್ಕೆ ಬಡ್ಡಿ ದರಗಳನ್ನು ಇಳಿಸುವ ಪ್ರವೃತ್ತಿಯನ್ನು ಸರಕಾರ ನಿಲ್ಲಿಸಬೇಕು ಎಂದು ಆಗ್ರಹಿಸಿದ್ದಾರೆ.

ಆದರೆ ಕೊವಿಡ್ ಮಹಾಮಾರಿಯ ಮರೆಯಲ್ಲಿ ಸುಗ್ರೀವಾಜ್ಞೆಗಳನ್ನು ಯಾವುದೇ ಮುಲಾಜಿಲ್ಲದೆ ಹೊರಡಿಸುತ್ತಿರುವ ಸರಕಾರ ಈ ಸುಗ್ರೀವಾಜ್ಞೆಯ ಬಗ್ಗೆ ಯೋಚನೆಯನ್ನೂ ಮಾಡಲಾರದು ಎಂದು ಸ್ವಯಂವೇದ್ಯ. ಈ ಬ್ಯಾಂಕುಗಳ ಸಾಮಾನ್ಯ ಠೇವಣಿದಾರರು ಈ ಕುರಿತು ಯಾವ ನಿರೀಕ್ಷೆಯನ್ನೂ ಇಟ್ಟುಕೊಳ್ಳುವಂತಿಲ್ಲ.

ಒಂದು ವಾರದ ಹಿಂದೆಯಷ್ಟೇ, ಅಂದರೆ ಜುಲೈ14ರಂದು ಟೈಂಸ್ ಆಫ್ ಇಂಡಿಯಾದಲ್ಲಿ ಪ್ರಕಟವಾಗಿರುವ ಅವರ ಲೇಖನದಲ್ಲಿ ದೇಶದ ಹಣಕಾಸು ಮಂತ್ರಿಗಳು ಕಳೆದ ಆರು ವರ್ಷಗಳಲ್ಲಿ "ಪ್ರಧಾನ ಮಂತ್ರಿ ಮೋದಿಯವರ ಧೀರ ನಿರ್ಧಾರಗಳನ್ನು" ಹಾಡಿ ಹೊಗಳಿದ್ದಾರೆ. ಉದ್ದೇಶಪೂರ್ವಕವಾಗಿ ಸಾಲ ಮರುಪಾವತಿ ಮಾಡದ ಪ್ರತಿಷ್ಠಿತರಿಂದ ಸಾಲ ವಸೂಲಿ ಆ "ಧೀರ" ನಿರ್ಧಾರಗಳ ಪಟ್ಟಿಯಲ್ಲಿ ಇಲ್ಲ.

ಬದಲಿಗೆ, ಎನ್‌ಸಿಎಲ್‌ಟಿ ಮತ್ತು ಐಬಿಸಿ ತಂದುದೇ ಒಂದು ಧೀರ ಕ್ರಮ ಎಂಬಂತೆ ಚಿತ್ರಿಸಿದ್ದಾರೆ. ಆದರೆ ಮೇ 2020ರಲ್ಲಿ ಅವರೇ ಒಪ್ಪಿಕೊಂಡಂತೆ, ಒಟ್ಟು 221 'ಕೆಟ್ಟ ಸಾಲ'ಗಳ ವಿಲೇವಾರಿಯಾಗಿದೆ, ಇವುಗಳಲ್ಲಿ ಒಟ್ಟು ಕೆಟ್ಟಸಾಲದ ಮೊತ್ತ 4.13 ಲಕ್ಷ ಕೋಟಿ ರೂ. ಆದರೆ ವಸೂಲಾದ್ದು ರೂ.1.84 ಲಕ್ಷ ಕೋಟಿ ರೂ. ಮಾತ್ರ. ಉಳಿದ ರೂ2.29 ಲಕ್ಷ ಕೋಟಿಯ ಪಾಡೇನು? ಅವನ್ನು ಮನ್ನಾ ಎಂದೇ ಪರಿಗಣಿಸಬೇಕಲ್ಲವೇ? ಇದೆಂತಾ ಸಾಧನೆ!

ಇಷ್ಟೇ ಅಲ್ಲ, ಒಟ್ಟು ರೂ.5.01ಲಕ್ಷ ಕೋಟಿ ಮೊತ್ತದ 13,566 ಕೆಟ್ಟ ಸಾಲಗಳ ಪ್ರಕರಣಗಳನ್ನು ಈ ಐಬಿಸಿಯಿಂದ ಹಿಂತೆಗೆದುಕೊಳ್ಳಲಾಗಿದೆ ಎಂದು ಸರಕಾರವೇ ಹೇಳಿದೆ. ಇವುಗಳ ವಸೂಲಾತಿಗೆ ಪರ್ಯಾಯ ಕ್ರಮಗಳೇನು ಎಂದೇನೂ ಹೇಳಿಲ್ಲ. ಇದೀಗ ಎನ್‌ಸಿಎಲ್‌ಟಿ ಮತ್ತು ಐಬಿಸಿ ತಂದ 'ಧೀರ' ನಿರ್ಧಾರದ ಸಾಧನೆ!

* ಅವರು, 2014ರಲ್ಲಿ ಅಧಿಕಾರಕ್ಕೆ ಬಂದ ಒಂದೇ ವರ್ಷದೊಳಗೆ, ಅಂದರೆ ಜನವರಿ 2–3, 2015ರಲ್ಲಿ ನಡೆಸಿದ 'ಜ್ಞಾನ ಸಂಗಮ' ಇಂತಹ ಧೀರ ನಿರ್ಧಾರಗಳ ಪಟ್ಟಿಯಲ್ಲಿ ಮತ್ತೊಂದು. ವಾಸ್ತವವಾಗಿ ಅದು ಸಾರ್ವಜನಿಕ ವಲಯದ ಬ್ಯಾಂಕುಗಳ ಮುಖ್ಯಸ್ಥರನ್ನೇ ಬ್ಯಾಂಕುಗಳ ಖಾಸಗೀಕರಣದ ಮಾರ್ಗನಕಾಶೆಯನ್ನು ಸಿದ್ಧಪಡಿಸುವುದಕ್ಕಾಗಿಯೇ, ಕರೆದ 'ಶೃಂಗ ಸಭೆ'. ಇನ್ನೂ ವಿಶೇಷವೆಂದರೆ, ಅದರಲ್ಲಿ ಮಂಡಿಸಿದ ಎಲ್ಲ ಪ್ರಬಂಧಗಳು ಹಣಕಾಸು ಮಂತ್ರಾಲಯ ಬಹುರಾಷ್ಟ್ರೀಯ ಹಣಕಾಸು ಸಲಹಾಸಂಸ್ಥೆ ಮೆಕಿನ್ಸೆ 'ಸಹಯೋಗ'ದೊಂದಿಗೆ ತಯಾರಿಸಿದವುಗಳು!

ಸಾರ್ವಜನಿಕ ವಲಯದ ಬ್ಯಾಂಕುಗಳ ಮುಖ್ಯಸ್ಥರೇ ಖಾಸಗೀಕರಣದ ಕಸರತ್ತಿನಲ್ಲಿ ಭಾಗವಹಿಸುವಂತೆ ಮಾಡಿದ್ದರೂ, ಬ್ಯಾಂಕಿಂಗ್ ವಲಯದ ಕೆಲವು ನೈಜ ಪ್ರಶ್ನೆಗಳನ್ನು ಬದಿಗೊತ್ತುವುದು ಸಾಧ್ಯವಾಗಲಿಲ್ಲ. ಮುಖ್ಯವಾಗಿ ಖಾಸಗಿ ಮತ್ತು ಸಾರ್ವಜನಿಕ ವಲಯದ ಬ್ಯಾಂಕುಗಳ ನಡುವೆ 'ಸಮಾನ ಅವಕಾಶ'ದ ಪ್ರಶ್ನೆ ಬಂದಾಗ ಈ ಪ್ರಶ್ನೆಗಳು ಎದ್ದವು.

ಒಂದು, ಸಾರ್ವಜನಿಕ ವಲಯದ ಬ್ಯಾಂಕುಗಳು 'ಆದ್ಯತಾ ವಲಯ ಸಾಲ ನೀಡಿಕೆ' ನಿರ್ದೇಶನಗಳನ್ನು ಪಾಲಿಸಲೇ ಬೇಕು. ಆದರೆ ಖಾಸಗೀ ವಲಲಯದ ಬ್ಯಾಂಕುಗಳಿಗೆ ಇದನ್ನು ಅನ್ವಯಿಸುವಂತೆ ಕಾಣುತ್ತಿಲ್ಲ. ಬದಲಿಗೆ ಅವು ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಗಳಿಂದ ಇವೇ ಸಾಲಗಳ ಸೆಕ್ಯೂರಿಟಿಗಳನ್ನು ಖರೀದಿಸಬಹುದು.

ಎರಡು, ಸಾರ್ವಜನಿಕ ವಲಯದ ಬ್ಯಾಂಕುಗಳು ಮೂರು ತಿಂಗಳ ಕಾಲ ಪ್ರಧಾನ ಮಂತ್ರಿ ಜನಧನಯೋಜನೆಯ 10 ಕೋಟಿ ಖಾತೆಗಳನ್ನು ತೆರೆಯಲು ಗಮನ ಕೇಂದ್ರೀಕರಿಸಬೇಕಾಗಿ ಬಂದಿತ್ತು. ಆ ಅವಧಿಯಲ್ಲಿ ಖಾಸಗಿಯವರು ತೆರೆದದ್ದು ಕೇವಲ 30 ಲಕ್ಷ ಖಾತೆಗಳು.

ಮೂರು, ಸಾರ್ವಜನಿಕ ವಲಯದ ಬ್ಯಾಂಕುಗಳು 33ಶೇ. ಗ್ರಾಮೀಣ ಶಾಖೆಗಳನ್ನು ಹೊಂದಿವೆ, ಖಾಸಗಿ ಬ್ಯಾಂಕುಗಳದ್ದು 15ಶೇ. ಮಾತ್ರ

ನಾಲ್ಕು, ಸಾರ್ವಜನಿಕ ವಲಯದ ಬ್ಯಾಂಕುಗಳು ಮೂಲರಚನೆಗಳು ಮತ್ತು ನಾಲ್ಕು ಇತರ ವಲಯಗಳಲ್ಲಿ ಭಾರೀ ಪ್ರಮಾಣದಲ್ಲಿ ಹೂಡಿಕೆ ಮಾಡಲೇ ಬೇಕಾಗಿ ಬಂದಿದೆ. ಆದರೆ ಖಾಸಗೀ ವಲಯದ ಬ್ಯಾಂಕುಗಳು ದೇಶ ಕಟ್ಟುವ ವಲಯಗಳಲ್ಲಿ ಏನೇನೂ ಹೂಡಿಕೆ ಮಾಡಬೇಕಾಗಿಲ್ಲವೇ?

ರಿಝರ್ವ್ ಬ್ಯಾಂಕ್‌ನ ಈ ಕುರಿತ ನಿರ್ದೇಶನಗಳನ್ನು ಖಾಸಗೀ ಬ್ಯಾಂಕುಗಳೂ ಪಾಲಿಸಬೇಕಾಗಿದೆ. ಅವು ಇವನ್ನು ಪಾಲಿಸುವಂತೆ ಮಾಡಬೇಕು, ಇಲ್ಲವೇ ಅವನ್ನು ರಾಷ್ಟ್ರೀಕರಿಸಬೇಕು. ಎಂಬ ದನಿಗೆ ಪ್ರಧಾನಿಗಳ ಈ 'ಧೀರ' ನಿರ್ಧಾರದ 'ಜ್ಞಾನ ಸಂಗಮ'ದಲ್ಲಿ ಅವಕಾಶವಿರಲಿಲ್ಲ. ವಾಸ್ತವವಾಗಿ, ಈ 'ಜ್ಞಾನ ಸಂಗಮ'ವೇ ಇಂದಿನ ಬ್ಯಾಂಕ್‌ಗಳ ದುರವಸ್ಥೆಗೆ ಮೂಲ ಎಂದು ಕೆಲವು ಆರ್ಥಿಕ ತಜ್ಞರು ಹೇಳುತ್ತಾರೆ.

* ಹಣಕಾಸು ಮಂತ್ರಿಗಳು ಹೇಳಿಕೊಂಡಿರುವ ಇನ್ನೊಂದು 'ಸಾಧನೆ' ಎಂದರೆ ಸಾರ್ವಜನಿಕ ವಲಯದ ಬ್ಯಾಂಕುಗಳ ವಿಲೀನದ 'ಧೀರ' ಹೆಜ್ಜೆ.! ಈ ಮೂಲಕ ಸಾರ್ವಜನಿಕ ವಲಯದ ಬ್ಯಾಂಕುಗಳ ಸಂಖ್ಯೆ 21 ರಿಂದ 12ಕ್ಕೆ ಇಳಿದಿದೆ. ಇನ್ನು ಐದಕ್ಕೆ ಇಳಿಯುತ್ತದಂತೆ. ಆದರೆ ಇದುವರೆಗೆ ಇದು ದೇಶಕ್ಕೆ ಮತ್ತು ಜನರಿಗೆ ಕೊಟ್ಟಿದ್ದೇನು? ಬಹಳಷ್ಟು ಶಾಖೆಗಳ ಮುಚ್ಚಿಕೆ–ಕಳೆದ ಎರಡು ವರ್ಷಗಳಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ 2500 ಶಾಖೆಗಳು, ಇನ್ನೊಂದು ದೊಡ್ಡ ಬ್ಯಾಂಕಾದ ಬ್ಯಾಂಕ್ ಆಫ್ ಬರೋಡದ 1000 ಶಾಖೆಗಳು ಮುಚ್ಚಿವೆ ಎನ್ನಲಾಗಿದೆ. ಈ ಮೂಲಕ ಸಾಮಾನ್ಯ ಠೇವಣಿದಾರರಿಗೆ ಬ್ಯಾಂಕ್ ಸೇವೆಗಳ ನಿರಾಕರಣೆ ಯಾಗಿದೆ. ಅಲ್ಲದೆ ಹೆಚ್ಚಿದ ಬ್ಯಾಂಕ್ ಚಾರ್ಜ್‌ಗಳು. ದೇಶಕ್ಕೆ, ಹೆಚ್ಚಿದ 'ಸುಸ್ತಿ ಸಾಲಗಳು' ಜನರಿಗೆ ಮತ್ತು ದಿವಾಳಿಶಕ್ಕಾದರೆ, ಕಾರ್ಪೊರೇಟ್‌ಗಳಿಗೆ ಮಾತ್ರ ಹೆಚ್ಚು ಸಾಲ ಲಭ್ಯತೆ!

* ಒಂದೆಡೆ ಸಾರ್ವಜನಿಕ ವಲಯದ ಬ್ಯಾಂಕುಗಳ ಸಾವಿರಾರು ಶಾಖೆಗಳನ್ನು ಮುಚ್ಚಿ ಈಗಾಗಲೇ ಬ್ಯಾಂಕಿಂಗ್ ಸೇವೆಗಳನ್ನು ಪಡೆಯುತ್ತಿದ್ದವರಿಗೆ ಅವುಗಳ ನಿರಾಕರಣೆಯಾದರೆ, ಹಣಕಾಸು ಮಂತ್ರಿಗಳು ಜನಧನ ಯೋಜನೆಯಲ್ಲಿ 39 ಕೋಟಿ ಬಡಜನರಿಗೆ ಬ್ಯಾಂಕಿಂಗ್ ಸೇವೆಗಳನ್ನು ಲಭ್ಯಗೊಳಿಸಲಾಗಿದೆ ಎಂದಿದ್ದಾರೆ. ಇದು ಖಂಡಿತ ಒಂದು ಸಾಧನೆಯೇ. ಆದರೆ ಇದನ್ನು ಸಾಧಿಸಿದ್ದು ಸಾರ್ವಜನಿಕ ವಲಯದ ಬ್ಯಾಂಕುಗಳ ಮೂಲಕವೇ.ಖಾಸಗಿ ವಲಯದ ಬ್ಯಾಂಕುಗಳು ತೆರೆದದ್ದು ಕೇವಲ 1.26 ಕೋಟಿ ಖಾತೆಗಳು ಮಾತ್ರ, ಅಂದರೆ ಕೇವಲ 3.17ಶೇ. ಮುಂದೆ ಈ ಸರಕಾರ ಬಯಸುವಂತೆ ಎಲ್ಲ ಸಾರ್ವಜನಿಕ ವಲಯದ ಬ್ಯಾಂಕುಗಳನ್ನು ಖಾಸಗೀಕರಿಸಿದರೆ, 80ಶೇ.ದಷ್ಟು ಜನಧನ ಖಾತೆದಾರರಿಗೆ ಬ್ಯಾಂಕಿಂಗ್ ಸೇವೆಗಳನ್ನು ಲಭ್ಯಗೊಳಿಸುವವರು ಯಾರು? ಅದೇ ರೀತಿಯಲ್ಲಿ ಆದ್ಯತಾ ವಲಯಕ್ಕೆ ಮತ್ತು ಮೂಲಭೂತ ಸೌಕರ್ಯಗಳಿಗೆ ಸಾಲ ಕೊಡುವವರು ಯಾರು?

ಇವೀಗ ಬ್ಯಾಂಕಿಂಗ್ ವಲಯದಲ್ಲಿ ಆರು ವರ್ಷಗಳ 'ಧೀರ ನಿರ್ಧಾರ'ಗಳ ಫಲಶೃತಿಗಳು.

"ಭಾರತದಲ್ಲಿ ಹೂಡಿಕೆ ಮಾಡಲು ಇದೀಗ ಅತ್ಯುತ್ತಮ ಸಮಯ"


ಹೀಗೆಂದು ಪ್ರಧಾನ ಮಂತ್ರಿಗಳು ಹೇಳಿದ್ದಾರೆ. ಅವರು ಅಮೆರಿಕ–ಭಾರತ ವ್ಯಾಪಾರ ಮಂಡಳ (US-India Business Council) ಸಭೆಯನ್ನು ಉದ್ದೇಶಿಸಿ ಮಾತಾಡುತ್ತ ಭಾರತದಲ್ಲಿ ದೊಡ್ಡ ಪ್ರಮಾಣದಲ್ಲಿ ಲಭ್ಯವಾಗಿರುವ ಅವಕಾಶಗಳನ್ನು ಮತ್ತು ಇತ್ತೀಚಿನ 'ಸುಧಾರಣೆ'(ಸುಗ್ರೀವಾಜ್ಞೆ?)ಗಳ ಪ್ರಯೋಜನವನ್ನು ಪಡೆಯಬೇಕೆಂದು ಅಮೆರಿಕನ್ ಉದ್ದಿಮೆಗಳಿಗೆ ಕರೆ ನೀಡಿದ್ದಾರೆ

–ಸುದ್ದಿ

ಚಿತ್ರಕೃಪೆ:
ಸಿಪಿಐ(ಎಂ) ಸಿಸಿ
ಫೇಸ್‌ಬುಕ್



ಏಕೆಂದರೆ ನಾನು ಎಲ್ಲ ಕಾರ್ಮಿಕ ಕಾನೂನುಗಳನ್ನು ದುರ್ಬಲಗೊಳಿಸಿದ್ದೇನೆ! ನೀವು ಮನಬಂದಂತೆ ಹೈರ್–ಫೈರ್ ಮಾಡಬಹುದು



ಹೌದು, ನಮ್ಮಲ್ಲಿ ಭಿನ್ನಾಭಿಪ್ರಾಯವನ್ನು ದಮನ ಮಾಡುವ ಅತ್ಯುತ್ತಮ ಕಾನೂನುಗಳಿವೆ



ಭೂಮಿ ಖಾಲಿ ಮಾಡಿಸಿ ಕೊಡುತ್ತೇವೆ

ಜಾಗತಿಕ ಬಡತನ ಇಳಿಕೆಯೆಂಬ ಸೋಗು



ಬಡತನದ ಇಳಿಕೆ ಎಂದು ವಿಶ್ವ ಬ್ಯಾಂಕ್ ಹೇಳುವಂತದ್ದು, ಅವರ ಲೆಕ್ಕಚಾರಗಳ ಪ್ರಕಾರವೇ ಚೀನಾ ಮತ್ತು ಪೂರ್ವ ಏಷ್ಯಾದ ದೇಶಗಳಿಗೆ ಸೀಮಿತವಾಗಿರುವ ಒಂದು ಸ್ಥಳೀಯ ವಿದ್ಯಮಾನವಾಗಿದೆ. ಇತರ ದೇಶಗಳಲ್ಲಿ ಬಡವರ ಸಂಖ್ಯೆ ಇಳಿದಿದೆ ಎಂದು ಹೇಳುವುದು ಮೂರು ಕಾರಣಗಳಿಂದ ಅಸಂಬದ್ಧವಾಗಿದೆ. ಮೊದಲನೆಯದು, ಈ ಪ್ರಾತಿನಿಧಿಕ ಬೆಲೆ ಸೂಚ್ಯಂಕಗಳು ಜೀವನ ವೆಚ್ಚದ ನಿಜವಾದ ಏರಿಕೆಯನ್ನು ಸೆರೆಹಿಡಿಯುವುದಿಲ್ಲ ಎಂಬುದು. ಎರಡನೆಯ ಕಾರಣವೆಂದರೆ, 2011ರ ನಂತರ ಸಂಭವಿಸಿದ ಪ್ರಾಥಮಿಕ/ಮೂಲ ಸರಕುಗಳ ಬೆಲೆ ಕುಸಿತ ಮತ್ತು ಮೂರನೆಯ ಕಾರಣ ನಿರುದ್ಯೋಗದಲ್ಲಿ ಭಾರೀ ಹೆಚ್ಚಳ.

ಪ್ರೊ. ಪ್ರಬಾತ್ ಪಟ್ನಾಯಕ್, ಅನು: ಕೆ.ಎಂ. ನಾಗರಾಜ್

1990 ಮತ್ತು ಇತ್ತೀಚಿಗೆ ಕೊರೊನಾ ಹರಡುವ ವರೆಗಿನ ಅವಧಿಯ ನಡುವೆ ಜಾಗತಿಕವಾಗಿ ಬಡತನ ಇಳಿಕೆಯಾಗಿದೆ ಎಂಬುದರ ಬಗ್ಗೆ ದೇಶ ದೇಶಗಳ ಸರ್ಕಾರಗಳು, ವಿಶ್ವ ಬ್ಯಾಂಕಿನ ಅಧಿಕಾರಿಗಳು ಮತ್ತು ಅನೇಕ ಅರ್ಥಶಾಸ್ತ್ರಜ್ಞರು ತಮ್ಮ ಬೆನ್ನನ್ನು ತಾವೇ ತಟ್ಟಿಕೊಳ್ಳುತ್ತಿದ್ದಾರೆ ಮತ್ತು ತಮ್ಮನ್ನು ತಾವೇ ಅಭಿನಂದಿಸಿಕೊಳ್ಳುತ್ತಿದ್ದಾರೆ. ಒಂದು ನಿರ್ದಿಷ್ಟ ಪ್ರಮಾಣದ ಆಹಾರ ಮತ್ತಿತರ ಬಳಕೆಯ ವಸ್ತುಗಳನ್ನೊಳಗೊಂಡ ಒಂದು ಸಾಮಾನುಗಳ ಕಂತೆಯ ಮೌಲ್ಯವನ್ನು ದಿನವೊಂದಕ್ಕೆ 1.90 ಡಾಲರ್ (2011ರ ಕೊಳ್ಳುವ ಶಕ್ತಿಯ ಅನುರೂಪತೆಯ ಮಟ್ಟದಲ್ಲಿ –Purchasing Power Parity-ಪಿ.ಪಿ.ಪಿ.) ಎಂದು ಪರಿಗಣಿಸಿ ಆಯಾಯ ದೇಶಗಳ ಅದಕ್ಕೆ ಸಮನಾದ ಕೊಳ್ಳುವ ಶಕ್ತಿ–ಸಾಮರ್ಥ್ಯದ ಲೆಕ್ಕಾಚಾರದಲ್ಲಿ ಒಂದು ಅಂತಾರಾಷ್ಟ್ರೀಯ ಬಡತನ ರೇಖೆ(ಐಪಿಎಲ್) ಯನ್ನು ವಿಶ್ವ ಬ್ಯಾಂಕ್ ಸಿದ್ಧಪಡಿಸಿದೆ. ಈ ರೇಖೆಯ ಚಲನೆಯನ್ನು ಆಧರಿಸಿ, ಜಾಗತಿಕವಾಗಿ ಬಡತನ ಇಳಿಕೆಯಾಗಿದೆ ಎಂದು ಹೇಳಲಾಗಿದೆ.

ಈ 1.90 ಡಾಲರ್ ಮೊತ್ತವು ಎಷ್ಟು ಹಾಸ್ಯಾಸ್ಪದವಾದ ಕಡಿಮೆ ಮಟ್ಟದಲ್ಲಿತ್ತು ಎಂಬುದನ್ನು ಎರಡು ಸಂಗತಿಗಳಿಂದ ಅಂದಾಜು ಮಾಡಬಹುದು. 2011ರಲ್ಲಿ ಅಮೆರಿಕದಲ್ಲಿ 1.90 ಡಾಲರ್ ಹಣದಿಂದ ಒಂದು ಕಪ್ ಕಾಫಿ ಕುಡಿಯಬಹುದಿತ್ತು, ಅಷ್ಟೇ. 2011ರಲ್ಲಿ ಭಾರತದಲ್ಲಿ 1.90 ಡಾಲರ್‌ಗಳ ವಿನಿಮಯ ಮೌಲ್ಯವು 95 ರೂಪಾಯಿಗಳಾಗಿತ್ತು. ಅದೇ ಪಿಪಿಪಿ ವಿನಿಮಯ ದರದಲ್ಲಿ ಕೇವಲ 29 ರೂಪಾಯಿಗಳಾಗಿತ್ತು. ಈ ಹಣದಲ್ಲಿ ಕೇವಲ ಎರಡು ಬಾಟಲ್ ನೀರು ಕೊಳ್ಳಬಹುದಷ್ಟೇ. (ಪಿಪಿಪಿ – ಕೊಳ್ಳುವ ಶಕ್ತಿಯ ಅನುರೂಪತೆಯ ಲೆಕ್ಕಾಚಾರ. ಉದಾ: ಭಾರತದಲ್ಲಿ ಒಂದು ಲೀಟರ್ ಹಾಲಿನ ಬೆಲೆ 40 ರೂ ಎಂದಿಟ್ಟುಕೊಳ್ಳೋಣ ಅಮೇರಿಕಾದಲ್ಲಿ ಅದೇ ಒಂದು ಲೀಟರ್ ಹಾಲಿನ ಬೆಲೆ 1 ಡಾಲರ್ ಎಂದುಕೊಳ್ಳೋಣ. ಈಗ, ಪಿಪಿಪಿ ಲೆಕ್ಕಾಚಾರದಲ್ಲಿ ಒಂದು ಡಾಲರ್ ಮೌಲ್ಯವು 40 ರೂ ಆಗುತ್ತದೆ. ಆದರೆ, ವಾಸ್ತವವಾಗಿ ಈಗ ಒಂದು ಡಾಲರ್ ಕೊಳ್ಳಲು ಚಿಲ್ಲರೆ ಬೆಲೆಯಲ್ಲಿ ಸುಮಾರು 80ರೂ ಕೊಡಬೇಕಾಗುತ್ತದೆ.)

ವಿಶ್ವ ಬ್ಯಾಂಕಿನ ಈ ವ್ಯಾಖ್ಯಾನದ ಪ್ರಕಾರ 1990ರಲ್ಲಿ 189.5 ಕೋಟಿ ಜನರು ಅಥವಾ ಪ್ರಪಂಚದ ಜನಸಂಖ್ಯೆಯ 36% ಜನರು ಬಡತನದಲ್ಲಿದ್ದರು. 2015ರ ಹೊತ್ತಿಗೆ ಈ ಸಂಖ್ಯೆಯು 73.6 ಕೋಟಿಗೆ ಇಳಿದಿತ್ತು. ಇದು ವಿಶ್ವದ ಜನಸಂಖ್ಯೆಯ ಶೇ.10ರಷ್ಟು. ಈ ಇಳಿಕೆಯನ್ನೇ (ಸುಮಾರು 116 ಕೋಟಿ) "ಈ ಅವಧಿಯಲ್ಲಿ ಒಂದು ಶತಕೋಟಿಗೂ ಹೆಚ್ಚು ಜನರು ಬಡತನದಿಂದ ಹೊರ ಬಂದಿದ್ದಾರೆ" ಎಂಬುದಾಗಿ ಉತ್ಪ್ರೇಕ್ಷಿಸಲಾಗಿದೆ.

ವಿಶ್ವ ಬ್ಯಾಂಕ್ ಹೇಳಿಕೊಂಡಿರುವ ಈ ಸಾಧನೆಯನ್ನು ಪರೀಕ್ಷಿಸಬೇಕಾಗುತ್ತದೆ. ವಿಶ್ವ ಬ್ಯಾಂಕಿನ ಮಾನದಂಡದ ಪ್ರಕಾರವಾಗಿಯೇ ಜಾಗತಿಕ ಬಡತನದ ಇಳಿಕೆಗೆ ಬಹುಪಾಲು ಚೀನಾವೇ ಕಾರಣವಾಗಿದೆ. 1990ರಲ್ಲಿ ಚೀನಾದಲ್ಲಿ 75 ಕೋಟಿ ಜನರು ಅಂತಾರಾಷ್ಟ್ರೀಯ ಬಡತನ ರೇಖೆಯ (ಐಪಿಎಲ್) ಕೆಳಗೆ ಇದ್ದರು. 2015ರ ಹೊತ್ತಿಗೆ ಈ 75 ಕೋಟಿ ಕೇವಲ 1 ಕೋಟಿಗೆ ಇಳಿಯಿತು. ಅಂದರೆ ಚೀನಾದಲ್ಲಿ 74 ಕೋಟಿ ಜನರು ಬಡತನದಿಂದ ಹೊರ ಬಂದರು. ಹೀಗಾಗಿ, ವಿಶ್ವ ಮಟ್ಟದಲ್ಲಿ "ಅಂತಾರಾಷ್ಟ್ರೀಯ ಬಡತನ ರೇಖೆಯ ಮೇಲೆ ಎತ್ತಿದವರ" ಪೈಕಿ 64% ಜನರು ಸಂಪೂರ್ಣವಾಗಿ ಚೀನಾದವರೇ ಆಗಿದ್ದರು. ವಾಸ್ತವವಾಗಿ ಸಹರಾ–ಕೆಳಗಿನ ಆಫ್ರಿಕಾ ಮತ್ತು ಮಧ್ಯಪ್ರಾಚ್ಯಗಳಲ್ಲಿ, ಈ ಅವಧಿಯಲ್ಲಿ, ಇದೇ ಮಾನದಂಡದ ಪ್ರಕಾರ, ಜಾಗತಿಕ ಬಡವರ ಸಂಖ್ಯೆಯು 14 ಕೋಟಿಯಷ್ಟು ಅಧಿಕವಾಯಿತು. ವಿಶ್ವ ಬ್ಯಾಂಕ್ ಅಂದಾಜಿನ ಪ್ರಕಾರ, ಜಗತ್ತಿನ ಯಾವುದೇ ಭಾಗದಲ್ಲಿ ಬಡತನವು ನಿಜವಾಗಿಯೂ ಇಳಿಕೆಯಾಗಿದ್ದರೆ, ಅದು ಚೀನಾದಲ್ಲಿಯೇ. ಹಾಗಾಗಿ, ವಿಶ್ವ ಬ್ಯಾಂಕ್ ಮತ್ತು ಅದರ ಆರ್ಥಿಕ ತಜ್ಞರು ತಾವೇ ಮಾಡಿರುವ ಬಡತನ ಅಂದಾಜುಗಳಿಗೇ ಅಂಟಿಕೊಂಡು, ತಮ್ಮನ್ನೇ ತಾವು ಅಭಿನಂದಿಸಿಕೊಳ್ಳುವ ಕ್ರಮವನ್ನು ಪ್ರಶ್ನಿಸಿಕೊಳ್ಳಬೇಕಾಗಿದೆ.

ಒಂದು ವೇಳೆ ಸ್ವಲ್ಪ ಭಿನ್ನವಾದ ಬಡತನ ರೇಖೆಯ ಮಾನದಂಡವನ್ನು ಅನುಸರಿಸಿದ್ದರೆ ಬಹುಷಃ ಬಡತನದ ಪ್ರಮಾಣ ಇಳಿದಿದೆ ಎನ್ನುವ ಪ್ರಸಂಗವೇ ಇರುತ್ತಿರಲಿಲ್ಲ. ಒಂದು ವೇಳೆ ಬಡತನ ರೇಖೆಯ ಮಾನದಂಡವು ದಿನಕ್ಕೆ 2.5 ಡಾಲರ್‌ಗಳಾಗಿದ್ದರೆ ಮತ್ತು ಚೀನಾವನ್ನು ಈ ಸಮೀಕ್ಷೆಯಿಂದ ಹೊರಗಿಟ್ಟಿದ್ದರೆ, 1990 ಮತ್ತು 2010ರ ನಡುವೆ ಜಾಗತಿಕ ಮಟ್ಟದಲ್ಲಿ ಬಡತನದ ಪ್ರಮಾಣ ಇಳಿಯುತ್ತಿರಲಿಲ್ಲ. ಒಂದು ವೇಳೆ ಮಾನದಂಡವು ದಿನಕ್ಕೆ 5.5 ಡಾಲರ್‌ಗಳಾಗಿದ್ದರೆ ಮತ್ತು ಪೂರ್ವ ಏಷ್ಯಾದ ಮತ್ತು ಪೆಸಿಫಿಕ್ ದೇಶಗಳನ್ನು ಹೊರಗಿಟ್ಟಿದ್ದರೆ, 1990 ಮತ್ತು 2015ರ ನಡುವೆ ಬಡತನದ ಸಂಖ್ಯೆಯು 200ಕೋಟಿಯಿಂದ 260ಕೋಟಿಯ ವರೆಗಿನ ಎತ್ತರದ ಮಟ್ಟದಲ್ಲಿ ಇರುತ್ತಿತ್ತು. ಆದ್ದರಿಂದ, ಬಡತನದ ಇಳಿಕೆ ಎಂದು ವಿಶ್ವ ಬ್ಯಾಂಕ್ ಹೇಳುವಂತದ್ದು ಚೀನಾ ಮತ್ತು ಪೂರ್ವ ಏಷ್ಯಾದ ದೇಶಗಳಿಗೆ ಸೀಮಿತವಾಗಿರುವ ಒಂದು ಸ್ಥಳೀಯ ವಿದ್ಯಮಾನವಾಗಿದೆ.

ಆದರೆ, ಈಗಾಗಲೇ ಹೇಳಿದಂತೆ, ವಿಶ್ವ ಬ್ಯಾಂಕಿನ ಬಡತನದ ಅಂದಾಜುಗಳ ಸಮಸ್ಯೆಯೆಂದರೆ, ಅದರ ಮಾನದಂಡವೇ ಅಸಂಭವ ಎನ್ನಬಹುದಾದಷ್ಟು ಅತ್ಯಂತ ಕಡಿಮೆ ಮಟ್ಟದಲ್ಲಿದೆ. ಹಾಗಾಗಿ, ಜಾಗತಿಕ ಬಡತನವನ್ನು ಕೀಳಂದಾಜು ಮಾಡಲಾಗಿದೆ. ಈ ಅಂಶವನ್ನು ಎಡಪಂಥದ ಅನೇಕರು ಬಹಳ ಕಾಲದಿಂದಲೂ ಹೇಳುತ್ತಲೇ ಇದ್ದರು. ಆದರೆ, ಈಗ ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಮಂಡಳಿಯು ಸಿದ್ಧಪಡಿಸಿರುವ ವರದಿಯೂ ಸಹ ಇದೇ ಅಂಶವನ್ನು ಬಹಳ ಸ್ಪಷ್ಟವಾಗಿಯೇ ಹೇಳಿದೆ.

ವಿಶ್ವ ಬಡತನವನ್ನು ಕೀಳಂದಾಜು ಮಾಡಿರುವ ಕಾರಣವು ಬ್ಯಾಂಕಿನ ಅಂದಾಜಿನ ಪ್ರಕಾರವೇ ಬಹಳ ಸರಳವಾಗಿದೆ: ವಿಶ್ವ ಬ್ಯಾಂಕಿನ ಅಂತಾರಾಷ್ಟ್ರೀಯ ಬಡತನ ರೇಖೆಯು (ಐಪಿಎಲ್) ಯಾವುದೇ ವಸ್ತುನಿಷ್ಠ ಮಾನದಂಡದ ಮೇಲೆ ನಿಂತಿಲ್ಲ. ಅಂದರೆ, "ಮೂಲಭೂತ ಅಗತ್ಯಗಳು" ಅಥವಾ ಪೌಷ್ಟಿಕತೆಯ ಅಗತ್ಯವನ್ನು ಪೂರೈಸಲು ಬೇಕಾಗುವ ಖರ್ಚಿನ ಮೊತ್ತ ಅಥವಾ ಅಂತಹ ಯಾವುದೇ ಅಂಶದ ಮೇಲೆ ಬಡತನ ರೇಖೆಯನ್ನು ನಿರ್ಧರಿಸಿಲ್ಲ. ಇದನ್ನು, ಮುಖ್ಯವಾಗಿ ಸಹರಾ–ಕೆಳಗಿನ ಆಫ್ರಿಕಾಕ್ಕೆ ಸೇರಿದ 15 ಬಡ ದೇಶಗಳ ರಾಷ್ಟ್ರೀಯ ಬಡತನ ರೇಖೆಗಳನ್ನು ಪರಿಗಣಿಸಿ, ಅವುಗಳನ್ನು ಕೊಳ್ಳುವ ಶಕ್ತಿಯ ಅನುರೂಪತೆಯ ವಿನಿಮಯ ದರಗಳ ಲೆಕ್ಕಾಚಾರದಲ್ಲಿ (ನಾಮಮಾತ್ರ ವಿನಿಮಯ ದರಗಳಲ್ಲಿ ಅಲ್ಲ) ಅಮೇರಿಕನ್ ಡಾಲರ್‌ಗಳಿಗೆ ಪರಿವರ್ತಿಸಿ, ಅವುಗಳ ಸರಾಸರಿಯ ಮೇಲೆ ಐಪಿಎಲ್‌ಅನ್ನು ರಚಿಸಲಾಗಿದೆ. ಇದು 2011ರಲ್ಲಿ 1.90 ಡಾಲರ್ ಆಗಿತ್ತು. ಆದರೆ, ಈ ದೇಶಗಳ ರಾಷ್ಟ್ರೀಯ ಬಡತನ ರೇಖೆಗಳ ನಿಖರ ಆಧಾರ ಏನು ಎಂಬುದು ತಿಳಿದಿಲ್ಲ. ಮೇಲಾಗಿ, ಸಾಮಾನ್ಯವಾಗಿ ಸರ್ಕಾರಗಳು ಬಡತನ ನಿರ್ಮೂಲನೆಯ ಕ್ಷೇತ್ರದಲ್ಲಿ ತಮ್ಮ "ಸಾಧನೆಗಳನ್ನು" ಉದ್ದೇಶಪೂರ್ವಕವಾಗಿಯೇ ಉತ್ಪ್ರೇಕ್ಷೆ ಮಾಡಿಕೊಳ್ಳುತ್ತವೆ ಮತ್ತು ತಮ್ಮ ಬಡತನ ರೇಖೆಗಳನ್ನು ಕಡಿಮೆ ಮಟ್ಟದಲ್ಲಿ ತೋರಿಸಲು ಪ್ರಯತ್ನಿಸುತ್ತವೆ. ಹಾಗಾಗಿ, ಈ ರಾಷ್ಟ್ರೀಯ ಬಡತನ ರೇಖೆಗಳು ಕೀಳಂದಾಜಾಗಿಯೇ ಇರುತ್ತವೆ.

ಅದರ ಜೊತೆಯಲ್ಲಿ, ದೇಶ ದೇಶಗಳ ನಡುವಿನ ವ್ಯತ್ಯಾಸಗಳನ್ನು ಪರಿಗಣಿಸದೆ ಕೆಲವೇ ಕೆಲವು ದೇಶಗಳ ರಾಷ್ಟ್ರೀಯ ಬಡತನ ರೇಖೆಗಳನ್ನು ಎಲ್ಲ ದೇಶಗಳಿಗೂ ಅನ್ವಯಿಸಲು ಯಾವುದೇ ಕಾರಣವಿಲ್ಲ. ವಾಸ್ತವವಾಗಿ, ಈಗಾಗಲೇ ಅಸ್ತಿತ್ವದಲ್ಲಿರುವ ಬಹುತೇಕ ದೇಶಗಳ ರಾಷ್ಟ್ರೀಯ ಬಡತನ ರೇಖೆಗಳು ವಿಶ್ವ ಬ್ಯಾಂಕಿನ ಐಪಿಎಲ್‌ಗಿಂತ ಗಣನೀಯವಾಗಿ ಎತ್ತರದ ಮಟ್ಟದಲ್ಲಿವೆ. ಹಾಗಾಗಿ, ಈ ಕಾರಣದಿಂದಲೂ ಸಹ ವಿಶ್ವ ಬಡತನದ ಪ್ರಮಾಣವು ಬ್ಯಾಂಕಿನ ಐಪಿಎಲ್ ಹೇಳುವ ಮಟ್ಟಕ್ಕಿಂತಲೂ ಅಧಿಕವಾಗಿದೆ.

ಅಂತಿಮವಾಗಿ, ಪ್ರತಿ ಐದು ವರ್ಷಗಳಿಗೊಮ್ಮೆ ಒಂದು ದೊಡ್ಡ ಮಾದರಿ ಸಮೀಕ್ಷೆಯನ್ನು ಮತ್ತು ಪ್ರತಿ ವರ್ಷವೂ ಒಂದು ಮಾದರಿ ಕಿರು ಸಮೀಕ್ಷೆಯನ್ನು ನಡೆಸುವ ವಿಸ್ತೃತ ರಾಷ್ಟ್ರಮಟ್ಟದ ಮಾದರಿ ಸಮೀಕ್ಷೆಗಳನ್ನು ಹೊಂದಿರುವ ಭಾರತದಂತಹ ದೇಶಗಳು ಕೆಲವೇ ಕೆಲವು ಇವೆ. ಐಪಿಎಲ್ ಅದಾಗಲೇ ಒಳಗೊಂಡಿರುವ ದೌರ್ಬಲ್ಯಗಳ ಜೊತೆಗೆ ಕೆಲವು ದೇಶಗಳ ಪ್ರಾಥಮಿಕ ಮಾಹಿತಿಗಳ ಕೊರತೆಯ ದೌರ್ಬಲ್ಯವೂ ಸೇರಿಕೊಂಡಿದೆ.

ಇಷ್ಟೇ ಅಲ್ಲದೆ, ಇನ್ನೂ ಮೂರು ಅಂಶಗಳಿಂದಾಗಿ ಜಗತ್ತಿನಲ್ಲಿ ಬಡತನ ಇಳಿಕೆಯಾಗಿದೆ ಎಂಬ ಹೇಳಿಕೆಯು ಸಮರ್ಥನೀಯವಲ್ಲ. ಮೊದಲನೆಯದು, ಈ ಪ್ರಾತಿನಿಧಿಕ ಬೆಲೆ ಸೂಚ್ಯಂಕಗಳು ಜೀವನ ವೆಚ್ಚದ ನಿಜವಾದ ಏರಿಕೆಯನ್ನು ಸೆರೆಹಿಡಿಯುವುದಿಲ್ಲ. ಇದನ್ನು ಭಾರತೀಯ ದತ್ತಾಂಶಕ್ಕೆ ಸಂಬಂಧಿಸಿದಂತೆ ವಿವರಿಸಬಹುದು. ಒಂದು ನಿರ್ದಿಷ್ಟ ಜನಸಮೂಹವು ಮೂಲ ವರ್ಷದಲ್ಲಿ ಬಳಕೆ ಮಾಡುತ್ತಿದ್ದ ಸರಕು–ವಸ್ತುಗಳ ಬುಟ್ಟಿಯು ಮೂಲ ವರ್ಷಕ್ಕೆ ಹೋಲಿಸಿದರೆ ಇಂದು ಎಷ್ಟು ವೆಚ್ಚದಾಯಕವಾಗಿದೆ ಎಂಬುದನ್ನು ಬೆಲೆ ಸೂಚ್ಯಂಕಗಳು ತಿಳಿಸುತ್ತವೆ. ಏತನ್ಮಧ್ಯೆ, ವಾಸ್ತವವಾಗಿ, ಬುಟ್ಟಿಯು ಒಳಗೊಂಡಿರುವ ಸರಕು–ವಸ್ತುಗಳು ಬದಲಾಗುತ್ತವೆ. ಕೆಲವು ಹಳೆಯ ಸರಕು–ವಸ್ತುಗಳು, ಸೇವೆಗಳು ಕ್ರಮೇಣ ಬುಟ್ಟಿಯಿಂದ ಹೊರಬೀಳುತ್ತವೆ ಮತ್ತು ಹೊಸ ಸರಕು–ವಸ್ತುಗಳು, ಸೇವೆಗಳು ಸೇರ್ಪಡೆಯಾಗುತ್ತವೆ.



ವಿಶ್ವ ಬ್ಯಾಂಕಿನ ಈ ವ್ಯಾಖ್ಯಾನದ ಪ್ರಕಾರ 1990ರಲ್ಲಿ 189.5 ಕೋಟಿ ಜನರು ಅಥವಾ ಪ್ರಪಂಚದ ಜನಸಂಖ್ಯೆಯ 36% ಜನರು ಬಡತನದಲ್ಲಿದ್ದರು. 2015ರ ಹೊತ್ತಿಗೆ ಈ ಸಂಖ್ಯೆಯು 73.6 ಕೋಟಿಗೆ ಇಳಿದಿತ್ತು. ಇದು ವಿಶ್ವದ ಜನಸಂಖ್ಯೆಯ ಶೇ.10ರಷ್ಟು. ಇದನ್ನೇ ಬಡತನದಲ್ಲಿ ಒಂದು ಬಿಲಿಯ ಅಥವ ಶತಕೋಟಿ ಇಳಿಕೆ ಎಂದು ಹೇಳಲಾಗುತ್ತಿದೆ. ಆದರೆ ಅದರ ಪ್ರಕಾರವೇ ಈ ಶತಕೋಟಿ ಇಳಿಕೆಯಲ್ಲಿ ಚೀನಾದ ಪಾಲೇ 74ಕೋಟಿ. ಏಕೆಂದರೆ 1990 ರಿಂದ 2015ರ ನಡುವೆ ಚೀನಾದಲ್ಲಿ ಬಡವರ ಸಂಖ್ಯೆ 75 ಕೋಟಿಯಿಂದ ಕೇವಲ 1 ಕೋಟಿಗೆ ಇಳಿದಿದೆ ಎಂದು ವಿಶ್ವಬ್ಯಾಂಕಿನ ಮಾನದಂಡವೇ ಹೇಳುತ್ತದೆ.

ಈ ಪೈಕಿ, ಒಂದು ಪ್ರಮುಖ ಉದಾಹರಣೆಯೆಂದರೆ, ನವ–ಉದಾರವಾದಿ ನೀತಿಗಳ ಅನುಸರಣೆಯ ಕಾರಣದಿಂದಾಗಿ ಆರೋಗ್ಯ ರಕ್ಷಣೆ ಮತ್ತು ಶಿಕ್ಷಣ ವಲಯಗಳ ಸೇವೆಗಳ ಖಾಸಗೀಕರಣ. ಮೂಲ ವರ್ಷದ ಮತ್ತು ಪ್ರಸಕ್ತ ವರ್ಷದ ನಡುವೆ, ಸರ್ಕಾರಿ ಆಸ್ಪತ್ರೆಗಳಲ್ಲಿ ಶಸ್ತ್ರಚಿಕಿತ್ಸೆ ಮತ್ತು ಇತರ ಚಿಕಿತ್ಸೆಗಳ ದರಗಳಲ್ಲಿ ಯಾವುದೇ ಬದಲಾವಣೆ ಇಲ್ಲದೇ ಇರಬಹುದು. ಹಾಗಾಗಿ, ಬೆಲೆ ಸೂಚ್ಯಂಕದಲ್ಲಿ ಆರೋಗ್ಯ ರಕ್ಷಣೆಯ ವೆಚ್ಚವು ಬದಲಾಗದೆ ಉಳಿಯಬಹುದು. ಆದರೆ, ಸರ್ಕಾರಿ ಆರೋಗ್ಯ ಸೇವೆಗಳ ಅಲಭ್ಯತೆಯ ಕಾರಣದಿಂದಾಗಿ ಹೆಚ್ಚು ಹೆಚ್ಚು ಜನರು ದುಬಾರಿಯ ಆರೋಗ್ಯ ಸೇವಾ ಸೌಲಭ್ಯಗಳನ್ನು ಒದಗಿಸುವ ಖಾಸಗಿ ವಲಯದತ್ತ ತಳ್ಳಲ್ಪಡುತ್ತಾರೆ. ಹಾಗಾಗಿ, ಆರೋಗ್ಯ ರಕ್ಷಣೆಯ ವೆಚ್ಚ ಹೆಚ್ಚುತ್ತದೆ. ಆದರೆ, ಬೆಲೆ ಸೂಚ್ಯಂಕದ ಚಲನೆಯು ಆರೋಗ್ಯ ವೆಚ್ಚದ ಏರಿಕೆಯನ್ನು ಕಡಿಮೆ ಮಟ್ಟದಲ್ಲಿಯೇ ತೋರಿಸುತ್ತದೆ. ಹಾಗಾಗಿ, ಅದೇ ರೀತಿಯಲ್ಲಿ ಮತ್ತು ಅದಕ್ಕೆ ಸಮನಾದ ಐಪಿಎಲ್‌ಅನ್ನು ಯಾವುದೇ ಕಾಲಾವಧಿಯಲ್ಲಿ ನೋಡಿದಾಗಲೂ, ಸೂಚ್ಯಂಕವು ನಿಜಕ್ಕೂ ಎಷ್ಟು ಪ್ರಮಾಣದಲ್ಲಿ ಜೀವನ ವೆಚ್ಚ ಏರಿಕೆಯಾಗುತ್ತದೆಯೋ ಅದಕ್ಕಿಂತ ಕಡಿಮೆ ಪ್ರಮಾಣವನ್ನು ತೋರಿಸುತ್ತದೆ. ಆದ್ದರಿಂದ, ಬಡತನವು ಕಾಲಕ್ರಮದಲ್ಲಿ ಕಡಿಮೆಯಾಗಿದೆ ಎಂಬುದು ಉತ್ಪ್ರೇಕ್ಷೆಯಾಗುತ್ತದೆ. (ಅಥವಾ ಕಾಲಕ್ರಮದಲ್ಲಿ ಬಡತನ ಹೆಚ್ಚಿರುವುದನ್ನು ಕಡಿಮೆಯಾಗಿ ತೋರಿಸುತ್ತದೆ). ಆದ್ದರಿಂದ ಈ ಅಂಕಿ ಸಂಖ್ಯೆಗಳು ಸೂಚಿಸುವ ಬಡತನದ ಇಳಿಕೆಯು ತಪ್ಪಾಗಿದೆ.

ಭಾರತದಲ್ಲಿ ಮೂಲತಃ ಗ್ರಾಮೀಣ ವ್ಯಕ್ತಿಯು ದಿನಕ್ಕೆ 2200 ಕ್ಯಾಲೋರಿಗಳನ್ನು ಮತ್ತು ನಗರ ಪ್ರದೇಶದ ವ್ಯಕ್ತಿಯು 2100 ಕ್ಯಾಲರಿಗಳನ್ನು ಬಳಸಲು ತಗಲುವ ವೆಚ್ಚದ ಮಟ್ಟದಲ್ಲಿ ಬಡತನ ರೇಖೆಯನ್ನು ವ್ಯಾಖ್ಯಾನಿಸಲಾಗಿತ್ತು. ಈ ದೃಷ್ಟಿಯಿಂದ ಪರಿಗಣಿಸಿದರೆ, ಈಗ ಬಡತನ ರೇಖೆ ನಿಜವಾಗಿ ಇರಬೇಕಾಗಿರುವುದಕ್ಕಿಂತ ಕೆಳ ಮಟ್ಟದಲ್ಲಿ ಬಿಂಬಿತವಾಗುತ್ತಿದೆ. ಹಾಗಾಗಿ, ಬಡತನದಲ್ಲಿರುವವರ ಸಂಖ್ಯೆಯ ಅಂದಾಜುಗಳು ನಿಜವಾದ ಸಂಖ್ಯೆಗಿಂತ ಕೆಳ ಮಟ್ಟದಲ್ಲಿಯೇ ಇರುತ್ತವೆ. ಇದು, ಬಡತನ ಇಳಿಕೆಯಾಗಿದೆ ಎಂಬ ಒಂದು ಹುಸಿ ಚಿತ್ರಣವನ್ನು ಮೂಡಿಸುತ್ತದೆ. ಈ ಸಮಸ್ಯೆಯು ಭಾರತಕ್ಕೆ ಮಾತ್ರ ಸೀಮಿತವಲ್ಲ; ಅಗತ್ಯ ಸೇವೆಗಳ ಖಾಸಗೀಕರಣದ ಕಾರಣದಿಂದಾಗಿ ನವ ಉದಾರವಾದದ ಅಡಿಯಲ್ಲಿ ಇದೊಂದು ಜಾಗತಿಕ ವಿದ್ಯಮಾನವೇ ಆಗಿಬಿಟ್ಟಿದೆ.

ಜಾಗತಿಕ ಬಡತನದಲ್ಲಿ ಹೇಳಿಕೊಳ್ಳುತ್ತಿರುವ ಮಟ್ಟದಲ್ಲಿ ಇಳಿಕೆಯಾಗಿದೆ ಎಂಬ ಸಂಗತಿಯು ತಪ್ಪು ಎನ್ನಲು ಎರಡನೆಯ ಕಾರಣವೆಂದರೆ, 2011ರ ನಂತರ ಸಂಭವಿಸಿದ ಪ್ರಾಥಮಿಕ/ಮೂಲ ಸರಕುಗಳ ಬೆಲೆ ಕುಸಿತ. 2011ರ ಏಪ್ರಿಲ್ ಮತ್ತು 2019ರ ಡಿಸೆಂಬರ್ ನಡುವಿನ ಅವಧಿಯಲ್ಲಿ, ಐಎಂಎಫ್ ರಚಿಸಿರುವ ಎಲ್ಲ ಸರಕುಗಳ ಬೆಲೆ ಸೂಚ್ಯಂಕದಲ್ಲಿ ಶೇ.38ರಷ್ಟು ಕುಸಿತವಾಗಿದೆ. ಈ ಅಂಶವು ಮೂರನೇ ಜಗತ್ತಿನ ದೊಡ್ಡ ಸಂಖ್ಯೆಯ ಜನರ ಜೀವನ ಮಟ್ಟವನ್ನು ಹದಗೆಡಿಸಿರಲೇಬೇಕು. ಈ ಬೆಲೆ ಕುಸಿತದ ಸಂಗತಿಯು ಜನರ ಅನುಭೋಗದಲ್ಲಿ ಪ್ರತಿಫಲನಗೊಳ್ಳದಿದ್ದರೆ, ಅಂದರೆ ಅವರ ಅನುಭೋಗದ ಪ್ರಮಾಣದಲ್ಲಿಯೂ ಕುಸಿತ ಕಾಣ ಬರದಿದ್ದರೆ, ಅದಕ್ಕೆ ಕಾರಣ, ಅವರು ಒಂದು ನಿರ್ದಿಷ್ಟ ಮಟ್ಟದಲ್ಲಿ ತಮ್ಮ ಬಳಕೆಯ ಮಟ್ಟವನ್ನು ಕಾಪಾಡಿಕೊಳ್ಳುವ ಸಲುವಾಗಿ ಹೆಚ್ಚು ಸಾಲ ಮಾಡಬೇಕಾಗಿ ಬಂದಿದೆ ಎಂಬುದಿರಬಹುದು. ಸಾಲ

ಪುಟ 14 ನೋಡಿ

ಸಾಮಾಜಿಕ ಕಳಕಳಿಯ ಹಿರಿಯ ವಿಜ್ಞಾನಿ ವೈ.ಸಿ.ಎಸ್ ಇನ್ನಿಲ್ಲ !



ವೈಜ್ಞಾನಿಕ ಮನೋಧರ್ಮದ ಪ್ರಸಾರಕ್ಕಾಗಿ ಕೊನೆಯ ವರೆಗೂ ದುಡಿದ ಅತೀವ ಸಾಮಾಜಿಕ ಕಳಕಳಿಯಿದ್ದ ಹಿರಿಯ ವಿಜ್ಞಾನಿ ವೈಸಿ.ಸುಬ್ಬಮಣ್ಯ ನಿನ್ನೆ ರಾತ್ರಿ ಬೆಂಗಳೂರಿನ ಜಯನಗರದ ತಮ್ಮ ಮನೆಯಲ್ಲಿ ನಿದ್ದೆಯಲ್ಲೇ ಚಿರನಿದ್ರೆಗೆ ಜಾರಿದ್ದಾರೆ ಎಂದು ತಿಳಿದು ಬಂದಿದೆ. ವಿಜ್ಞಾನ ಚಳುವಳಿ, ಎಡ ಚಳುವಳಿ, ವಿಜ್ಞಾನ–ತಂತ್ರಜ್ಞಾನದ ಕ್ಷೇತ್ರದಲ್ಲಿ ಅವರ ಜತೆ ದುಡಿದ ಮಾರ್ಗದರ್ಶನ ಪಡೆದ ಅವರ ಅಪಾರ ಸಂಖ್ಯೆಯ ಅಭಿಮಾನಿಗಳ ಜತೆ ವೈ.ಸಿ.ಎಸ್ ಅವರಿಗೆ ಜನಶಕ್ತಿ ತನ್ನ ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ.


95 ವರ್ಷದ ತುಂಬು ಜೀವನ ನಡೆಸಿದ ವೈ.ಸಿ.ಎಸ್ 1940–50ರ ದಶಕದಲ್ಲಿ ವಿಜ್ಞಾನ–ತಂತ್ರಜ್ಞಾನ ಶಿಕ್ಷಣ ಪಡೆದು ದೇಶದ ಕೈಗಾರಿಕೀಕರಣಕ್ಕಾಗಿ ದುಡಿದ ಮೊದಲ ಪೀಳಿಗೆಯ ವಿಜ್ಞಾನಿ–ತಂತ್ರಜ್ಞಾನಿ. 1947ರಲ್ಲಿ ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎಸ್.ಸಿ (ಕೆಮಿಸ್ಟ್ರಿ ಆನರ್ಸ್), 1948–51 ಅವಧಿಯಲ್ಲಿ ಪ್ರತಿಷ್ಠಿತ ಐ.ಐ.ಎಸ್.ಸಿ (ಭಾರತ ವಿಜ್ಞಾನ ಸಂಸ್ಥೆ) ಯಲ್ಲಿ ಮೆಟಲರ್ಜಿ (ಲೋಹಶಾಸ್ತ್ರ) ಇಂಜಿನೀಯರಿಂಗ್ ಉನ್ನತ ಶಿಕ್ಷಣ ಪಡೆದರು. ಅವರು ತಮ್ಮ ಜೀವನವೀಡಿ ರಕ್ಷಣಾ ಇಲಾಖೆಯ ಸಾರ್ವಜನಿಕ ಕ್ಷೇತ್ರದ ಉದ್ಯಮವಾಗಿದ್ದ ಶಸ್ತ್ರಾಸ್ತ್ರ ತಯಾರಿಕೆ ಮಾಡುವ ದೇಶದ ಎಲ್ಲೆಡೆ ಹರಡಿರುವ ಹಲವು ಆರ್ಡಿನೆನ್ಸ್ ಕಾರ್ಖಾನೆಗಳಲ್ಲಿ ಲೋಹಶಾಸ್ತ್ರಜ್ಞರಾಗಿ ಸೇವೆ ಸಲ್ಲಿಸಿದ್ದರು. ಅವರು ಆರ್ಡಿನೆನ್ಸ್ ಕಾರ್ಖಾನೆಯ ಸೇವೆಯಿಂದ ನಿವೃತ್ತರಾಗುವಾಗ ಡಿ.ಡಿ.ಜಿ.(ಡೆಪ್ಯುಟಿ ಡೈರೆಕ್ಟರ್ ಜನರಲ್) ಹುದ್ದೆಯಲ್ಲಿದ್ದರು.

ನಿವೃತ್ತರಾದ ಮೇಲೆ ಬೆಂಗಳೂರಿಗೆ ವಾಪಸು ಬಂದು ನೆಲೆಸಿದ ಅವರು ಕಳೆದ ಹಲವು ದಶಕಗಳಿಂದ ವಿಜ್ಞಾನ ಚಳುವಳಿಯಲ್ಲಿ ಅದರಲ್ಲೂ ವಿಶೇಷವಾಗಿ ಬಿ.ಜಿ.ವಿ.ಎಸ್. ನ ಚಟುಟವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರು. ವೈಜ್ಞಾನಿಕ ಮನೋಧರ್ಮದ ವ್ಯಾಪಕ ಪ್ರಸಾರದ ಕುರಿತು ಅತೀವ ಕಾಳಜಿ ಹೊಂದಿದ್ದ ಅವರು ಕೊನೆಯವರೆಗೂ ಅದಕ್ಕಾಗಿ ದುಡಿದರು. ಬಿ.ಜಿ.ವಿ.ಎಸ್. ನಲ್ಲಿ ದುಡಿಯುತ್ತಿದ್ದವರಿಗೆ ಮಾರ್ಗದರ್ಶನ ಮಾಡುತ್ತಿದ್ದರು.

1940ರ ದಶಕದಿಂದಲೇ ಸ್ವಾತಂತ್ರ್ಯ ಮತ್ತು ಎಡ ವಿದ್ಯಾರ್ಥಿ (ಎ.ಐ.ಎಸ್.ಎಫ್.) ಚಳುವಳಿಯಿಂದ ಪ್ರಭಾವಿತರಾಗಿದ್ದ ಅವರು ಜೀವನ ಪರ್ಯಂತ ಅತೀವ ಸಾಮಾಜಿಕ ಕಾಳಜಿ ಹೊಂದಿದ್ದು, ಎಡಪಂಥೀಯ ರಾಜಕಾರಣದತ್ತ ಒಲವು ಹೊಂದಿದ್ದರು. “ನನ್ನ ಜೀವನದಲ್ಲಿ ಎರಡು ಘಟನೆಗಳು ಅಳು ತರಿಸಿದ್ದವು, ದಿಕ್ಕು ತೋಚದಂತೆ ಮಾಡಿದ್ದವು. 1948 ರಲ್ಲಿ ನಡೆದ ಗಾಂಧಿ ಹತ್ಯೆ ಮತ್ತು ಬಾಬ್ರಿ ಮಸೀದಿ ಧ್ವಂಸ ? ಆ ಎರಡು ಘಟನೆಗಳು” ಎಂಬ ಅವರ ಮಾತು ಅವರ ಕಾಳಜಿಯನ್ನು ಬಿಂಬಿಸುತ್ತದೆ. ಅವರು ಕಾಳಜಿ ಬರಿಯ ಬಾಯಿಮಾತಿನದಾಗಿರಲಿಲ್ಲ. ಕಳೆದ ಎರಡು ದಶಕಗಳಿಂದ ಅವರು ಸಿಪಿಐ(ಎಂ) ಸದಸ್ಯರಾಗಿದ್ದು ಎಲ್ಲ ಸಾಮಾಜಿಕ–ರಾಜಕೀಯ ಚಳುವಳಿಗಳಲ್ಲಿ ಮುಂಚೂಣೀಯಲ್ಲಿದ್ದು ಭಾಗವಹಿಸುತ್ತಿದ್ದರು. ತೀವ್ರ ಅನಾರೋಗ್ಯದ ಮಧ್ಯೆಯು ಇತ್ತೀಚಿನ ಸಿಎಎ–ವಿರೋಧಿ ಹೋರಾಟದಲ್ಲೂ ಭಾಗವಹಿಸಿದ್ದರು.

ವಿಜ್ಞಾನ ಚಳುವಳಿ, ಎಡ ಚಳುವಳಿ, ವಿಜ್ಞಾನ–ತಂತ್ರಜ್ಞಾನದ ಕ್ಷೇತ್ರದಲ್ಲಿ ಅವರ ಜತೆ ದುಡಿದ ಮಾರ್ಗದರ್ಶನ ಪಡೆದ ಅವರ ಅಪಾರ ಸಂಖ್ಯೆಯ ಅಭಿಮಾನಿಗಳು ಅವರಿಗೆ ಶ್ರದ್ಧಾಂಜಲಿ ಅರ್ಪಿಸಿದ್ದಾರೆ.

ಸಾರ್ವಜನಿಕ ಆರೋಗ್ಯ ಕ್ಷೇತ್ರವನ್ನು ಬಲಪಡಿಸಲು ಜನವಾದಿ ಮಹಿಳಾ ಸಂಘಟನೆಯಿಂದ ಪ್ರತಿಭಟನೆ



ಸಾರ್ವಜನಿಕ ಅರೋಗ್ಯ ಕ್ಷೇತ್ರವನ್ನು ಬಲಪಡಿಸಲು ಒತ್ತಾಯಿಸಿ ಜುಲೈ 23 ನ್ನು ರಾಷ್ಟ್ರೀಯ ಬೇಡಿಕೆ ದಿನವನ್ನಾಗಿ ಆಚರಿಸಲಾಗಿದೆ ಎಂದು ಜನವಾದಿ ಮಹಿಳಾ ಸಂಘಟನೆಯ ರಾಜ್ಯಾಧ್ಯಕ್ಷರಾದ ದೇವಿಯವರು ತಿಳಿಸಿದ್ದಾರೆ.

ಕೋವಿಡ್ 19 ಸೋಂಕು ಹರಡುತ್ತಿರುವ ಹಿನ್ನೆಲೆಯಲ್ಲಿ ಮತ್ತು ಅದರಿಂದ ಜನಸಾಮಾನ್ಯರು ಅದರಲ್ಲಿಯೂ ಮಹಿಳೆಯರು ತೀವ್ರ ತೊಂದರೆಗೆ ಒಳಗಾಗಿದ್ದಾರೆ.

ಕೊವಿಡ್ ಬಾಧೆಯ ಜೊತೆಗೆ ಕೊವಿಡೇತರ ಸಮಸ್ಯೆಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿದೆ.

ಈಗ ಸರಕಾರವು ಗಂಭೀರವಾದ ಕ್ರಮಗಳನ್ನು ಕೈಗೊಳ್ಳದಿದ್ದರೆ ಬಹು ಸಂಖ್ಯಾತ ಮಹಿಳೆಯರು ತೀವ್ರವಾದ ಆರೋಗ್ಯ ಸಮಸ್ಯೆಗಳಿಗೆ ಸಿಲುಕುತ್ತಾರೆ. ಇದಕ್ಕೆ ಸರಕಾರದ ವೈಫಲ್ಯವೆ ಕಾರಣ ಎಂದು ದೇವಿಯವರು ಆಕ್ರೋಶ ವ್ಯಕ್ತ ಪಡಿಸಿದ್ದಾರೆ.

ಕೋವಿಡ್ ಚಿಕಿತ್ಸೆಗಳನ್ನು ಉಚಿತವಾಗಿ ಸಾರ್ವತ್ರಿಕವಾಗಿ ನೀಡಬೇಕು. ಕೋವಿಡೇತರ ಅರೋಗ್ಯದ ಸಮಸ್ಯೆಗಳ ಚಿಕಿತ್ಸೆಗೆ ಪರ್ಯಾಯ ವ್ಯವಸ್ಥೆ ಮಾಡಬೇಕು. ಕೋವಿಡ್ ಚಿಕಿತ್ಸೆ ನಿರಾಕರಿಸುವ ಖಾಸಗಿ ಆಸ್ಪತ್ರೆ ಗಳ ವಿರುದ್ಧ ಕ್ರಮಕೈಗೊಳ್ಳಬೇಕು. ಪ್ರದೇಶವಾರು ವೈದ್ಯಕೀಯ ಸೌಲಭ್ಯಕ್ಕಾಗಿ ಸಂಚಾರಿ ಆರೋಗ್ಯ ವ್ಯವಸ್ಥೆ ಕಲ್ಪಿಸಬೇಕು. ವೈದ್ಯಕೀಯ ಸಿಬ್ಬಂದಿಗಳು ಮತ್ತು ಮುಂಚೂಣಿಯ ಕೋವಿಡ್ ವಾರಿಯರ್ಸ್ ಗಳಿಗೆ ಸುರಕ್ಷ ಸೌಲಭ್ಯ ನೀಡಬೇಕು. ಆಶಾ ಅಂಗನವಾಡಿ ಸಿಬ್ಬಂದಿಗಳಿಗೆ ಸೂಕ್ತ ವ್ಯವಸ್ಥೆ ಮತ್ತು ವಿಶೇಷ ವೇತನ ನೀಡಬೇಕು. ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ವೈದ್ಯಕೀಯ ಸಿಬ್ಬಂದಿ ನೇಮಕ ಮಾಡಬೇಕು. ಗರ್ಭಿಣಿ ಬಾಣಂತಿಯರು ಮಕ್ಕಳ ಪಾಲನೆಗೆ ಅಗತ್ಯವಾದ ಮಾತೃಶ್ರೀ ಯೋಜನೆ ಮುಂದುವರೆಸಬೇಕು. ಮಹಿಳೆಯರ ಹೆರಿಗೆ ಸಂಬಂಧಿತ ಸಮಸ್ಯೆಗಳಿಗೆ ಪ್ರತ್ಯೇಕ ಅಂಬ್ಯಲೆನ್ಸ್ ವ್ಯವಸ್ಥೆ ಮಾಡಬೇಕು. ಸುರಕ್ಷಿತ ಸಂಚಾರಿ ಕೋವಿಡ್ ಟೆಸ್ಟ್ ವ್ಯವಸ್ಥೆ ಮಾಡಬೇಕು. ಸುರಕ್ಷಾ ಕ್ರಮಗಳನ್ನು ಅನುಸರಿಸಿ ಪೌಷ್ಟಿಕ ಆಹಾರ ಪೂರೈಕೆಯ ಮೂಲಕ ರೋಗ ನಿರೋಧಕ ಶಕ್ತಿ ಹೆಚ್ಚಿಸಲು ಮುಂದಾಗಬೇಕು ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಕಾರ್ಯದರ್ಶಿ ಗೌರಮ್ಮ ತಿಳಿಸಿದ್ದಾರೆ.

ಜಾಗತಿಕ ಬಡತನ ಇಳಿಕೆಯೆಂಬ ಸೋಗು

ಪುಟ 13 ರಿಂದ

ಮಾಡುವ ಮೂಲಕ ಜನರು ತಮ್ಮ ಅನುಭೋಗದ ಮಟ್ಟವನ್ನು ಹೇಗೋ ಕಾಪಾಡಿಕೊಂಡಿದ್ದರೆ, ಅಂತಹ ಸನ್ನಿವೇಶದಲ್ಲಿ ಬಡತನ ಇಳಿಮುಖವಾಗಿದೆ ಎಂದು ಹೇಳುವುದು ಅಸಂಬದ್ಧವಾಗುತ್ತದೆ.

ಮೂರನೆಯ ಕಾರಣವು ಎರಡನೆಯದನ್ನೇ ಹೋಲುತ್ತದೆ. ಅಂದರೆ, ಜಾಗತಿಕ ಬಂಡವಾಳಶಾಹಿಯ ಬಿಕ್ಕಟ್ಟಿನ ತೀವ್ರತೆಯ ಕಾರಣದಿಂದಾಗಿ ಮುಖ್ಯವಾಗಿ ನಿರುದ್ಯೋಗ ಇತ್ತೀಚೆಗೆ ಉಲ್ಬಣಿಸಿದೆ ಮತ್ತು ಅದರ ಜೊತೆಯಲ್ಲಿ ಅನಿವಾರ್ಯವಾಗಿ ತಗುಲಿದ ಇನ್ನೊಂದು ಪರಿಣಾಮವಾಗಿ ಪ್ರಾಥಮಿಕ/ಮೂಲ ಸರಕುಗಳ ಬೆಲೆ ಕುಸಿತವಾಗಿದೆ. ನಿರುದ್ಯೋಗ ಹೆಚ್ಚಿದ ಕಾರಣದಿಂದಾಗಿ, ಬಳಕೆಯ/ಅನುಭೋಗದ ಮಟ್ಟವು ಇಳಿದಿರಲೇಬೇಕು ಅಥವಾ ಅದರ ಮಟ್ಟವನ್ನು ಕಾಪಾಡಿಕೊಳ್ಳುವ ಸಲುವಾಗಿ ಜನರು ಹೆಚ್ಚು ಸಾಲ ಮಾಡಿರಬಹುದು. ಉದಾಹರಣೆಯಾಗಿ ಹೇಳುವುದಾದರೆ, ಕೊರೊನಾ ಸಾಂಕ್ರಾಮಿಕವು ಹರಡುವ ಮುನ್ನವೇ ಭಾರತದಲ್ಲಿ ನಿರುದ್ಯೋಗವು ಕಳೆದ 45 ವರ್ಷಗಳಲ್ಲಿಯೇ ಅತ್ಯಧಿಕವಾಗಿತ್ತು.

ಈ ಎಲ್ಲಾ ಅಂಶಗಳೂ ಭಾರತದಲ್ಲಿ ಬಳಕೆಯ ಮಟ್ಟದ ಮೇಲೆ ತೀವ್ರ ಪ್ರತಿಕೂಲ ಪರಿಣಾಮ ಉಂಟುಮಾಡಿವೆ ಎಂಬುದು ಬಳಕೆದಾರರ ವೆಚ್ಚಕ್ಕೆ ಸಂಬಂಧಿಸಿದ 2017–18ರ ರಾಷ್ಟ್ರೀಯ ಮಾದರಿ ಸಮೀಕ್ಷೆಯ ದತ್ತಾಂಶದಿಂದ ಸ್ಪಷ್ಟವಾಗುತ್ತದೆ. ಈ ದತ್ತಾಂಶವು ಅದೆಷ್ಟು ಆಘಾತಕಾರಿಯಾಗಿತ್ತು ಎಂದರೆ, ಅದನ್ನು ಸಂಪೂರ್ಣವಾಗಿ ಬಚ್ಚಿಡಲು ಮೋದಿ ಸರ್ಕಾರವು ನಿರ್ಧರಿಸಿತ್ತು. ಈ ದತ್ತಾಂಶದ ಪ್ರಕಾರ, ಗ್ರಾಮೀಣ ಭಾರತದಲ್ಲಿ 2017–18ರಲ್ಲಿ ತಲಾ ಬಳಕೆ ವೆಚ್ಚವು 2011–12ರ ಸರ್ವೆಗೆ ಹೋಲಿಸಿದರೆ ಶೇ.9ರಷ್ಟು ಕಡಿಮೆಯಾಗಿತ್ತು.

ಇಂತಹ ಸನ್ನಿವೇಶದಲ್ಲಿ, ಚೀನಾ ಮತ್ತು ಪೂರ್ವ ಏಷ್ಯಾದ ದೇಶಗಳ ಹೊರತಾಗಿ, ಬಡವರ ಸಂಖ್ಯೆ ಇಳಿದಿದೆ ಎಂದು ಹೇಳುವುದು ಅಸಂಬದ್ಧವಾಗಿದೆ. ಬಡತನವನ್ನು ದೃಢೀಕರಿಸುವ ಪೌಷ್ಟಿಕತೆಯ ದತ್ತಾಂಶಗಳು ಲಭ್ಯವಿಲ್ಲದಿದ್ದರೂ ಸಹ ಇದು ಅಸಂಬದ್ಧವಾಗಿದೆ.

ಭಾರತೀಯ ಕ್ರಾಂತಿಯ ಹಾದಿಗಾಗಿ ಹುಡುಕಾಟ

ಪುಟ 11 ರಿಂದ

ಕುಮಾರ್ ಘೋಷ್ ಮತ್ತು ಎಸ್.ವಿ.ಘಾಟೆ ಅದರ ನೇತೃತ್ವದಲ್ಲಿದ್ದರು. ಪಕ್ಷದ ಸಾಮಾನ್ಯ ಕಾರ್ಯಕರ್ತರಲ್ಲಿ ಗೊಂದಲ ಹರಡಲು ತಮಗಿದ್ದ ವಿಶೇಷಾಧಿಕಾರವನ್ನು ಬಳಸಿದರು. ಭೂಗತರಾಗಿದ್ದ ಪಕ್ಷದ ಕೇಂದ್ರ ನಾಯಕತ್ವ, ತೆಲಂಗಾಣ ಸಶಸ್ತ್ರ ಹೋರಾಟದ ಹಾಗೂ ಇತರ ರೈತ ಚಳುವಳಿಯ ಮುಖಂಡರು ಭೂಗತರಾಗಿದ್ದುದು ಅವರಿಗೆ ಅಡಚಣೆಯಾಯಿತು. ಪುನಃ, ಪಕ್ಷದ ಆಂತರಿಕ ಸನ್ನಿವೇಶ ಹದಗೆಟ್ಟಿತು ಮತ್ತು ಪಕ್ಷವು ವಿವಿಧ ಪ್ರವೃತ್ತಿ ಹಾಗೂ ಗುಂಪುಗಳಾಗಿ ಒಡೆದು ಹೋಗಿರುವಂತೆಯೇ ಆಯಿತು.

ಈ ಎಲ್ಲಾ ಅನುಭವಗಳ ಮೂಲಕ, ಎಡಸಾಹಸವಾದದ ಖಡ್ಗದೊಂದಿಗೆ ಬಲ ಪರಿಷ್ಕರಣವಾದವನ್ನು ಎದುರಿಸುವುದು ಅಥವ ಪರಿಷ್ಕರಣವಾದದ ಮೂಲಕ ಎಡಸಾಹಸವಾದವನ್ನು ಎದುರಿಸುವುದು ಪಕ್ಷದೊಳಗಿನ ಈ ಎರಡೂ ತಪ್ಪು ಪ್ರವೃತ್ತಿಗಳನ್ನು ತೊಡೆದುಹಾಕುವುದರಲ್ಲಿ ನೆರವಾಗುವುದಿಲ್ಲ ಎಂದು ಪಕ್ಷವು ಬಹಳ ಕಷ್ಟದಿಂದ ಕಂಡುಕೊಂಡಿತು.

ಪಕ್ಷದೊಳಗಿನ ಈ ಗಂಭೀರ ರಾಜಕೀಯ–ಸೈದ್ಧಾಂತಿಕ ಅವ್ಯವಸ್ಥೆಯನ್ನು ಪರಿಶೀಲಿಸಲು ಸೋವಿಯೆತ್ ಸಂಘದ ಕಮ್ಯುನಿಸ್ಟ್ ಪಕ್ಷ(ಸಿಪಿಎಸ್‌ಯು) ಮತ್ತು ಕಾಮ್ರೇಡ್ ಸ್ಟಾಲಿನ್ ಅವರ ಸೌಹಾರ್ದ ಸಹಾಯವನ್ನು ಪಡೆಯಲು ತೀರ್ಮಾನಸಲಾಯಿತು. ಈ ಪ್ರಸ್ತಾಪಕ್ಕೆ ಸಿ.ಪಿ.ಎಸ್.ಯು. ನಾಯಕತ್ವ ಕೂಡಲೇ ಸಮ್ಮತಿಸಿತು. ಸಿ.ರಾಜೇಶ್ವರ ರಾವ್, ಎಂ.ಬಸವಪುನ್ನಯ್ಯ, ಅಜಯ್ ಕುಮಾರ್ ಘೋಷ್ ಮತ್ತು ಎಸ್.ಎ.ಡಾಂಗೆ ಅವರನ್ನೊಳಗೊಂಡ ನಿಯೋಗವನ್ನು ಸಿ.ಪಿ.ಎಸ್.ಯು ನಾಯಕತ್ವ ಮತ್ತು ಕಾಂ.ಸ್ಟಾಲಿನ್ ಅವರೊಂದಿಗೆ ಚರ್ಚಿಸಲು ನೇಮಿಸಲಾಯಿತು; ಕಮ್ಯುನಿಸ್ಟ್ ಪಕ್ಷದೊಳಗಿನ ಎಲ್ಲಾ ವಿವಾದಾತ್ಮಕ ಹಾಗೂ ಚರ್ಚಿತ ವಿಷಯಗಳ ಬಗ್ಗೆ ಸ್ಪಷ್ಟೀಕರಣ ಕೋರಲಾಯಿತು. ಈ ಚರ್ಚೆಗಾಗಿ ಸಿ.ಪಿ.ಎಸ್.ಯು.ನ ಕೇಂದ್ರ ಸಮಿತಿಯು ಸ್ಟಾಲಿನ್ ನೇತೃತ್ವದಲ್ಲಿ ಮೊಲೊಟೊವ್, ಮಲೆಂಕೊವ್ ಮತ್ತು ಸುಸ್ಲೊವ್ ಅವರನ್ನೊಳಗೊಂಡ ಒಂದು ಆಯೋಗವನ್ನು ನೇಮಿಸಿತು.

ಸಂಕ್ಷಿಪ್ತವಾಗಿ, ಪಕ್ಷದ ಕಾರ್ಯಕ್ರಮ ಮತ್ತು ಸಿದ್ಧಾಂತದ ಕಾರ್ಯತಂತ್ರಾತ್ಮಕ ಪ್ರಶ್ನೆಗಳು ಹಾಗೂ ಅವುಗಳನ್ನು ಒಂದು ನಿರ್ದಿಷ್ಟ ಸನ್ನಿವೇಶಕ್ಕೆ ನಿರ್ದಿಷ್ಟವಾಗಿ ಅಳವಡಿಸುವ ಮತ್ತು ಅದೇ ರೀತಿಯ ವಿಷಯಗಳಿಗೆ ಸಂಬಂಧಪಟ್ಟವುಗಳನ್ನು ಪ್ರಧಾನವಾಗಿ ಚರ್ಚೆಗೆ ತೆಗೆದುಕೊಳ್ಳಲಾಯಿತು. ಭಾರತೀಯ ಕಮ್ಯುನಿಸ್ಟರೇ ದೇಶದೊಳಗಿನ ನಿರ್ದಿಷ್ಟ ಸನ್ನಿವೇಶದ ವಿಶ್ಲೇಷಣೆಯ ಕಾರ್ಯವನ್ನು ಮಾಡಿ ಮಾರ್ಕ್ಸ್‌ವಾದ–ಲೆನಿನ್‌ವಾದವನ್ನು ಅನ್ವಯಿಸಬೇಕು; ಭಾರತೀಯ ಕಮ್ಯುನಿಸ್ಟರಿಗೆ ಆ ವಿಚಾರದಲ್ಲಿ ಸ್ಪಷ್ಟತೆಯನ್ನು ಪಡೆಯಲು ಸಹಾಯ ಮಾಡುವುದಷ್ಟೇ ತಮ್ಮ ಕೆಲಸ ಎಂದು ಸ್ಟಾಲಿನ್ ಮತ್ತು ಸಿ.ಪಿ.ಎಸ್.ಯು. ಸ್ಪಷ್ಟವಾಗಿ ಹೇಳಿದರು.

1951ರ ಮೇ ತಿಂಗಳಿನಲ್ಲಿ, ಪಕ್ಷದ ಕೇಂದ್ರ ಸಮಿತಿಯು ಸಭೆ ಸೇರಿತು ಮತ್ತು ಈ ಚರ್ಚೆಗಳ ಬಗ್ಗೆ ವಿಷದವಾಗಿ ತಿಳಿಸಲಾಯಿತು. ಈ ಚರ್ಚೆಗಳ ಆಧಾರದಲ್ಲಿ, ಕೇಂದ್ರ ಸಮಿತಿಯು ಕೆಲವು ನಿರ್ಧಾರಗಳಿಗೆ ಬಂತು ಮತ್ತು ಅವುಗಳನ್ನು, ಏಪ್ರಿಲ್ 1951ರಲ್ಲಿ ಪ್ರಕಟವಾದ ಕಮ್ಯುನಿಸ್ಟ್ ಪಕ್ಷದ ಕರಡು ಕಾರ್ಯಕ್ರಮದಲ್ಲಿ ಸೇರಿಸಲಾಯಿತು; ತದನಂತರದಲ್ಲಿ, ಅವುಗಳನ್ನು ತಿದ್ದುಪಡಿ ಮಾಡಿ ಅಕ್ಟೋಬರ್ 1951ರಲ್ಲಿ ನಡೆದ ಪಕ್ಷದ ಅಖಿಲ ಭಾರತ ಸಮ್ಮೇಳನದಲ್ಲಿ ಮತ್ತು ನಂತರ 1953ರಲ್ಲಿ ನಡೆದ ಪಕ್ಷದ ಮೂರನೇ ಮಹಾಧಿವೇಶನ(ಮಧುರೈ)ದಲ್ಲಿ ಅಂಗೀಕರಿಸಲಾಯಿತು. ಅನುಸರಿಸಬೇಕಾದ ಭಾರತೀಯ ಕ್ರಾಂತಿಯ ಹಾದಿ ಮತ್ತು ಸಿದ್ಧಾಂತ ಹಾಗೂ ಕಾರ್ಯತಂತ್ರಗಳ ನಿಯಮಗಳನ್ನು ಸವಿಸ್ತಾರವಾಗಿ ವಿಶದಪಡಿಸಿದ್ದ ‘ನೀತಿ ನಿರೂಪಣೆ’(‘ಸ್ಟೇಟ್ ಮೆಂಟ್ ಆಫ್ ಪಾಲಿಸಿ’)ಯನ್ನು 1951ರ ಅಖಿಲ ಭಾರತ ಸಮ್ಮೇಳನದಲ್ಲಿ ಅಂಗೀಕರಿಸಲಾಯಿತು. ಭಾರತೀಯ ಕ್ರಾಂತಿಯ ಹಾದಿಯು ರಷ್ಯನ್ ಹಾದಿ ಅಥವಾ ಚೀನೀ ಹಾದಿ ಆಗಲು ಸಾಧ್ಯವಿಲ್ಲ, ಭಾರತೀಯ ಪರಿಸ್ಥಿತಿಗೆ ಲೆನಿನ್‌ವಾದವನ್ನು ಅನ್ವಯಿಸಿದ ಹಾದಿ ಅದಾಗಬೇಕು ಎಂದು ಈ ದಸ್ತಾವೇಜುಗಳು ಸ್ಪಷ್ಟವಾಗಿ ಹೇಳಿದವು.

ನೂತನವಾಗಿ ಯೋಜಿಸಲಾದ ಪಕ್ಷದ ಧೋರಣೆಯನ್ನು ಜಾರಿ ಮಾಡುವ ಸಲುವಾಗಿ, ಪಕ್ಷದ ಪುನರೇಕೀಕರಣಕ್ಕೆ ತಮ್ಮ ಮುಂದುವರಿಕೆಯು ಹಿತಕರವಾಗಲಾರದು ಎಂಬ ಆಧಾರದಲ್ಲಿ ಮೇ 1950ರಲ್ಲಿ ಆಯ್ಕೆಯಾಗಿದ್ದ ರಾಜೇಶ್ವರ ರಾವ್ ಮತ್ತು ಪೊಲಿಟ್ ಬ್ಯೂರೋ ರಾಜೀನಾಮೆ ನೀಡಿದರು. ಪೊಲಿಟ್‌ಬ್ಯೂರೋವನ್ನು ಪುನರ್ ಸಂಘಟಿಸಿ ಪ್ರಧಾನ ಕಾರ್ಯದರ್ಶಿಯಾಗಿ ಅಜಯ್ ಕುಮಾರ್ ಘೋಷ್ ಅವರನ್ನು ಆಯ್ಕೆ ಮಾಡಲಾಯಿತು.

ಆನ್‌ಲೈನ್ ಶಿಕ್ಷಣ ಕ್ಲಾಸ್ ರೂಂ ಶಿಕ್ಷಣಕ್ಕೆ ಪೂರಕ ಮಾತ್ರ, ಪರ್ಯಾಯ ಅಲ್ಲ............ ಪುಟ 6 ರಿಂದ

ವ್ಯವಸ್ಥೆ ಹೆಣ್ಣುಮಕ್ಕಳಿಗೆ ಶಿಕ್ಷಣವನ್ನು ಕಲ್ಪಿಸುವ ಸಾಧ್ಯತೆಗಳು ತುಂಬಾ ಕಡಿಮೆ. ಕಳೆದ 70 ವರ್ಷಗಳಲ್ಲಿ ಸಂವಿಧಾನದ ನೀತಿಸಂಹಿತೆಗಳಫಲದಿಂದಹಂತಹಂತವಾಗಿಪಡೆದುಕೊಂಡ ಸರ್ವರಿಗೂ ಶಿಕ್ಷಣವು (ಅದು ಇನ್ನೂ ಸಮರ್ಪಕವಾಗಿಲ್ಲ) ಕ್ರಮೇಣ ಕಣ್ಮರೆಯಾಗುತ್ತದೆ. ಈ ವ್ಯವಸ್ಥೆಯಿಂದ ದೇಶವು ವರ್ಣಾಶ್ರಮದ ಪದ್ಧತಿಗೆ ಮರಳುತ್ತದೆ. ಅಂದರೆ ಅನಾಮತ್ತಾಗಿ ನೂರಾರು ವರ್ಷಗಳ ಹಿಂದೆ ಚಲಿಸುತ್ತದೆ.

ಮುಖ್ಯವಾಗಿ ಇಲ್ಲಿ ಬಿಸಿಯೂಟದ ಪ್ರಶ್ನೆಯಿದೆ. ಶಾಲೆಗಳಲ್ಲಿರುವ ಈ ಬಿಸಿಯೂಟ ವ್ಯವಸ್ಥೆಯನ್ನು ಪ್ರತ್ಯೇಕವಾಗಿ ನೋಡಲು ಬರುವುದಿಲ್ಲ. ಮಕ್ಕಳಿಗೆ ಕೊಡುವ ಬಿಸಿಯೂಟವು ಸಹ ವ್ಯಾಸಂಗ ಕ್ರಮದ ಒಂದು ಭಾಗವಾಗಿದೆ. ಪೌಷ್ಟಿಕಾಂಶದ ಆಹಾರವು ಮಕ್ಕಳನ್ನು ದೈಹಿಕವಾಗಿ ಸಬಲರನ್ನಾಗಿಸುತ್ತದೆ ಮತ್ತು ಮಾನಸಿಕವಾಗಿ ಸಜ್ಜುಗೊಳಿಸುತ್ತದೆ. ಬಿಸಿಯೂಟ ವ್ಯವಸ್ಥೆಯು 'ವ್ಯಾಸಂಗಕ್ರಮ'ದ ಅವಿಭಾಜ್ಯ ಅಂಗ. ಇದನ್ನು ಶೈಕ್ಷಣಿಕ ಪದ್ಧತಿಯಿಂದ ಬೇರ್ಪಡಿಸಲು, ಸ್ಥಗಿತಗೊಳಿಸಲು ಸಾಧ್ಯವಿಲ್ಲ. ಆದರೆ ಆನ್–ಲೈನ್ ಶಿಕ್ಷಣ ಜಾರಿಗೊಂಡರೆ ಮಕ್ಕಳು ಬಿಸಿಯೂಟದಿಂದ, ಪೌಷ್ಟಿಕ ಆಹಾರದಿಂದ ವಂಚಿತರಾಗುತ್ತಾರೆ. ಕ್ರಮೇಣ ಶಿಕ್ಷಣದಿಂದಲೂ ಹೊರಗುಳಿಯುತ್ತಾರೆ.

ಬಜೆಟ್‌ನಲ್ಲಿ ಆನ್–ಲೈನ್ ಶಿಕ್ಷಣಕ್ಕೆ ಅನುದಾನ

ಇನ್ನು ರಾಜ್ಯ ಸರಕಾರ 2020–21ರ ಮುಂಗಡಪತ್ರದ ಗಾತ್ರ 2.3 ಲಕ್ಷ ಕೋಟಿಯಿತ್ತು. ಅದರಲ್ಲಿ 29,768 ಕೋಟಿಯನ್ನು (ಶೇ.13) ಶಿಕ್ಷಣಕ್ಕೆ ಮೀಸಲಿಟ್ಟಿದ್ದರು. ಇದರಲ್ಲಿ ಶಿಕ್ಷಣ ತಂತ್ರಜ್ಞಾನ ಅಭಿವೃದ್ಧಿಗೆ ಕೇವಲ 7 ಕೋಟಿ ಮೀಸಲಿಟ್ಟಿದೆ. ಶಿಕ್ಷಣ ತಜ್ಞ ನಿರಂಜನಾರಾಧ್ಯ ಅವರು 'ಈ ಮೊತ್ತದಲ್ಲಿ ರಾಜ್ಯದ ವಿಶ್ವ ವಿದ್ಯಾಲಯಗಳನ್ನು ಈ ತಂತ್ರಜ್ಞಾನದ ಬಳಕೆಗೆ ಅಣಿಗೊಳಿಸಲು 1 ಕೋಟಿ, ಇಂಟರಾಕ್ಟಿವ್ ಆನ್‌ಲೈನ್ ಕೋರ್ಸ ಪ್ರಾರಂಬಿಸಲು, ಗುಣಾತ್ಮಕ ಇ–ಕಂಟೆಂಟ್ ಅಭಿವೃದ್ಧಿ ಪಡಿಸಲು 1 ಕೋಟಿ ಕೊಟ್ಟಿದ್ದಾರೆ. ಇದನ್ನು ಬಳಸಿಕೊಂಡು ಯಾವ ಬಗೆಯ ಆನ್‌ಲೈನ್ ಶಿಕ್ಷಣ ಕೊಡುತ್ತಾರೆ ಎಂದು ಸರಕಾರವೇ ಉತ್ತರಿಸಬೇಕು' ಎಂದು ಬರೆಯುತ್ತಾರೆ. ಇನ್ನು ಕೇಂದ್ರ ಸರಕಾರವು ತನ್ನ 2020–21ರ ಮುಂಗಡಪತ್ರದಲ್ಲಿ ಮಾನವ ಸಂಪನ್ಮೂಲ ಇಲಾಖೆಯ ಅಡಿಯಲ್ಲಿ ಡಿಜಿಟಲ್ ಕಲಿಕೆಗೆ ಮೀಸಲಿಟ್ಟ ಹಣ 604 ಕೋಟಿ. ನಂತರ ಇದನ್ನು 469 ಕೋಟಿಗೆ ಇಳಿಸಿದೆ.

ವಾಸ್ತವದಲ್ಲಿ ರಾಜ್ಯ ಸರಕಾರವು ತನ್ನ ಬಜೆಟ್ ಗಾತ್ರದ ಶೇ. 25–30 ಪ್ರಮಾಣದಲ್ಲಿ, ಜಿಡಿಪಿಯ ಶೇ. 6 ಪ್ರಮಾಣದಲ್ಲಿ ಶಿಕ್ಷಣಕ್ಕೆ ಅನುದಾನ ಕೊಡಬೇಕು. ಆದರೆ ಇದು ಬಜೆಟ್ ಗಾತ್ರದ ಶೇ. 13 ಪ್ರಮಾಣದಲ್ಲಿ, ಜಿಡಿಪಿಯ ಶೇ. 1.5 ಪ್ರಮಾಣದಲ್ಲಿ ಹಣ ಕೊಡುತ್ತಿದೆ. ಅಲ್ಲದೆ ತನ್ನ ಸಂಪನ್ಮೂಲ ಕ್ರೋಢೀಕರಣದಲ್ಲಿ ವ್ಯತ್ಯಯ ಉಂಟಾದರೆ ಅದು ಶಿಕ್ಷಣಕ್ಕೆ ಮೀಸಲಿಟ್ಟ ಮೊತ್ತವನ್ನು ಕಡಿತಗೊಳಿಸುತ್ತದೆ. ಸ್ವತಃ ತಾನು ಶಿಕ್ಷಣಕ್ಕೆ ಸೂಕ್ತ ಹಣಕಾಸಿನ ಅನುದಾನ ಕೊಡದ ಕೇಂದ್ರ ಮತ್ತು ರಾಜ್ಯ ಸರಕಾರಗಳು ಆನ್–ಲೈನ್ ಶಿಕ್ಷಣದ ಕುರಿತು ಮಾತನಾಡುತ್ತಿವೆ ಎಂದರೆ ಅದು ಕೇವಲ ತಗಲೂಫಿತನ ಮಾತ್ರವಲ್ಲ. ಇದೇ ರೀತಿ ಆರ್ಥಿಕ ಅನುದಾನವನ್ನು ಕಡಿಮೆ ಮಾಡುವುದರ ಮೂಲಕ ಸರಕಾರ ತನ್ನ ಜವಾಬ್ದಾರಿಯನ್ನು ಕಳಚಿಕೊಂಡು ಶಿಕ್ಷಣ ಒದಗಿಸುವ ಹೊಣೆಗಾರಿಕೆಯನ್ನು ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ವರ್ಗಾಯಿಸುವುದು ಇದರ ಒಳ ಉದ್ದೇಶ. ಇದು ಶಿಕ್ಷಣದ ಖಾಸಗೀಕರಣ ಮತ್ತು ವ್ಯಾಪಾರೀಕರಣಕ್ಕೆ ಹೆಬ್ಬಾಗಿಲನ್ನು ತೆರೆಯುತ್ತದೆ. ಆನ್–ಲೈನ್ ಶಿಕ್ಷಣ ಇದಕ್ಕೆ ಒಂದು ಸಾಧನವಾಗುತ್ತದೆ. ಕಾರ್ಪೋರೇಟ್ ಶಿಕ್ಷಣ ಸಂಸ್ಥೆಗಳ ಸದಾ ಬಳಸುವ 'ಬೇಡಿಕೆ–ಪೂರೈಕೆ', 'ಹಣಕ್ಕೆ ತಕ್ಕನಾದ ಶಿಕ್ಷಣ, 'ಅಭಿವೃದ್ಧಿಗೆ ಪೂರಕ ಶಿಕ್ಷಣ', 'ವೃತ್ತಿಪರ, ತಂತ್ರಜ್ಞಾನ ಶಿಕ್ಷಣ', 'ಜಾಗತಿಕ ಮಟ್ಟದ ಶಿಕ್ಷಣ' ಮುಂತಾದ ನುಡಿಕಟ್ಟುಗಳಿಗೆ ಮಾನ್ಯತೆ ಬರಬೇಕೆಂದರೆ ಆನ್–ಲೈನ್ ಶಿಕ್ಷಣದ ಅವಶ್ಯಕತೆ ಇದೆ. ಈ ಖಾಸಗಿ ಸಂಸ್ಥೆಗಳಿಗೆ ಆನ್–ಲೈನ್ ಶಿಕ್ಷಣದ ಹೆಸರಿನಲ್ಲಿ 'ವ್ಯಾಸಂಗ ಕ್ರಮ'ವನ್ನು ಒಂದು ಸರಕಾಗಿಸಿ ಮಾರಾಟ ಮಾಡುವುದು ಸುಲುಭವಾಗುತ್ತದೆ. ಮತ್ತೆ ಮತ್ತೆ ಪುನರುಚ್ಚರಿಸಬೇಕೆಂದರೆ ಈ ವ್ಯವಸ್ಥೆಯಿಂದ ಶೇ.70–80 ಪ್ರಮಾಣದ ಮಕ್ಕಳು, ಯುವಜನತೆ ಶಿಕ್ಷಣದಿಂದ ವಂಚಿತರಾಗುತ್ತಾರೆ.

ತಾತ್ವಿಕವಾಗಿ ಅಪಾಯಕಾರಿ

ವಿಕಾಸವಾದ ಸಿದ್ಧಾಂತವು ಕೇವಲ ಮನುಷ್ಯನಾಗಿ ರೂಪಾಂತರಗೊಳ್ಳುವ ವಿವಿದ ಹಂತಗಳ ಪ್ರಕ್ರಿಯೆ ಮಾತ್ರವಲ್ಲ. ಜೊತೆಗೆ ಅದು ನಾಗರೀಕತೆಯ, ಪ್ರಜಾತಾಂತ್ರಿಕ ವ್ಯವಸ್ಥೆಯ ಬೆಳವಣಿಗೆಯೂ ಹೌದು. ಸಾಮಾಜಿಕ ಪ್ರಾಣಿಯಾದ ಮನುಷ್ಯ ಸಮಾಜದಲ್ಲಿ ಬದುಕಬೇಕು, ಅಲ್ಲಿನ ವೈವಿದ್ಯತೆಯೊಂದಿಗೆ ನಿರಂತರ ಒಡನಾಡಬೇಕು. ವಿವಿದ ಜಾತಿ, ದರ್ಮ, ವರ್ಗಗಳು ಪರಸ್ಪರ ಕೊಡುಕೊಳ್ಳುವಿಕೆಯಲ್ಲಿ ತೊಡಗಿಸಿಕೊಳ್ಳಬೇಕು. ಇದು ಸಾಮಾಜೀಕರಣದ ಲಕ್ಷಣ. ಇಲ್ಲಿ ಸಮಾನತೆ, ಭ್ರಾತೃತ್ವ, ಸ್ವಾತಂತ್ರ್ಯಗಳನ್ನು ಅನುಭವಿಸಲು, ಅದನ್ನು ಜೀವಿಸಲು ಈ ಸಾಮಾಜೀಕರಣದ ಅಗತ್ಯವಿದೆ. ಸಾರ್ವಜನಿಕ ಶಿಕ್ಷಣ ವ್ಯವಸ್ಥೆ, ನೆರೆಹೊರೆ ಶಾಲಾ ಪದ್ಧತಿಯು ಈ ಮಾದರಿಯ ಸಾಮಾಜೀಕರಣಕ್ಕೆ ಅಗತ್ಯವಾದ ಸಾಧನವಾಗಿದೆ. ಕ್ಲಾಸ್‌ರೂಂ ಶಿಕ್ಷಣದಲ್ಲಿ ವಿವಿದ ಜಾತಿ, ದರ್ಮ, ವರ್ಗಕ್ಕೆ ಸೇರಿದ ಮಕ್ಕಳು/ ವಿದ್ಯಾರ್ಥಿಗಳು ಪರಸ್ಪರ ಬೆರೆಯುತ್ತಾರೆ, ಮಾತನಾಡುತ್ತಾರೆ, ಚರ್ಚಿಸುತ್ತಾರೆ, ವಿಮರ್ಶಿಸುತ್ತಾರೆ, ಜಗಳವಾಡುತ್ತಾರೆ. ಶಿಕ್ಷಕರೊಂದಿಗೆ ಸಂವಾದ ನಡೆಸುತ್ತಾರೆ, ಪ್ರಶ್ನಿಸುತ್ತಾರೆ. ಉಪನ್ಯಾಸಗಳಲ್ಲಿ ಭಾಗವಹಿಸುತ್ತಾರೆ. ಬಹುಮುಖಿಯಾದ ಶಿಕ್ಷಣವಿರುತ್ತದೆ. ತಮ್ಮದೇ ಜಾತಿ, ವರ್ಗಗಳ ದ್ವೀಪದಲ್ಲಿ ಬಂಧಿತರಾಗುತ್ತಾರೆ. ಈ ಕ್ಲಾಸ್‌ರೂಂ ಶಿಕ್ಷಣದವು ಸದಾ ಚಲನಶೀಲವಾಗಿರುತ್ತದೆ. ಇಲ್ಲಿ ಜಡತ್ವವಿರುವುದಿಲ್ಲ, ಜೀವಂತಿಕೆ ಇರುತ್ತದೆ. ಶಿಕ್ಷಕರೊಂದಿಗೆ ಮುಖಾಮುಖಿಯಾಗಿ ನೇರವಾಗಿ ಕಲಿಯುವ ಶಿಕ್ಷಣ ಮಕ್ಕಳಿಗೆ/ವಿದ್ಯಾರ್ಥಿಗಳಿಗೆ ಹೊಸ ದೃಷ್ಟಿಕೋನ, ಹೊಸ ಕಥನ, ಹೊಸ ಹೊಳಹು ದೊರಕುತ್ತದೆ. ಇದು ಜ್ಞಾನಾರ್ಜನೆಗೆ ಅಗತ್ಯವಿರುವ ನಿಜದ ಹಾದಿ. ಇದು ಸಾಮಾಜೀಕರಣ. ಇದು ವೈವಿದ್ಯತೆಯಲ್ಲಿ ಐಕ್ಯತೆ ಮತ್ತು ಬಹುಸಂಸ್ಕೃತಿಯ ಅರ್ಥಪೂರ್ಣ ಆಚರಣೆ.

ಆದರೆ ಆನ್‌ಲೈನ್ ಶಿಕ್ಷಣವು ಸ್ಥಗಿತಗೊಂಡ ಮಾದರಿಯಾಗಿದೆ, ಅದು ತಟಸ್ಥವಾಗಿರುತ್ತದೆ. ಮಕ್ಕಳು/ವಿದ್ಯಾರ್ಥಿಗಳು ಪ್ರತ್ಯೇಕವಾಗಿ ತಮ್ಮ ಮನೆಗಳ ನಾಲ್ಕು ಗೋಡೆಗಳ ನಡುವೆ ಏಕಾಂಗಿಯಾಗಿ ಕಲಿಯುವ ಶಿಕ್ಷಣವು ಅವರನ್ನು ಈ ಸಾಮಾಜೀಕರಣದಿಂದ, ಬಹುಸಂಸ್ಕೃತಿಯಿಂದ ವಂಚಿತರನ್ನಾಗಿಸುತ್ತದೆ. ಸಮಷ್ಟಿ ಪ್ರಜ್ಞೆಯಿಂದ ವಂಚಿತರಾಗುವ ಮಕ್ಕಳು/ವಿದ್ಯಾರ್ಥಿಗಳು ಕ್ರಮೇಣ ವ್ಯಕ್ತಿಗತವಾದ ವರ್ತನೆಯನ್ನು ರೂಡಿಸಿಕೊಳ್ಳುತ್ತಾರೆ. ಈ ಶಿಕ್ಷಣದಲ್ಲಿ ಪ್ರಶ್ನೆಗಳಿರುವುದಿಲ್ಲ, ವಿಮರ್ಶೆ ಇರುವುದಿಲ್ಲ. ಇಲ್ಲಿ ಶಿಕ್ಷಣವು ಏಕಮುಖಿಯಾಗಿರುತ್ತದೆ. ವರ್ಚುವಲ್ ಕ್ಲಾಸ್‌ರೂಂನಲ್ಲಿ ಜ್ಞಾನವೆನ್ನುವ ಸಂಪನ್ಮೂಲವು ಪ್ರಾಶಸ್ತ್ಯ ಪಡೆದುಕೊಂಡ ಆಯ್ಕೆಯಾಗಿರುತ್ತದೆ. 'ಕೌಶಲ್ಯ ಆಧರಿಸಿದ' ಜ್ಞಾನವು ಮೊದಲ ಆಯ್ಕೆಯಾಗುವ ಸಾದ್ಯತೆಗಳಿವೆ. ಇದು ಮಕ್ಕಳು/ವಿದ್ಯಾರ್ಥಿಗಳನ್ನು ನೇರವಾಗಿ ಜಾಗತಿಕ ಶಿಕ್ಷಣಕ್ಕೆ ಸಂಪರ್ಕ ಕಲ್ಪಿಸುತ್ತದೆ ಎನ್ನುವ ಭ್ರಮೆಯನ್ನು ಬಿತ್ತುತ್ತದೆ. ಇದರ ಫಲವಾಗಿ ವಿದೇಶಿ ಶಿಕ್ಷಣ ಸಂಸ್ಥೆಗಳು, ಕಾರ್ಪೋರೇಟ್ ಸಂಸ್ಥೆಗಳು ಹುಲುಸಾಗಿ ಬೆಳೆಯುತ್ತವೆ. ಇವು 'ಕಾಸಿಗೆ ತಕ್ಕಂತೆ ಕಜ್ಜಾಯ' ಎನ್ನುವ ಆಡುಮಾತಿನಂತೆ ಹಣ ಕೊಟ್ಟಷ್ಟು ಶಿಕ್ಷಣ ಎಂಬ ವ್ಯವಸ್ಥೆಯನ್ನು ಕ್ರಮಬದ್ಧಗೊಳಿಸುತ್ತವೆ.

ಇನ್ನು ಶಿಕ್ಷಕರಿಗೆ/ಪ್ರಾಧ್ಯಾಪಕರಿಗೆ ಆನ್‌ಲೈನ್ ಬೋದನೆಗೆ ಸೂಕ್ತ ತರಬೇತಿ ಇಲ್ಲ, ಮಕ್ಕಳಿಗೆ/ವಿದ್ಯಾರ್ಥಿಗಳಿಗೆ ಆನ್–ಲೈನ್ ಕಲಿಕೆಗೆ ಸೂಕ್ತ ತರಬೇತಿ ಇಲ್ಲ. ಇದಕ್ಕೆ ಅವಶ್ಯಕವಾದ ಪೂರಕ ಪಠ್ಯಗಳಿಲ್ಲ. ನೂರಾರು ಕಿಮೀ ದೂರದಲ್ಲಿರುವ ಶಿಕ್ಷಕರು ಮಕ್ಕಳ ಮುಖಬಾವನೆಯನ್ನು ಅರಿಯದೆ ಪಾಠ ಮಾಡುವ ಮಾದರಿಯು ತುಂಬಾ ಮಿತಿಗಳನ್ನು ಹೊಂದಿದೆ. ಕ್ಲಾಸ್‌ರೂಂ ಶಿಕ್ಷಣ ವ್ಯವಸ್ಥೆಯಲ್ಲಿ ಪ್ರತಿದಿನ ಮಕ್ಕಳ/ವಿದ್ಯಾರ್ಥಿಗಳ ಕಲಿಕೆಯ ಮಟ್ಟವನ್ನು ಮೌಲ್ಯಮಾಪನ ಮಾಡುವ ಅವಕಾಶವಿರುತ್ತದೆ. ಆದರೆ ವರ್ಚುವಲ್ ಶಿಕ್ಷಣದಲ್ಲಿ ಶಿಕ್ಷಕರಿಗೆ ಮಕ್ಕಳು ಕಲಿಕೆಯ ಪ್ರಗತಿ ಯಾವ ಹಂತದಲ್ಲಿದೆ ಎಂಬುದು ಗೊತ್ತಾಗುವುದಿಲ್ಲ. ಮಕ್ಕಳಿಗೆ ಕಲಿಕೆಯ ಕೌಶಲ್ಯವನ್ನು ಅಳವಿಡಿಸಿಕೊಳ್ಳುವಂತಹ ಸಿದ್ಧತೆಗಳು ಸಹ ಲಬ್ಯವಿಲ್ಲ.

ಮುಂದೇನು

ಸರಕಾರಗಳು ಸಮರೋಪಾದಿಯಲ್ಲಿ ಆರೋಗ್ಯ ವ್ಯವಸ್ಥೆಯನ್ನು ಸುಧಾರಿಸಬೇಕು ಮತ್ತು ಅತಿ ಶೀಘ್ರದಲ್ಲಿ ಕೋವಿಡ್ ಕಾಯಿಲೆಯನ್ನು ನಿಯಂತ್ರಿಸಬೇಕು. ಪೋಷಕರಲ್ಲಿ ಧೈರ್ಯವನ್ನು, ವಿಶ್ವಾಸವನ್ನು ತುಂಬಬೇಕು. ಇದು ಮೊಟ್ಟ ಮೊದಲು ಆಗಬೇಕಾದ ಕೆಲಸ. ಎರಡನೆಯದಾಗಿ ತರಗತಿಗಳ ಕೊಠಡಿಗಳ ವಿನ್ಯಾಸವನ್ನು ಪುನರ್‍ರೂಪಿಸಬೇಕು. ಮಕ್ಕಳು ದೈಹಿಕ ಅಂತರವನ್ನು ಕಾಪಾಡಿಕೊಳ್ಳುವಂತಹ ವಿನ್ಯಾಸವನ್ನು ಅಳವಡಿಸಿಕೊಳ್ಳಬೇಕು. ಈಗಾಗಲೇ ಟೈವಾನ್, ದಕ್ಷಿಣ ಕೊರಿಯಾ ದೇಶಗಳಲ್ಲಿ ಕೊಠಡಿಗಳ ವಿನ್ಯಾಸ ಬದಲಿಸಿ, ಮಕ್ಕಳ ನಡುವೆ ದೈಹಿಕ ಅಂತರ ಕಾಯ್ದುಕೊಂಡು ಶಾಲೆ ನಡೆಸುತ್ತಿದ್ದಾರೆ. ಭಾರತದಲ್ಲಿಯೂ ಇಂತಹ ಕಾರ್ಯಯೋಜನೆಗಳನ್ನು ರೂಪಿಸಬೇಕು. ಶಾಲೆ, ಕಾಲೇಜುಗಳಲ್ಲಿರುವ ವಿಶಾಲವಾದ ಬಯಲು ಪ್ರದೇಶವನ್ನು ತಾತ್ಕಾಲಿಕವಾಗಿ ತರಗತಿಗಳನ್ನಾಗಿ ಬದಲಿಸಬೇಕು. ಮೂರನೆಯದಾಗಿ ರಜೆಗಳನ್ನು ಕಡಿತಗೊಳಿಸಬೇಕು. ವ್ಯಾಸಂಗದ ಅವದಿಯನ್ನು ಹೆಚ್ಚಿಸಬೇಕು. ಭಾನುವಾರಗಳಂದು ಸಹ ಶಾಲೆಗಳನ್ನು ನಡೆಸಬೇಕು. ನಾಲ್ಕನೆಯದಾಗಿ ಪಠ್ಯಗಳ ಗಾತ್ರವನ್ನು ಸಹ ಶೇ. 30 ಪ್ರಮಾಣದಲ್ಲಿ ತಗ್ಗಿಸಬಹುದು. ಆದರೆ ಇದಕ್ಕಾಗಿ ಶಿಕ್ಷಣ ತಜ್ಞರ ಸಮಿತಿ ನೇಮಿಸಬೇಕಾಗುತ್ತದೆ. ಅವರು ನೀಡಿದ ಶಿಫಾರಸ್ಸುಗಳ ಆದಾರದಲ್ಲಿ ಪಠ್ಯಪುಸ್ತಕಗಳಲ್ಲಿ ಬದಲಾವಣೆಯನ್ನು ತರಬೇಕಾಗುತ್ತದೆ. ಇಲ್ಲದೇ ಹೋದರೆ ಮತಾಂಧ ಸರಕಾರಗಳು ತಮ್ಮ ಸಿದ್ಧಾಂತಕ್ಕೆ ಅನುಗುಣವಾಗಿ ಪಠ್ಯಗಳನ್ನು ಸೇರಿಸುವ, ಕೈಬಿಡುವ ಅಪಾಯವಿದೆ. ಇನ್ನು ಪರೀಕ್ಷೆಗಳಲ್ಲಿ ಅಂಕಗಳನ್ನು ಸಹ ತಾತ್ಕಾಲಿಕವಾಗಿ ಕಡಿತಗೊಳಿಸಬಹುದು. ಪ್ರಶ್ನೆಪತ್ರಿಕೆಗಳ ಸ್ವರೂಪವನ್ನು ಸಹ ಈ ಬಿಕ್ಕಟ್ಟಿನ ಸಂದರ್ಭದ ಅಗತ್ಯಕ್ಕೆ ತಕ್ಕಂತೆ ರೂಪಿಸಬೇಕಾಗುತ್ತದೆ. ಮುಖ್ಯವಾಗಿ ಈ ಪಬ್ಲಿಕ್ ಪರೀಕ್ಷೆಗಳನ್ನು ಈ ಶೈಕ್ಷಣಿಕ ವರ್ಷಕ್ಕೆ ಅನುವಾಗುವಂತೆ ರದ್ದುಗೊಳಿಸಬೇಕು. ಕೆಜಿಯಿಂದ ಪಿಜಿವರೆಗಿನ ಎಲ್ಲಾ ಹಂತದ ಪರೀಕ್ಷೆಗಳನ್ನು ಸ್ಥಳೀಯ ಶಾಲೆ, ಕಾಲೇಜುಗಳಲ್ಲಿ ನಡೆಸಬೇಕು. ಈಗಾಗಲೇ ಸರಕಾರಗಳು ಸೆಮೆಸ್ಟರ್ ಹಂತದ ಪರೀಕ್ಷೆಗಳನ್ನು ರದ್ದುಗೊಳಿಸಿದೆ ಮತ್ತು ಅಂತಿಮ ಪರೀಕ್ಷೆಯನ್ನು ಮಾತ್ರ ಉಳಿಸಿಕೊಂಡಿದೆ. ಇದು ಸ್ವಾಗತಾರ್ಹ ಕ್ರಮ

ಕಡೆಗೂ ಕೋವಿಡ್ ಕಾಯಿಲೆ ಹತೋಟಿಗೆ ಬರದೇ ಹೋದರೆ ಎನ್ನುವ ಪ್ರಶ್ನೆ ಉಳಿದುಕೊಳ್ಳುತ್ತದೆ. ಕೇರಳ ಸರಕಾರವು 'ಫಸ್ಟ್ ಬೆಲ್' ಎನ್ನುವ ಡಿಜಿಟಲ್ ಶಿಕ್ಷಣವನ್ನು ಪ್ರಯೋಗಾತ್ಮಕವಾಗಿ ನಡೆಸುತ್ತಿದೆ. ಈ ಡಿಜಿಟಲ್ ಶಿಕ್ಷಣವನ್ನು ಸಾರ್ವಜನಿಕ ಶಿಕ್ಷಣ ವ್ಯವಸ್ಥೆ ಮಾತ್ರ ನಿಯಂತ್ರಿಸಬೇಕು ಮತ್ತು ಖಾಸಗಿಯವರ ಹಸ್ತಕ್ಷೇಪದಿಂದ ಮುಕ್ತಗೊಳಿಸಬೇಕು ಎನ್ನುವ ನಿರ್ದಾರ ತೆಗೆದುಕೊಳ್ಳಲಾಗಿದೆ. ಈ 'ಫಸ್ಟ್‌ಬೆಲ್' ಎನ್ನುವ ವರ್ಚುವಲ್ ವ್ಯಾಸಂಗ ಕ್ರಮವು ಮೊಬೈಲ್, ಕಂಪ್ಯೂಟರ್‌ಗಳನ್ನು ಬಳಸಿಕೊಳ್ಳುವುದಿಲ್ಲ. ಆರಂಭದಲ್ಲಿ ಸರಕಾರಿ ದೃಶ್ಯ ಮಾದ್ಯಮಗಳಲ್ಲಿ, ಕೇಬಲ್ ನೆಟ್‌ವರ್ಕಗಳ ಮೂಲಕ ಆನ್‌ಲೈನ್ ತರಗತಿ ಪ್ರಾರಂಬಿಸುತ್ತಾರೆ. ನಂತರ ಅನೇಕ ಪಠ್ಯಗಳನ್ನು ಡೌನ್‌ಲೋಡ್ ಮಾಡಿ ಪ್ರತಿ ಹಳ್ಳಿಗಳಿಗೆ ಈ ವಿಡಿಯೋವನ್ನು ಮಕ್ಕಳಿಗೆ ತೋರಿಸಲಾಗುತ್ತದೆ. ಈ 'ಫಸ್ಟ್‌ಬೆಲ್' ಡಿಜಟಲ್ ಶಿಕ್ಷಣವನ್ನು ಸಹ ಒಂದು ತಾತ್ಕಾಲಿಕ ವ್ಯವಸ್ಥೆಯಾಗಿ ಪರಿಗಣಿಸುತ್ತದೆ. ಇದನ್ನೇ ಮಾದರಿಯಾಗಿಟ್ಟುಕೊಂಡು ಉಳಿದ ರಾಜ್ಯಗಳು ನಿಷ್ಕ್ರಿಯತೆಯಿಂದ ಹೊರಬಂದು ಕ್ರಿಯಾಶೀಲರಾಗಿ ರಚನಾತ್ಮಕವಾದ ಕಾರ್ಯಯೋಜನೆಗಳನ್ನು ರೂಪಿಸುವ ಅಗತ್ಯವಿದೆ. ಇಲ್ಲಿ ಶಿಕ್ಷಕರು, ಪ್ರಾದ್ಯಾಪಕರ ಪಾತ್ರ ತುಂಬಾ ಮುಖ್ಯವಾಗುತ್ತದೆ. ಅವರ ನಿಸ್ವಾರ್ಥ ಮತ್ತು ಬದ್ಧತೆ ಮಕ್ಕಳನ್ನು ಶಿಕ್ಷಣದಿಂದ ವಂಚಿತರಾಗದಂತೆ ತಡೆಯಬಹುದು. ಕಲ್ಬುರ್ಗಿಯ ಕೆಲ ಭಾಗಗಳಲ್ಲಿ ಶಿಕ್ಷಕರು ಗ್ರಾಮಗಳಿಗೆ ತೆರಳಿ ಪಂಚಾಯಿತಿ ಕಟ್ಟೆಗಳಲ್ಲಿ, ಮನೆಯ ಅಂಗಳದಲ್ಲಿ ಮಕ್ಕಳನ್ನು ಸೇರಿಸಿ, ಎಲ್ಲಾ ಮುನ್ನಚ್ಚರಿಕೆ ಕ್ರಮಗಳನ್ನು ಅಳವಡಿಸಿಕೊಂಡು ಕ್ಲಾಸ್‌ರೂಂ ಶೈಲಿಯಲ್ಲಿ ಪಾಠ ಮಾಡುತ್ತಿದ್ದಾರೆ. ಈ ಮನೋಭಾವ ಎಲ್ಲಾ ಶಿಕ್ಷಕರಿಗೂ ಬೇಕಾಗಿದೆ.

ನಾವು ಕಾರ್ಯಯೋಜನೆ ರೂಪಿಸಿಕೊಳ್ಳದಿದ್ದರೆ, ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳದಿದ್ದರೆ 19–20ನೇ ಶತಮಾನದಲ್ಲಿ ಫುಲೆ ದಂಪತಿಗಳು, ಅಯೋತಿದಾಸ್, ಅಯ್ಯಂಕಾಳಿ, ಕುದ್ಮಲ್ ರಂಗರಾವ್, ನಾಲ್ಮಡಿ ಒಡೆಯರ್, ಶಾಹು ಮಹಾರಾಜ್ ರಂಹ ಮಾನವತಾವಾದಿಗಳು ಸಮಾಜದ ತಳಸಮುದಾಯಗಳ, ದಲಿತರ, ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ನಡೆಸಿದ ಹೋರಾಟ, ಕಟ್ಟಿದ ಶಿಕ್ಷಣ ವ್ಯವಸ್ಥೆ, ರೂಪಿಸಿದ ಸಮಾನ ಶಿಕ್ಷಣದ ಆಶಯಗಳು ಸಂಪೂರ್ಣವಾಗಿ ನಾಶವಾಗುತ್ತದೆ. ಅಂಬೇಡ್ಕರ್ ರೂಪಿಸಿದ ಶಿಕ್ಷಣದ ಮೂಲಕ ದಲಿತರ ಸಬಲೀಕರಣ ಮತ್ತು ವಿಮೋಚನೆಯ ಆಶಯಗಳೂ ಸಹ ಭಗ್ನಗೊಳ್ಳುತ್ತದೆ.

ಈ ಕೂಡಲೆ ಕಾರ್ಯಪ್ರವೃತ್ತರಾಗಬೇಕು.

ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆಗೆ ತಿದ್ದುಪಡಿ ಬೇಡ!............. ಪುಟ 8 ರಿಂದ

ಗಳನ್ನಾಗಿಯೂ, ದೊಡ್ಡ ಪಟ್ಟಣ ಸಹಕಾರಿ ಬ್ಯಾಂಕುಗಳನ್ನು ಖಾಸಗೀ ವಾಣಿಜ್ಯ ಬ್ಯಾಂಕ್‌ಗಳನ್ನಾಗಿ ಮಾರ್ಪಾಟು ಮಾಡಬಹುದೆಂದು ಶಿಫಾರಸ್ಸು ಮಾಡಿತ್ತು. ಅಂದರೆ ಸಹಕಾರೀ ಬ್ಯಾಂಕ್‌ಗಳ ಖಾಸಗೀಕರಣದ ಕಾರ್ಯಸೂಚಿ ಐದು ವರ್ಷ ಹಿಂದಿನಿಂದಿಂದಲೇ ರಿಜರ್ವ್ ಬ್ಯಾಂಕ್‌ನ ಮುಂದೆ ಇತ್ತು. ಇದನ್ನು ಜಾರಿ ಮಾಡುವುದೇ ಈ ತಿದ್ದುಪಡಿಗಳ ಉದ್ದೇಶ.

ಈಗ ಜಾರಿಗೆ ತಂದಿರುವ ತಿದ್ದುಪಡಿಗಳಲ್ಲಿ, ಸಹಕಾರೀ ಬ್ಯಾಂಕುಗಳು, ತಮ್ಮ ಈಕ್ವಿಟಿ ಶೇರ್‌ಗಳನ್ನು ಅಥವಾ ಪ್ರಿಫರೆನ್ಸಿಯಲ್ ಶೇರುಗಳನ್ನು ಸಾರ್ವಜನಿಕ ಅಥವಾ ಖಾಸಗೀ ನೀಡುವಿಕೆಯ ಮೂಲಕ "ಸದಸ್ಯರಲ್ಲದವರಿಗೂ' ನೀಡಲು ಅವಕಾಶ ಕಲ್ಪಿಸಿದೆ. ಇದುವರೆಗೆ ಬಡ ಹಾಗೂ ಮಧ್ಯಮ ವರ್ಗದ ಜನರನ್ನು ಸದಸ್ಯರನ್ನಾಗಿ, ಶೇರ್ ಹೋಲ್ಡರ್‌ಗಳನ್ನಾಗಿ ಹೊಂದಿ, ಸದಸ್ಯರೇ ಪ್ರಜಾಸತ್ತಾತ್ಮಕವಾಗಿ ಚುನಾಯಿಸಿದ ನಿರ್ದೇಶನ ಮಂಡಳಿಗಳ ಮುಖಾಂತರ ಕಾರ್ಯನಿರ್ವಹಿಸುತ್ತಿರುವ ಸಹಕಾರಿ ಬ್ಯಾಂಕುಗಳನ್ನು, ಖಾಸಗೀಕರಣಗೊಳಿಸಿ ಆ ಮೂಲಕ ಕಾರ್ಪೊರೇಟ್ ಕ್ಷೇತ್ರಕ್ಕೆ ಅವುಗಳನ್ನು ಒಪ್ಪಿಸುವ ಹುನ್ನಾರವು ಈ ತಿದ್ದುಪಡಿಯಲ್ಲಿದೆ.

ಭಾರತದ ಸಂವಿಧಾನ 7ನೇ ಶೆಡ್ಯೂಲಿನ ಪ್ರಕಾರ ಸಹಕಾರಿ ಸಂಘಗಳು (Cooperative Societies) ರಾಜ್ಯದ ವಿಷಯವಾಗಿದೆ. ಈ ಸಹಕಾರಿ ಸಂಸ್ಥೆಗಳ ಮೇಲೆ ರಾಜ್ಯ ಸರ್ಕಾರಕ್ಕೆ ಇರುವ ಅಧಿಕಾರವನ್ನು ಕಸಿದುಕೊಳ್ಳುವ ಮೂಲಕ ಅಲ್ಲಿ ಕೇಂದ್ರ ಸರ್ಕಾರದ ನಿಯಂತ್ರಣದಲ್ಲಿರುವ ರಿಜರ್ವ್ ಬ್ಯಾಂಕಿನ ನಿಯಂತ್ರಣವನ್ನು ಹೇರಲು ಹೊರಟಿರುವ ಈ ತಿದ್ದುಪಡಿ, ನಮ್ಮ ದೇಶದಲ್ಲಿರುವ ಒಕ್ಕೂಟ ವ್ಯವಸ್ಥೆಯ ಮೇಲೆ ಕೇಂದ್ರ ಸರ್ಕಾರದ ದಾಳಿಯೆಂದು ಪರಿಗಣಿಸಬೇಕಾಗುತ್ತದೆ. ರಾಜ್ಯ ಸರ್ಕಾರಗಳ ಅಭಿಪ್ರಾಯವನ್ನು ಕೇಳಿದೆ ಏಕಪಕ್ಷೀಯವಾಗಿ ತಿದ್ದುಪಡಿಗಳನ್ನು ಜಾರಿ ತಂದಿರುವುದನ್ನು ಈ ಕಾರಣಕ್ಕಾಗಿ ವಿರೋಧಿಸಬೇಕಾಗುತ್ತದೆ.

ಇತ್ತೀಚೆಗೆ ರಾಜ್ಯದಲ್ಲಿನ ಎಲ್ಲಾ ಜಿಲ್ಲಾ ಸಹಕಾರಿ ಬ್ಯಾಂಕುಗಳನ್ನು, ರಾಜ್ಯ ಸಹಕಾರಿ ಬ್ಯಾಂಕಿನಲ್ಲಿ ವಿಲೀನಗೊಳಿಸಿ ಒಂದು ರಾಜ್ಯ ಮಟ್ಟದ ಬ್ಯಾಂಕನ್ನು ಕೇರಳ ಸರ್ಕಾರ ಸ್ಥಾಪಿಸಿದೆ. ಈ "ಕೇರಳ ಬ್ಯಾಂಕ್' ಸಂಪೂರ್ಣ ರಾಜ್ಯ ಸರ್ಕಾರದ ಒಡೆತನದಲ್ಲಿದ್ದು ಈಗಾಗಲೇ ಉತ್ತಮ ಕಾರ್ಯ ನಿರ್ವಹಣೆ ಪ್ರಾರಂಭಿಸಿರುವುದು ಕೇಂದ್ರ ಸರ್ಕಾರದ ಕೆಂಗಣ್ಣಿಗೆ ಕಾರಣವಾಗಿದೆ.

ದೇಶದಲ್ಲಿರುವ – 33 ರಾಜ್ಯ ಮಟ್ಟದ, 364 ಜಿಲ್ಲಾ ಕೇಂದ್ರ, 1482 ಒಂದೇ ರಾಜ್ಯದಲ್ಲಿ ಪಟ್ಟಣ ಮಟ್ಟದ ಮತ್ತು 58 ಹಲವು ರಾಜ್ಯಗಳಲ್ಲಿ ವಹಿವಾಟು ಮಾಡುವ – ಸಹಕಾರಿ ಬ್ಯಾಂಕುಗಳು ಈ ತಿದ್ದುಪಡಿಯಿಂದ ಒಂದೇ ಏಟಿಗೆ ಕೇಂದ್ರ ಸರಕಾರ ಮತ್ತು ರಿಜರ್ವ್ ಬ್ಯಾಂಕಿನ ನಿಯಂತ್ರಣಕ್ಕೆ ಬರುತ್ತವೆ. ಇವೆಲ್ಲವನ್ನು ಖಾಸಗೀಕರಣಕ್ಕೆ ಒಳಪಡಿಸುವುದರ ಮೂಲಕ ಭಾರೀ ಪ್ರಮಾಣದ ಬಂಡವಾಳವನ್ನು ಖಾಸಗಿ ಕುಳಗಳ ನಿಯಂತ್ರಣಕ್ಕೆ ಒಳಪಡಿಸುವುದು ಇದರ ಉದ್ದೇಶ. ಅದೇ ಸಮಯದಲ್ಲಿ ಈ ಬಂಡವಾಳವನ್ನು ಕೇರಳದ ಮೇಲ್ಪಂಕ್ತಿಯನ್ನು ಅನುಸರಿಸಿ ಇನ್ನಷ್ಟು ಹೆಚ್ಚು ರಾಜ್ಯ ಸರಕಾರಗಳು ಬಳಸದಂತೆ ತಡೆಯುವುದು ಸಹ ಈ ಸುಗ್ರೀವಾಜ್ಞೆಯ ಪ್ರಮುಖ ಉದ್ದೇಶವಿದ್ದಂತೆ ಕಾಣುತ್ತದೆ. ಕೇಂದ್ರ ಸರಕಾರ ಹೇಳುವಂತೆ, ಠೇವಣಿದಾರರ ಹಿತಾಸಕ್ತಿ ರಕ್ಷಿಸುವುದಾಗಲಿ, ಸಹಕಾರಿ ಬ್ಯಾಂಕುಗಳ ನಿರ್ವಹಣೆಯನ್ನು ವೃತ್ತಿಪರಗೊಳಿಸಿ ಉತ್ತಮ ಪಡಿಸಿ ಅವುಗಳನ್ನು ಬಲಗೊಳಿಸುವುದಾಗಲಿ ಈ ಸುಗ್ರೀವಾಜ್ಞೆಯ ಉದ್ದೇಶ ಅಲ್ಲ. ಅದು ನಿಜವಾದ ಉದ್ದೇಶವಾಗಿದ್ದರೆ ಇಂತಹ ಗಡಿಬಿಡಿಯಲ್ಲಿ ಸುಗ್ರೀವಾಜ್ಞೆಯನ್ನು ಹೊರಡಿಸುವ ಅಗತ್ಯವಿರಲಿಲ್ಲ. ರಾಜ್ಯ ಸರಕಾರಗಳ ಜತೆ ಚರ್ಚಿಸಿ ತರಬಹುದಿತ್ತು.

ಹೀಗೆ ರಾಜ್ಯ ಸರ್ಕಾರಗಳ ಮೇಲೆ ಸವಾರಿ ಮಾಡುವ ಒಕ್ಕೂಟ ವ್ಯವಸ್ಥೆಗೆ ವಿರೋಧವಾಗಿರುವ, ಖಾಸಗೀಕರಣಕ್ಕೆ ದಾರಿ ಮಾಡಲು ಹೊರಟಿರುವ ಈ ತಿದ್ದುಪಡಿಗೆ "ರಿಜರ್ವ್ ಬ್ಯಾಂಕಿನ ನಿಯಂತ್ರಣದಲ್ಲಿ ಠೇವಣಿದಾರರ ರಕ್ಷಣೆ" ಎಂಬ ಆಕರ್ಷಕವಾದ ಸ್ಲೋಗನ್ ನೀಡಲಾಗಿದೆ. ಇತ್ತೀಚೆಗೆ ಬೆಂಗಳೂರಿನಲ್ಲಿ ಶ್ರೀ ಗುರುರಾಘವೇಂದ್ರ ಸಹಕಾರಿ ಬ್ಯಾಂಕ್ ವಿಫಲವಾಗಿ, ಅಲ್ಲಿನ ಠೇವಣಿದಾರರು ಸಂಕಷ್ಟಕ್ಕೀಡಾಗಿರುವಂತಹ ಸಂಧರ್ಭದಲ್ಲಿ ಸರ್ಕಾರದ ಘೋಷಣೆ ಜನಾಕರ್ಷಣೆ ಪಡೆಯುವುದರಲ್ಲಿ ಸಂದೇಹವೇ ಇಲ್ಲ. ಆದರೆ ಈ ಕಾನೂನು ತಿದ್ದುಪಡಿಯ ಹಿಂದಿನ ಕಾರ್ಯಸೂಚಿಯನ್ನು ಜನರ ಮುಂದೆ ವಿವರಿಸಿ ಈ ತಿದ್ದುಪಡಿಯನ್ನು ಹಿಮ್ಮೆಟ್ಟಿಸುವಂತಹ ಜನಾಭಿಪ್ರಾಯವನ್ನು ರೂಪಿಸುವುದು ಇಂದಿನ ತುರ್ತು ಅಗತ್ಯ.

JANASHAKTHI KANNADA VARA PATRIKE JULY 27-August 2, 2020 Price: Rs. 10/- Date of Publication: 24 JULY 2020 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283

ರೈತ-ವಿರೋಧಿ, ಕಾರ್ಮಿಕ-ವಿರೋಧಿ ಧೋರಣೆಗಳಿಗೆ ರೈತ-ಕಾರ್ಮಿಕ-ಕೃಷಿ ಕೂಲಿಕಾರರ ದೇಶವ್ಯಾಪಿ ಜಂಟಿ ಪ್ರತಿಭಟನೆ



















JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**